ಬೀದರ ▪ ಕಲಬುರಗಿ ▪ ಯಾದಗಿರಿ ▪ ರಾಯಚೂರ ▪ ಕೊಪ್ಪಳ ▪ ಬಳ್ಳಾರಿ ▪ ಬಾಗಲಕೋಟೆ ▪ ವಿಜಯಪೂರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ
Postal Registration No :BDR/ 054/2024-2026 ▪ Email:mallammanudi@gmail.com

# ಮಲ್ಲಮ್ಮ ನುಡಿ

MALLAMMA NUDI REGIONAL NEWSPAPER
ಸಂಪಾದಕರು:ರಮೇಶರೆಡ್ಡಿ
ಪ್ರಾದೇಶಿಕ ಕನ್ನಡ ದಿನಪತ್ರಿಕೆ
ಮೊ.9448604450

VOLUME-ಸಂಪುಟ:12 | ISSUE- ಸಂಚಿಕೆ: 328 | PAGE- ಪುಟ 8 | ಶನಿವಾರ – 28-12-2024, ಬೀದರ | RNI NO:KARKAN/2011/48371 | RS.ಬೆಲೆ 2/-

## ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನ ಪತ್ರಿಕೆ ಈಗ ಡಿಜಿಟಲೀಕರಣಗೊಂಡಿದೆ..

ಪ್ರೀಯ ಓದುಗರೇ.......

ಜಾಹಿರಾತುದಾರರೇ...

ತಮ್ಮೆಲ್ಲರ ಒತ್ತಾಸೆಯಂತೆ ನಿಮ್ಮ "ಮಲ್ಲಮ್ಮ ನುಡಿ" ಪ್ರಾದೇಶಿಕ ಕನ್ನಡ ದಿನ ಪತ್ರಿಕೆ ಈಗ ಡಿಜಿಟಲೀಕರಣಗೊಂಡಿದೆ ಎಂಬ ವಿಷಯ ತಿಳಿಸಲು ಹರ್ಷಿಸುತ್ತೇನೆ. ಹನ್ನೆರಡು ವಸಂತಗಳನ್ನು ಯಶಸ್ವಿಯಾಗಿ ಪೂರೈಸಿ, ಹದಿಮೂರನೇ ವಸಂತಕ್ಕೆ ಕಾಲಿಡುತ್ತಿರುವ ಈ ಸುಸಂದರ್ಬದಲ್ಲಿ, ರಾಜ್ಯವೇ ಅಲ್ಲದೇ ದೇಶದ ವಿವಿಧಡೆಗಳಿಂದ ಸಹಕಾರ ದೊರೆತ ಹಿನ್ನಲೆಯಲ್ಲಿ ಪತ್ರಿಕೆಯನ್ನು ಡಿಜಿಟಲೀಕರಣಗೊಳಿಸಿ ನೂತನ ವೆಬ್‌ಸೈಟ್ ಲಾಂಚ್ ಮಾಡುವ ಮೂಲಕ onlineನಲ್ಲಿ ಪತ್ರಿಕೆ ವೀಕ್ಷಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಈಗ ಪತ್ರಿಕೆಯನ್ನು ನೈಜ ಸುದ್ದಿಯೊಂದಿಗೆ ಹೊಸ ರೂಪದಲ್ಲಿ ನಿಮ್ಮ ಮುಂದಿಡುವ ಪ್ರಯತ್ನ ಮಾಡಲಾಗಿದೆ. ನಮ್ಮ ಈ ಪ್ರಯತ್ನಕ್ಕೆ. ಓದುಗರು, ಚಂದಾದಾರರು, ಹಾಗೂ ಜಾಹೀರಾತುದಾರರಾದ ತಾವುಗಳು ನಿಮ್ಮ ಮನೆಯ ಮಗನಂತೆ ತಮ್ಮ ಪ್ರೋತ್ಸಾಹ ವನ್ನು ಎಂದಿನಂತೆ ನೀಡುವಿರೆಂದು ನಿರೀಕ್ಷಿಸುತ್ತೇವೆ.



ಇಂತಿ
ರಮೇಶರಡ್ಡಿ
ಸಂಪಾದಕ

www.mallammanudi.in

# ಮನಮೋಹನ್ ಸಿಂಗ್ ಅತ್ಯಂತ ಪ್ರಾಮಾಣಿಕ ರಾಜಕಾರಣಿ

## ಸಿಎಂ ಸಿದ್ದರಾಮಯ್ಯ ಬಣ್ಣನೆ

ಮಲ್ಲಮ್ಮ ನುಡಿ ವಾರ್ತೆ

ಬೆಳಗಾವಿ, ಡಿ.27– ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅತ್ಯಂತ ಪ್ರಾಮಾಣಿಕ ರಾಜಕಾರಣಿ, 10 ವರ್ಷ ಪ್ರಧಾನಿಯಾಗಿದ್ದ ಅವಧಿಯಲ್ಲಿ ಉತ್ತಮ ಆಡಳಿತ ನೀಡಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ನಿನ್ನೆ ರಾತ್ರಿ ನಿಧನರಾಗಿದ್ದಾರೆ. ಅವರಿಗೆ 92 ವರ್ಷಗಳಾಗಿತ್ತು. ಅವರ ಬದುಕನ್ನು ಪವಾಡದ ರೀತಿ ನೋಡಬಹುದಾಗಿದೆ. ಇವತ್ತಿನ ಪಾಕಿಸ್ತಾನದ ಕುಗ್ರಾಮವೊಂದರಲ್ಲಿ ಜನಿಸಿದ್ದ ಅವರು,

ಅಲ್ಲಿಂದ ದೇಶ ಹಾಗೂ ಜಗತ್ತಿನಲ್ಲೆ ಖ್ಯಾತ, ಶ್ರೇಷ್ಠ ಅರ್ಥ ಶಾಸ್ತ್ರಜ್ಞರಾಗಿ ಬೆಳೆದರು ಎಂದರು.

ಪಿ.ವಿ.ನರಸಿಂಹರಾವ್ ಪ್ರಧಾನಿಯಾಗಿದ್ದಾಗ ಐದು ವರ್ಷಗಳ ಕಾಲ ದೇಶದ ಆರ್ಥಿಕ ಸಲಹೆಗಾರರಾಗಿದ್ದರು. ಉದಾರೀಕರಣ ಹಾಗೂ ಖಾಸಗೀಕರಣದ ಮೂಲ ಭಾರತದ ಆರ್ಥಿಕತೆಯನ್ನು ಜಾಗತಿ-ಕತೆಗೆ ಮುಕ್ತವಾಗಿಸಿದರು. ಆ ನಿರ್ಧಾರಗಳಿಂದ ದೇಶದ ಆರ್ಥಿಕ ಬಿಕ್ಕಟ್ಟು ನಿವಾರಣೆಯಾಯಿತು ಎಂದು ವಿಶ್ಲೇಷಿಸಿದರು.



ಅದರ ನಂತರ 2004ರಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಗಳಿಸಿದಾಗ ಸೋನಿಯಾ ಗಾಂಧಿ ಪ್ರಧಾನಿಯಾಗಲು ನಿರಾಕರಿಸಿದರು. ಆ ವೇಳೆ ಮನಮೋಹನ್ ಸಿಂಗ್‌ರನ್ನು ಪ್ರಧಾನಮಂತ್ರಿಯಾಗಿ ಆಯ್ಕೆ ಮಾಡಲಾಗುತ್ತದೆ. 10 ವರ್ಷಗಳ ಕಾಲ ದೇಶದ ಅಧಿಕಾರದ ಚುಕ್ಕಾಣಿ ಹಿಡಿದು ಪ್ರಧಾನಿಯಾಗಿ ದೇಶವನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಮೇಲೆತ್ತಲು ಯತ್ನಿಸಿದ್ದರು ಎಂದರು.

ದೇಶ ಕಂಡ ಪ್ರಾಮಾಣಿಕರಲ್ಲಿ ಮನಮೋಹನ್ ಸಿಂಗ್ ಕೂಡ ಒಬ್ಬರು. ರಾಜಕಾರಣದಲ್ಲಿ ಪ್ರಾಮಾಣಿಕತೆ ಕಾಣುವುದು ಕಷ್ಟ. ಇವರು ಹತ್ತು ವರ್ಷವೂ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದರು. ದೇಶದ ಆರ್ಥಿಕತೆ ಮೇಲೆ ದೊಡ್ಡ ಪ್ರಭಾವ ಬಿಟ್ಟು ಹೋಗಿದ್ದಾರೆ. ಅವರ ಬದುಕು ಮತ್ತು ಆರ್ಥಿಕವಾಗಿ ಕೈಗೊಂಡ ನಿರ್ಣಯಗಳು ನಮೆಲ್ಲರಿಗೂ ಪ್ರೇರಣೆ ಮತ್ತು ಸ್ಪೂರ್ತಿಯಾಗಿದೆ. ಪ್ರಧಾನಿಯಾಗಿದ್ದೇನೆ ಎಂಬ ಕಾರಣಕ್ಕೆ ಎಂದೂ ಅಧಿಕಾರದ ಮದದಿಂದ ನಡೆದುಕೊಂಡಿರಲಿಲ್ಲ. ಅತ್ಯಂತ ಸರಳ, ಸಂಭಾವಿತ ರಾಜಕಾರಣಿ. ಅತ್ಯಂತ ಗೌರನ್ವಿತ ವ್ಯಕ್ತಿ ಎಂದು ಕೊಂಡಾಡಿದರು.

ಆಹಾರ ಭದ್ರತೆ ಕಾಯ್ದೆ ಜಾರಿಗೆ ತಂದವರು ಮನಮೋಹನ್ ಸಿಂಗ್. ದೇಶದಲ್ಲಿ ಬಡತನ ಇದೆ, ಎಲ್ಲರಿಗೂ ಮೂರು ರೂಪಾಯಿಗೆ ಅಕ್ಕಿ ಸಿಗಬೇಕು ಎಂಬ ಉದ್ದೇಶದಿಂದ ಕಾಯ್ದೆ ಜಾರಿಗೆತಂದರು. ಅದಕ್ಕೂಮುನ್ನಾ ತಾವು ಒಂದು ರೂಪಾಯಿಗೆ ಅಕ್ಕಿ ನೀಡುವ ಕಾರ್ಯಕ್ರಮ ಜಾರಿ ಮಾಡಿದ್ದು, ಆಹಾರ ಭದ್ರತೆ

(2ನೇ ಪುಟ ನೋಡಿ...)

ಭಾರತದ ಅರ್ಥವ್ಯವಸ್ಥೆಯನ್ನು ಬಲಪಡಿಸಿದ

## ಧೀಮಂತ ನಾಯಕ ಮನಮೋಹನ ಸಿಂಗ್ : ಬಿ.ಜಿ. ಶೆಟಕಾರ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 27 :– ಸಂಕಷ್ಟದಲ್ಲಿದ್ದ ಭಾರತದ ಅರ್ಥವ್ಯವಸ್ಥೆಯನ್ನು ಬಲಪಡಿಸಿದ ಧೀಮಂತ ನಾಯಕ ಮನಮೋಹನ ಸಿಂಗ್ ಎಂದು ಬೀದರ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ, ಅಧ್ಯಕ್ಷರಾದ ಬಿ.ಜಿ. ಶೆಟಕಾರ ನುಡಿದರು. ಅವರು ಬೀದರ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ, ಆಯೋಜಿಸಿದ ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಶ್ರದ್ಧಾಂಜಲಿ ಸಭೆಯನ್ನುದ್ದೇಶಿಸಿ ಮಾತನಾಡುತ್ತ ಮನಮೋಹನ ಸಿಂಗ್ ಅವರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಹಲವಾರು ಅಭಿವೃದ್ಧಿಪರ ಕಾರ್ಯ ಮಾಡಿದ್ದು ಅದರಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ, ಮಾಹಿತಿ ಹಕ್ಕು ಕಾಯ್ದೆ, ಉಚಿತ ಮತ್ತು ಕಡ್ಡಾಯ ಶಿಕ್ಷಣ, ಮಕ್ಕಳ ಹಕ್ಕು ಕಾಯ್ದೆ ಸೇರಿ ಹಲವಾರು ಮಹತ್ವದ ಕಾಯ್ದೆಗಳು ಜಾರಿಗೆ ಬಂದಿದ್ದವು. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಮತ್ತು ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ (ಆಧಾರ್) ಉಪಕ್ರಮಗಳು ಅವರ ಸರ್ಕಾರದ ಅವಧಿಯಲ್ಲೇ ಜಾರಿಗೆ ಬಂದಿದ್ದವು.

ಅವರ ವಿದೇಶಾಂಗ ನೀತಿಯಿಂದ ಅಮೆರಿಕ, ಜಪಾನನಂತಹ ಪ್ರಬಲ ದೇಶಗಳೊಂದಿಗೆ ಭಾರತದ ಸಂಬಂಧ ಬಲಗೊಂಡಿದ್ದು ಭಾರತ-ಅಮೆರಿಕ ನಾಗರಿಕ ಪರಮಾಣು ಒಪ್ಪಂದದ ಮಾತುಕತೆಯಲ್ಲಿ ಕೂಡ ಅವರು ನಿರ್ಣಾಯಕ ಪಾತ್ರ ವಹಿಸಿದ್ದರು. ಆರ್ಥಿಕ ಬೆಳವಣಿಗೆ, ಸಾಮಾಜಿಕ ಕಲ್ಯಾಣ ಮತ್ತು ಅಂತಾರಾಷ್ಟ್ರೀಯ ಸಹಕಾರವನ್ನು ಉತ್ತೇಜಿಸಲು

(2ನೇ ಪುಟ ನೋಡಿ...)

ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ನಿಧನಕ್ಕೆ

## ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತೀವ್ರ ಸಂತಾಪ

ಮಲ್ಲಮ್ಮನುಡಿ ವಾರ್ತೆ



ಬೆಂಗಳೂರು,ಡಿಸೆಂಬರ್ 27–ವಿಶ್ವ ಕಂಡ ಶ್ರೇಷ್ಠ ಆರ್ಥಿಕ ತಜ್ಞ, ಉದಾರ ಆರ್ಥಿಕನೀತಿಯ ಹರಿಕಾರ ಹಾಗೂ ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ನಿಧನಕ್ಕೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತೀವ್ರಸಂತಾಪ ವ್ಯಕ್ತಪಡಿಸಿದ್ದಾರೆ.

ಶೋಕ ಸಂದೇಶದಲ್ಲಿ ಅವರು, ದೇಶದ ಪ್ರಧಾನಿಯಾಗಿ 2004ರಿಂದ 2014ರವರೆಗೆ ದೇಶವನ್ನು ಮುನ್ನಡೆಸಿದ್ದ ಮನಮೋಹನ್ ಸಿಂಗ್, ಮಾಜಿ ಪ್ರಧಾನಿ ಜವಾಹರ್ ಲಾಲ್ ನೆಹರು ಹಾಗೂ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರ ನಂತರ ಅತಿಹೆಚ್ಚು ಅವಧಿಗೆ ಪ್ರಧಾನಿಯಾಗಿ ಕೆಲಸ ನಿರ್ವಹಿಸಿದ ಹಿರಿಮೆ ಹೊಂದಿದ್ದರು,

ಹಣದುಬ್ಬರ ನಿಯಂತ್ರಣಕ್ಕೆ ಸಾಕಷ್ಟು ಶ್ರಮಿಸಿದ್ದ ಮನಮೋಹನ್ ಸಿಂಗ್, ಆಹಾರ ಹಕ್ಕು ಕಾಯ್ದೆ, ಆರ್ ಟಿ ಐ ಕಾಯ್ದೆ, ಸರ್ವ ಶಿಕ್ಷಣ ಅಭಿಯಾನ, ಮನ್ರೇಗಾ ಯೋಜನೆ, ಕಡ್ಡಾಯ ಶಿಕ್ಷಣವನ್ನು ಮೂಲಭೂತಹಕ್ಕನ್ನಾಗಿಸಿದ್ದು ಸೇರಿದಂತೆ ಹಲವು ಕ್ರಾಂತಿ-ಕಾರಿ ಯೋಜನೆಗಳನ್ನು ಜಾರಿಗೊಳಿಸಿ ದೇಶದ ಸರ್ವಾಂಗೀಣ ಅಭ್ಯುದಯಕ್ಕೆ ಶ್ರಮಿಸಿದ್ದ ಶ್ರೇಷ್ಠರಾಜನೀತಿಜ್ಞ ಎಂದು ಹೊರಟ್ಟಿ ಬಣ್ಣಿಸಿದ್ದಾರೆ.

ಸರಳ ಸಜ್ಜನಿಕೆಯ ವ್ಯಕ್ತಿತ್ವ ಹೊಂದಿ, ಮಿತಭಾಷಿಯಾಗಿದ್ದ ಡಾ.ಮನಮೋಹನ್ ಸಿಂಗ್, ಹಲವಾರು ಸಂದರ್ಭದಲ್ಲಿ ದೇಶದಲ್ಲಿ ಎದುರಾಗಿದ್ದ ಆರ್ಥಿಕ ಸಂಕಷ್ಟಗಳಿಗೆ ಸೂಕ್ತ ಪರಿಹಾರ ಕಂಡುಹಿಡಿದ ನವಭಾರತದ ನಿರ್ಮಾತೃ ಎಂದರೇ ಅತಿಶಯೋಕ್ತಿಯಾಗಲಾರದು ಎಂದಿರುವ ಬಸವರಾಜ ಹೊರಟ್ಟಿ, ಡಾ.ಸಿಂಗ್ ಅವರ ನಿಧನದಿಂದ ಭಾರತ ಶ್ರೇಷ್ಠ ಆರ್ಥಿಕ ತಜ್ಞನನ್ನು ಕಳೆದುಕೊಂಡು ಬಡವಾಗಿದೆ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಹಾಗೂ ಅವರ ಅಪಾರ ಅಭಿಮಾನಿಗಳಿಗೆ ಭಗವಂತ ಕರುಣಿಸಲಿ ಎಂದು ಬಸವರಾಜ ಹೊರಟ್ಟಿ ಪ್ರಾರ್ಥಿಸಿದ್ದಾರೆ.

## ಮರಣಪತ್ರ ಬರೆದಿಟ್ಟು ಗುತ್ತಿಗೆದಾರ ಆತ್ಮಹತ್ಯೆ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 27 :– ಯುವ ಗುತ್ತಿಗೆದಾರ, ಭಾಲ್ಕಿ ತಾಲ್ಲೂಕಿನ ಕಟ್ಟಿತೂಗಾಂವ್ ಗ್ರಾಮದ ನಿವಾಸಿ ಸಿವಿಲ್ ಎಂಜಿನಿಯರ್ ಸಚಿನ್ ಮಾನಪ್ಪ ಪಾಂಚಾಳ್ (26) ನಗರದ ಬೀದರ್–ಹೈದರಾಬಾದ್ ರೈಲು ಮಾರ್ಗದ ಹಳಿಯಲ್ಲಿ ಗುರುವಾರ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಆಪ್ತ, ಕಲಬುರಗಿ ಕಾಂಗ್ರೆಸ್ ಮುಖಂಡ ರಾಜು ಕಪನೂರ ಸೇರಿ ಎಂಟು ಮಂದಿ ಹಣಕ್ಕೆ ಬೇಡಿಕೆ ಇಟ್ಟು ಕೊಲೆ ಬೆದರಿಕೆ ಹಾಕಿದ್ದರಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಅವರು ಡೆತ್‌ನೋಟ್ ಬರೆದಿಟ್ಟಿದ್ದಾರೆ.

ಮೃತ ಗುತ್ತಿಗೆದಾರ. ರೈಲು ಹಳಿ ಮೇಲೆ ಮಲಗಿ ಜೀವ ಬಿಟ್ಟಿರುವುದರಿಂದ ಅವರ ರುಂಡ ಬೇರ್ಪಟ್ಟಿತ್ತು. ದೇಹದ ಭಾಗಗಳು ಛಿದ್ರಗೊಂಡಿದ್ದವು.

ವಿಷಯ ತಿಳಿದು ಸ್ಥಳಕ್ಕೆ ಬಂದ ಕುಟುಂಬದ ಸದಸ್ಯರ



ಆಕ್ರಂದನ ಮುಗಿಲು ಮುಟ್ಟಿತ್ತು. ಘಟನೆಗೆ ಕಾರಣರಾದವರನ್ನು ಸ್ಥಳಕ್ಕೆ ಕರೆಸುವಂತೆ ಆಗ್ರಹಿಸಿ ಪಟ್ಟುಹಿಡಿದರು. ಮೃತದೇಹವನ್ನು ಸಾಗಿಸಲು ವಿರೋಧ ವ್ಯಕ್ತಪಡಿಸಿದರು. ಪೊಲೀಸರು ಅವರನ್ನು ತಡೆದು, ಬ್ರಿಮ್ಸ್‌ಗೆ ಮೃತದೇಹ ಸಾಗಿಸಿದರು. ಬೀದರ್ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಚಿನ್ ಅವರ ಸಹೋದರಿ ಸವಿತಾ ಅವರು ನೀಡಿರುವ ದೂರು ಆಧರಿಸಿ ರಾಜು ಕಪನೂರ ಸೇರಿದಂತೆ ಒಂಬತ್ತು ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

(2ನೇ ಪುಟ ನೋಡಿ...)

## ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರ ನಿಧನಕ್ಕೆ ಮಾಜಿ ಸಚಿವ ಪಾಟೀಲ್ ಸಂತಾಪ

ಮಲ್ಲಮ್ಮ ನುಡಿ ವಾರ್ತೆ



ಹುಮನಾಬಾದ: ಭಾರತ ದೇಶದ ಆರ್ಥಿಕ ಅಭಿವೃದ್ಧಿಯ ಹರಿಕಾರ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರ ನಿಧನದ ಸುದ್ದಿ ತಿಳಿದು ತೀವ್ರ ದುಃಖವಾಯಿತು. 2004 ರಿಂದ2009 ಹಾಗೂ 2009 ರಿಂದ 2014 ರ ವರೆಗೆ ಹತ್ತು ವರ್ಷಗಳ ಕಾಲ ದೇಶದ ಪ್ರಧಾನಿಯಾಗಿ ಯಶಸ್ವಿ ಆಡಳಿತ ನಡೆಸಿದ್ದರು.

ರಿಸರ್ವ್ ಬ್ಯಾಂಕ್ ಗವರ್ನರ್ ಆಗಿ ದೇಶದ ಹಣಕಾಸು ಸಚಿವರಾಗಿ ಆರ್ಥಿಕ ಸುಧಾರಣೆಯ ಹರಿಕಾರಾಗಿದ್ದರು. ಅರ್ಥಶಾಸ್ತ್ರದ ಬಗ್ಗೆ ಅಪಾರ ಜ್ಞಾನ ಹೊಂದಿದ್ದ ಅವರು ದೇಶದ ಆರ್ಥಿಕತೆಗೆ ಹೆಚ್ಚಿನ ಒತ್ತು ನೀಡಿದ್ದರು. ಜಾಗತೀಕರಣ ಹಾಗೂ ಉದಾರೀಕರಣದ ನೀತಿಗಳನ್ನು ಜಾರಿಗೆ ತರುವ ಮೂಲಕ ಭಾರತದ ಅರ್ಥ ವ್ಯವಸ್ಥೆಗೆ ಹೊಸ ದಿಕ್ಕು ತೋರಿಸಿದ ಕೀರ್ತಿ ಮನಮೋಹನ್ ಸಿಂಗ್ ಅವರಿಗೆ ಸಲ್ಲುತ್ತದೆ. ಅವರ ಅಧಿಕಾರಾವಧಿಯಲ್ಲಿ ಅನೇಕ ಮಹತ್ವದ ಯೋಜನೆಗಳನ್ನ ಹಾಗೂ ಆರ್ಥಿಕ ಸುಧಾರಣೆಗಳನ್ನ ಜಾರಿಗೆ ತಂದರು. ಡಾ ಮನಮೋಹನ್ ಸಿಂಗ್ ಅವರ ಸಾಧನೆ ಹಾಗೂ ಕೊಡುಗೆ ದೇಶ ಎಂದೂ ಮರೆಯಲು ಸಾಧ್ಯವಿಲ್ಲ. ಅವರ ನಿಧನದಿಂದ ದೇಶ ಶ್ರೇಷ್ಠ ಆರ್ಥಿಕ ತಜ್ಞನನ್ನು ಕಳೆದುಕೊಂಡಂತಾಗಿದೆ.

ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ, ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಹಾಗೂ ಅವರ ಅಭಿಮಾನಿಗಳಿಗೆ ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಮಾಜಿ ಸಚಿವ ರಾಜಶೇಖರ ಬಿ.ಪಾಟೀಲ ಸಂತಾಪದಲ್ಲಿ ಸೂಚಿಸಿದ್ದಾರೆ.

ಸ್ಮಾರಕ ನಿರ್ಮಿಸಬಹುದಾದ ಸ್ಥಳದಲ್ಲಿ ಮನಮೋಹನ್ ಸಿಂಗ್

## ಅಂತ್ಯ ಸಂಸ್ಕಾರ ನಡೆಸಿ: ಪ್ರಧಾನಿ ಮೋದಿಗೆ ಖರ್ಗೆ ಒತ್ತಾಯ



ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ: ಸ್ಮಾರಕ ನಿರ್ಮಿಸಬಹುದಾದ ಸ್ಥಳದಲ್ಲಿ ಮನಮೋಹನ್ ಸಿಂಗ್ ಅಂತ್ಯ ಸಂಸ್ಕಾರ ನಡೆಸುವಂತೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಶುಕ್ರವಾರ ಒತ್ತಾಯಿಸಿದ್ದಾರೆ.

ಎರಡು ಅವಧಿಗೆ ದೇಶದ ಪ್ರಧಾನಿಯಾಗಿದ್ದ ಸಿಂಗ್ ಅವರ ಸ್ಮಾರಕ ಸ್ಥಾಪಿಸುವ ಕುರಿತು ಮೋದಿ ಮಾತನಾಡಿದ ಬಳಿಕ ಅವರಿಗೆ ಪತ್ರ ಬರೆದಿರುವ ಖರ್ಗೆ, ನಾಳೆ ಮನಮೋಹನ್ ಸಿಂಗ್ ಅಂತ್ಯಸಂಸ್ಕಾರ ನಡೆಯಲಿರುವ ಸ್ಥಳ ದೇಶದ ಹೆಮ್ಮೆಯ ಪುತ್ರನ ಸ್ಮಾರಕದ ಪವಿತ್ರ ಸ್ಥಳವಾಗಿಸುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಇಂದು ಬೆಳಗ್ಗೆ ದೂರವಾಣಿಯಲ್ಲಿ ಮಾತುಕತೆ ನಡೆಸಿರುವುದಾಗಿ ತಿಳಿಸಿದ್ದಾರೆ.

ರಾಷ್ಟ್ರನಾಯಕರು ಮತ್ತು ಮಾಜಿ ಪ್ರಧಾನಿಗಳ ಅಂತ್ಯಕ್ರಿಯೆಯ ಸ್ಥಳದಲ್ಲಿಯೇ ಸ್ಮಾರಕ ನಿರ್ಮಿಸುವ ಸಂಪ್ರದಾಯವಿದೆ. ಅದರಂತೆ ಸ್ಮಾರಕ ನಿರ್ಮಿಸಬಹುದಾದ ಸ್ಥಳದಲ್ಲಿಯೇ ಮನಮೋಹನ್ ಸಿಂಗ್ ಅಂತ್ಯ ಸಂಸ್ಕಾರ ನಡೆಯಬೇಕು ಎಂದು ಖರ್ಗೆ ಮನವಿ ಮಾಡಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಆಗಿ, ಭಾರತ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ಸೇರಿದಂತೆ ಇತರ ಅನೇಕ ಕೆಲಸಗಳನ್ನು ನಿಬಾಯಿಸಿ ದೇಶದ ಆರ್ಥಿಕ ಮತ್ತು ಹಣಕಾಸಿನ ವಿಷಯಗಳ ಅಪಾರ ಪಾಂಡಿತ್ಯ ಹೊಂದಿದ್ದ ಡಾ. ಮನ್ ಮೋಹನ್ ಸಿಂಗ್ ಅವರ ಬಗ್ಗೆ ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಸೇರಿದಂತೆ ಹಲವು ವಿಶ್ವ ನಾಯಕರು ಗೌರವಿಸುತ್ತಿದ್ದರು ಎಂದಿದ್ದಾರೆ.

ಜಾಗತಿಕ ಆರ್ಥಿಕ ಆರ್ಥಿಕ ಬಿಕ್ಕಟ್ಟನ್ನು ತಗ್ಗಿಸುವಲ್ಲಿ ಸಿಂಗ್ ಅವರ ಸಲಹೆ, ನಾಯಕತ್ವ ಮತ್ತು ಕೊಡುಗೆ ಪ್ರಮುಖವಾದದ್ದು, ರಾಷ್ಟ್ರ ತೀವ್ರ ಆರ್ಥಿಕ ಬಿಕ್ಕಟ್ಟಿನಲ್ಲಿದ್ದಾಗ, ಮಾಜಿ ಪ್ರಧಾನಿ ಪಿ ವಿ ನರಸಿಂಹರಾವ್ ಅವರೊಂದಿಗೆ ಡಾ.ಮನಮೋಹನ್ ಸಿಂಗ್ ಅವರು ದೇಶವನ್ನು ಬಿಕ್ಕಟ್ಟಿನಿಂದ ಹೊರತೆಗೆದು ಆರ್ಥಿಕ ಸಮೃದ್ಧಿ ಮತ್ತು ಸ್ಥಿರತೆಯತ್ತ ಕೊಂಡೊಯ್ದಿದ್ದರು ಎಂದು ಪತ್ರದಲ್ಲಿ ಖರ್ಗೆ ತಿಳಿಸಿದ್ದಾರೆ.

# ಮನಮೋಹನ್ ಸಿಂಗ್ ಅವರ ಗುಣಗಾನ ಮಾಡಿದ ಪ್ರಧಾನಿ ಮೋದಿ

ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ,ಡಿ.27–ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರಿಗೆ ಗೌರವಪೂರ್ಣ ವಿದಾಯ ಹೇಳಿದ ಪ್ರಧಾನಿ ನರೇಂದ್ರ ಮೋದಿ ಅವರು ಸರಣಿ ಟ್ವೀಟ್ ಮೂಲಕ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. ಭಾರತವು ತನ್ನ ಅತ್ಯಂತ ಪ್ರತಿಷ್ಠಿತ ನಾಯಕರಲ್ಲಿ ಒಬ್ಬರಾದ ಡಾ. ಮನಮೋಹನ್ ಸಿಂಗ್ ಅವರ ನಷ್ಟಕ್ಕೆ ಶೋಕ ವ್ಯಕ್ತಪಡಿಸುತ್ತದೆ.



ವಿನಮ್ರ ವ್ಯಕ್ತಿತ್ವದಿಂದಲೇ ರಾಜಕಾರಣದಲ್ಲಿ ಅತ್ಯುನ್ನತ ಮಟ್ಟಕ್ಕೆ ಏರಿದವರು ಎಂದು ಗುಣಗಾನ ಮಾಡಿದ್ದಾರೆ. ಗೌರವಾನ್ವಿತ ಅರ್ಥಶಾಸ್ತ್ರಜ್ಞ ಎಂದು ಜಗತ್ತಿನಾದ್ಯಂತ ಹೆಸರು ಮಾಡಿದ್ದರು. ಹಣಕಾಸು ಸಚಿವ ಸೇರಿದಂತೆ ವಿವಿಧ ಸರ್ಕಾರಿ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ ಡಾ. ಸಿಂಗ್, ನಮ ಆರ್ಥಿಕ ನೀತಿಯ ಮೇಲೆ ಬಲವಾದ ಮುದ್ರೆ ಹಾಕಿದರು. ಪ್ರಧಾನಿಯಾಗಿ ಅವರು ಜನರ ಜೀವನವನ್ನು ಸುಧಾರಿಸಲು ವ್ಯಾಪಕ ಪ್ರಯತ್ನಗಳನ್ನು ಮಾಡಿದ್ದರು ಎಂದು ಕಂಬನಿ ಮಿಡಿದಿದ್ದಾರೆ.

ನಾನು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಡಾ. ಮನಮೋಹನ್ ಸಿಂಗ್ ದೇಶದ ಪ್ರಧಾನಿಯಾಗಿದ್ದರು. ಆ ಸಮಯದಲ್ಲಿ ನಾವಿಬ್ಬರೂ ನಿರಂತರ ಸಂವಹನ ನಡೆಸುತ್ತಿದ್ದೆವು. ಆಡಳಿತಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ನಾವು ವ್ಯಾಪಕವಾದ ಚರ್ಚೆ ಮಾಡಿದ್ದೇವೆ. ಅವರ ಬುದ್ಧಿವಂತಿಕೆ ಮತ್ತು ನಮ್ರತೆ ಯಾವಾಗಲೂ ನೆನಪಿನಲ್ಲಿರುತ್ತದೆ. ಎಂದು ಮತ್ತೊಂದು ಟ್ವೀಟ್ನಲ್ಲಿ ಮೋದಿ ತಿಳಿಸಿದ್ದಾರೆ.

ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ

(2ನೇ ಪುಟ ನೋಡಿ...)

ಜ.17 ರಿಂದ ನಡೆಯುವ ಜಾನುವಾರು ಕುಕ್ಕುಟ ಮತ್ತು ಮತ್ಸ್ಯಮೇಳದ ಸದುಪಯೋಗ

## ಸಾರ್ವಜನಿಕರು ಪಡೆದುಕೊಳ್ಳಬೇಕು-ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ

ಮಲ್ಲಮ್ಮ ನುಡಿ ವಾರ್ತೆ

ಬೀದರ, ಡಿಸೆಂಬರ್.27 – ಜನವರಿ.17 ರಿಂದ 19 ರವರೆಗೆ ಪಶುವೈದ್ಯಕೀಯ ಪಶು ಹಾಗೂ ಮೀನುಗರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ನಡೆಯುವ ಜಾನುವಾರು ಕುಕ್ಕುಟ ಮತ್ತು ಮತ್ಸ್ಯಮೇಳ–2025 ದ ಸದುಪಯೋಗವನ್ನು ರೈತರು, ಸಾರ್ವಜನಿಕರು ಪಡೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ತಿಳಿಸಿದರು.

ಅವರು ಗುರುವಾರ ಸಂಜೆ



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪಶುವೈದ್ಯಕೀಯ ವಿಶ್ವವಿದ್ಯಾಲಯದ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈ ಮೇಳದಲ್ಲಿ ಜಾನುವಾರು ಮತ್ತು ಕುಕ್ಕಟ ತಳಿಗಳ ಪ್ರದರ್ಶನ,

(2ನೇ ಪುಟ ನೋಡಿ...)

## ಕ್ಯಾಲೆಂಡರ್ ಬಿಡುಗಡೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಡಿ.27:ಕರುಣೇಶ್ವರ ನಗರದ ಶ್ರೀ ಜೈವೀರ ಹನುಮಾನ ದೇವಸ್ಥಾನದಲ್ಲಿ ಆಯೋಜಿಸಲಾಗಿದ್ದ ಗಾಯತ್ರಿಹೋಮ ಮತ್ತು ಧರ್ಮಸಭೆ ಕಾರ್ಯಕ್ರಮದಲ್ಲಿ ಕೂಡಲಿ ಶೃಂಗೇರಿ ಶ್ರೀ ಶಾರದಾಪೀಠದ ಶ್ರೀ ಅಭಿನವ ಶಂಕರ ಭಾರತೀ ಮಹಾಸ್ವಾಮಿಗಳು ಅಂಬಾಸ್ಮೃತಿ ಪ್ರತಿಷ್ಠಾನದ 2025ನೇ ಸಾಲಿನ ಕ್ಯಾಲೆಂಡರ್‌ನ್ನು ಬಿಡುಗಡೆಗೊಳಿಸಿದರು.

## ಅತಿಥಿ ಉಪನ್ಯಾಸಕರ ಸಂದರ್ಶನ ಡಿ.30 ಮತ್ತು 31ಕ್ಕೆ ನಿಗಧಿ

ಮಲ್ಲಮ್ಮ ನುಡಿ ವಾರ್ತೆ

ಬೀದರ, ಡಿಸೆಂಬರ್.27 – ಬೀದರ ವಿಶ್ವವಿದ್ಯಾಲಯದ ಆವರಣದಲ್ಲಿ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಅತಿಥಿ ಉಪನ್ಯಾಸಕರ ಸಂದರ್ಶನವು ಡಿಸೆಂಬರ್.27 ರಂದು ನಿಗದಿಪಡಿಸಲಾಗಿತ್ತು. ಆದರೆ ಭಾರತ ದೇಶದ ಮಾಜಿ ಪ್ರಧಾನಮಂತ್ರಿಗಳಾದ ಮನಮೋಹನಸಿಂಗ್ ಅವರು ನಿಧನರಾದ ನಿಮಿತ್ಯ ಸಂದರ್ಶನ ದಿನಾಂಕವನ್ನು ಮುಂದೂಡಿ ಡಿಸೆಂಬರ್.30 ರಂದು ಬೆಳಿಗ್ಗೆ 10.30ಕ್ಕೆ ಪ್ರಾಣಿಶಾಸ್ತ್ರ ಹಾಗೂ ಡಿಸೆಂಬರ್.31 ರಂದು ಬೆಳಿಗ್ಗೆ 10 ಗಂಟೆಯಿಂದ ಗಣಿತ, ರಾಸಾಯನಶಾಸ್ತ್ರ, ವಾಣಿಜ್ಯಶಾಸ್ತ್ರ ಹಾಗೂ ರಾಜ್ಯಶಾಸ್ತ್ರ ವಿಷಯಗಳಿಗೆ ಸಂದರ್ಶನವು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಬೀದರ ವಿಶ್ವವಿದ್ಯಾಲಯದ ವೆಬ್‌ಸೈಟ್ https://bidaruniversity.ac.in ನಲ್ಲಿ ವೀಕ್ಷಿಸಬಹುದಾಗಿದೆ ಎಂದು ಬೀದರ ವಿಶ್ವವಿದ್ಯಾಲಯದ ಕುಲಸಚಿವರು (ಆಡಳಿತ) ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಾ.ಮನಮೋಹನ್ ಸಿಂಗ್ ಅವರಿಗೆ ಶೃದ್ಧಾಂಜಲಿ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಡಿ.27: ಮಾಜಿ ಪ್ರಧಾನಮಂತ್ರಿ, ಶ್ರೇಷ್ಠ ಅರ್ಥಶಾಸ್ತ್ರಜ್ಞ ಡಾ.ಮನಮೋಹನ್ ಸಿಂಗ್ ಅವರಿಗೆ ನಗರದ ನ್ಯೂ ರಾಘವೇಂದ್ರ ಕಾಲನಿಯಲ್ಲಿನ 'ಮುತ್ತಾ ಟ್ಯುಟೋರಿಯಲ್ಸ್'ನಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಶುಕ್ರವಾರ ಶೃದ್ಧಾಂಜಲಿ ಸಲ್ಲಿಸಲಾಯಿತು. ಎಚ್.ಬಿ.ಪಾಟೀಲ, ಶಿವಕುಮಾರ ಮುತ್ತಾ, ಡಾ.ಪ್ರಮೋದ ಗುಂಡಗುರ್ತಿ, ಶಿವಯೋಗೆಪ್ಪಾ ಎಸ್.ಬಿರಾದಾರ ಸೇರಿದಂತೆ ಇನ್ನಿತರರಿದ್ದರು.

# ಒಂದನೆ ಪುಟದಿಂದ...

## ಮನಮೋಹನ್ ಸಿಂಗ್ ಅತ್ಯಂತ ಪ್ರಾಮಾಣಿಕ ರಾಜಕಾರಣಿ

ಭದ್ರತೆ ಅನುಷ್ಠಾನಕ್ಕೆ ಬಂದ ಮೇಲೆ ಒಂದು ದರವನ್ನು ತೆಗೆದು ಉಚಿತವಾಗಿ ಅಕ್ಕಿ ನೀಡುವ ನಿರ್ಧಾರ ಮಾಡಿದ್ದೇವು. ಒಂದು ಕುಟುಂಬಕ್ಕೆ ಐದು ಕೆಜಿಯಿಂದ ಏಳು ಕೆಜಿಗೆ ಹೆಚ್ಚಿಸಲಾಯಿತು ಎಂದು ವಿವರಿಸಿದರು.

ಇಂದು ಪ್ರಧಾನಿ ನರೇಂದ್ರ ಮೋದಿಯವರು ಐದು ಕೆಜಿ ಅಕ್ಕಿ ನೀಡಲು ಕಾರಣಕರ್ತರು ಮನಮೋಹನ್ ಸಿಂಗ್ ಎಂದು ಹೇಳಿದರು.ತಾವು ರಾಜ್ಯದಲ್ಲಿ ಅನ್ನಭಾಗ್ಯವನ್ನು ಮುಂದುವರೆಸಲು ಮನಮೋಹನ್ಸಿಂಗ್ ಕಾರಣ. ಅವರ ಅಧಿಕಾರವಧಿಯಲ್ಲಿ ಬಡವರನ್ನು ಗಮನದಲ್ಲಿ ಇಟ್ಟುಕೊಂಡು ಕಾರ್ಯಕ್ರಮಗಳನ್ನು ರೂಪಿಸಿದ್ದರು ಎಂದರು.

ನನ್ನ ಮತ್ತು ಮನಮೋಹನ್ಸಿಂಗ್ ಅವರ ಒಡೆನಾಟ ಉತ್ತಮವಾಗಿತ್ತು. ಎರಡು ಮೂರು ಬಾರಿ ಅವರನ್ನು ಭೇಟಿಯಾಗಿದ್ದೆ. ಪ್ರಧಾನಿಯಾಗಿದ್ದಾಗ ನಾನು ಇಲ್ಲಿ ಮುಖ್ಯಮಂತ್ರಿಯಾಗಿದ್ದೆ. ಅವರು ಮಾಜಿಯಾಗಿದ್ದಾಗ ಬೆಂಗಳೂರಿಗೆ ಕರೆಸಲಾಗಿತ್ತು. ಆ ವೇಳೆ ರಾಜ್ಯದ ಆರ್ಥಿಕತೆ ಬಗ್ಗೆ ಭಾಷಣ ಮಾಡಿದ್ದ ಅವರ 2013ರಿಂದ 2018ರವರೆಗೆ ರಾಜ್ಯದ ಆರ್ಥಿಕತೆ ಚೆನ್ನಾಗಿದೆ.

ಇಲ್ಲಿನ ಕಾರ್ಯಕ್ರಮಗಳು ಜನಪರವಾಗಿವೆ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದ್ದರು ಎಂದರು.

ರಾಜಕೀಯದಲ್ಲಿ ಗೌರವದಿಂದ ಬದುಕಿದ್ದ ವ್ಯಕ್ತಿ ಇಂದು ನಮನ್ನು ಅಗಲಿದ್ದಾರೆ. ಅವರ ಸಾವಿನಿಂದ ದೇಶಕ್ಕೆ ದೊಡ್ಡ ನಷ್ಟವಾಗಿದೆ. ಅವರ ಅಗಲುವಿಕೆಯ ನೋವನ್ನು ಭರಿಸುವ ಶಕ್ತಿ ಅವರ ಕುಟುಂಬ ಹಾಗೂ ಹಿತೈಶಿಗಳಿಗೆ ದೊರೆಯಲಿ ಎಂದು ಹೇಳಿದರು.

# ಮರಣಪತ್ರ ಬರೆದಿಟ್ಟು ಗುತ್ತಿಗೆದಾರ ಆತ್ಮಹತ್ಯೆ

ಕಿರುಕುಳ ಮತ್ತು ಆತ್ಮಹತ್ಯೆಯಿಂದ ಸಹೋದರ ಮೃತಪಟ್ಟಿದ್ದಾನೆ ಎಂದು ಆರೋಪಿಸಿದ್ದಾರೆ.

ಡೆತ್‌ನೋಟ್‌ನಲ್ಲಿ ಏನಿದೆ?:

'ಗುತ್ತಿಗೆ ಪಡೆಯುವ ವಿಚಾರಕ್ಕೆ ಸಂಬಂಧಿಸಿದಂತೆ ರಾಜು ಕಪನೂರ ಮತ್ತು ಅವರ ಗ್ಯಾಂಗ್‌ನವರು ಹಣಕ್ಕೆ ಬೇಡಿಕೆ ಇಟ್ಟು ಜೀವ ಬೆದರಿಕೆ ಹಾಕಿದ್ದರು' ಎಂದು ಸಚಿನ್ ಪಾಂಚಾಳ್ ಅವರ ಕೈಬರಹದ ಡೆತ್‌ನೋಟ್‌ನಲ್ಲಿ ಆರೋಪಿಸಲಾಗಿದೆ. ಸಹೋದರಿ ಕೊಟ್ಟಿರುವ ದೂರಿನಲ್ಲೂ ಇದೇ ವಿಷಯ ಪ್ರಸ್ತಾಪಿಸಿದ್ದಾರೆ.

ಡೆತ್‌ನೋಟ್‌ನಲ್ಲಿ ಸಚಿನ್ ಅವರು ಎಂಟು ಜನರ ಹೆಸರುಗಳನ್ನು ಉಲ್ಲೇಖಿಸಿದರೆ, ಅವರ ಸಹೋದರಿ ಸವಿತಾ ಅವರು ಒಂಬತ್ತು ಜನರ ವಿರುದ್ಧ ದೂರು ಕೊಟ್ಟಿದ್ದಾರೆ.

'ಮಾಜಿ ಕಾರ್ಪೊರೇಟರ್, ಕಲಬುರಗಿ ಕಾಂಗ್ರೆಸ್ ಮುಖಂಡ ರಾಜು ಕಪನೂರ, ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ನಂದಕುಮಾರ ನಾಗಭುಜಂಗೆ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಗೋರಖನಾಥ ಸಜ್ಜನ್, ಪ್ರತಾಪ್ ಧೀರ ಪಾಟೀಲ (ಪಪ್ಪು ಪಾಟೀಲ), ಸೊಲ್ಲಾಪುರದ ಕಾರ್ಪೊರೇಟರ್ ಮನೋಜ್ ಸೆಜವಾಲ್, ಬೆಂಗಳೂರಿನ ಯುನಿಟಿ ಇನ್ಫಾಬಿಲ್ಡ್ ವ್ಯವಸ್ಥಾಪಕ ನಿರ್ದೇಶಕ ವಿಕಾಸ್ ಎಚ್.ಎಂ., ಪ್ರಾಜೆಕ್ಟ್ ಮ್ಯಾನೇಜರ್ ವಿನಯ್ ಟಿ.ಪಿ., ಕಲಬುರಗಿಯ ಪ್ರಥಮ ದರ್ಜೆ ಗುತ್ತಿಗೆದಾರ ರಾಮನಗೌಡ ಪಾಟೀಲ ನನ್ನ ಆತ್ಮಹತ್ಯೆಗೆ ಕಾರಣ' ಎಂದು ಡೆತ್‌ನೋಟ್‌ನಲ್ಲಿ ಆರೋಪಿಸಿದ್ದಾರೆ. ಸಹೋದರಿ ಕೊಟ್ಟಿರುವ ದೂರಿನಲ್ಲಿ ಡೆತ್‌ನೋಟ್‌ನಲ್ಲಿರುವ ಈ ಎಂಟು ಜನರೊಂದಿಗೆ ಸತೀಶ ರತ್ನಾಕರ ಅವರ ಹೆಸರನ್ನೂ ಉಲ್ಲೇಖಿಸಿದ್ದಾರೆ.

'ದುಬಲಗುಂಡಿಯ ಸತೀಶ್ ರತ್ನಾಕರ್ ಎಂಬುವರಿಂದ ರಾಜು ಕಪನೂರ ಅವರ ಪರಿಚವಾಯಿತು. ವಿಕಾಸ್ ಎಚ್.ಎಂ. ಅವರು ಆರ್‌ಡಬ್ಲ್ಯುಎಸ್‌ಎಸ್‌ಡಿಯಲ್ಲಿ ಟೆಂಡರ್ ಹಾಕಿರುತ್ತಾರೆ. ಸುಮಾರು ರೂ.12 ಕೋಟಿ ಟೆಂಡರ್ ಅದಾಗಿತ್ತು. ರಾಜು ಕಪನೂರ ಮಾಡಿಸಿಕೊಡುವುದಾಗಿ ಹೇಳಿರುತ್ತಾರೆ. ಇದಕ್ಕಾಗಿ ಶೇ 5ರಷ್ಟು ಹಣಕ್ಕೆ ಬೇಡಿಕೆ ಇಟ್ಟಿದ್ದರು. ಪ್ರಿಯಾಂಕ್ ಖರ್ಗೆ ಅವರು ನಾನು ಹೇಳಿದ ಮಾತು ದಾಟುವುದಿಲ್ಲ ಎಂದು ಹೇಳಿಕೊಂಡಿರುತ್ತಾರೆ. ಸುಮಾರು ಐದಾರು ಸಲ ಬೆಂಗಳೂರಿಗೆ ಹೋಗಿ ಮಂತ್ರಿಯವರನ್ನೂ ಭೇಟಿಯಾಗಿದ್ದೇವೆ' ಎಂದು ಯುನಿಟಿ ಇನ್ಫಾಬಿಲ್ಡ್‌ನಲ್ಲಿ ಪ್ರಾಜೆಕ್ಟ್ ಎಂಜಿನಿಯರ್ ಆಗಿದ್ದ ಸಚಿನ್ ಪಾಂಚಾಳ್ ಡೆತ್‌ನೋಟ್‌ನಲ್ಲಿ ವಿವರಿಸಿದ್ದಾರೆ.

'ನಾನು ಜೂ ಅಥಾರಿಟಿ ಆಫ್ ಕರ್ನಾಟಕ, ಕಲಬುರಗಿಯಲ್ಲಿ ಸ್ವಂತ ದುಡ್ಡಿನಲ್ಲಿ ಟೆಂಡರ್ ಹಾಕಿದ್ದೆ. ಪಾರ್ಟನರ್ ಆಗಿ ಕೆಲಸ ಮಾಡಿದರೆ ಅದನ್ನು ಮಾಡಿಸಿಕೊಡುವುದಾಗಿ ಹೇಳಿದ್ದಾರೆ. ಆದರೆ, ಕೆಲಸ ಮಾಡಿಕೊಟ್ಟಿಲ್ಲ. ಪ್ರತಾಪ್ ಧೀರ್ ಪಾಟೀಲ ಮತ್ತು ಮನೋಜ್ ಸೆಜವಾಲ್ ಮೂಲಕ ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ. ಆದಕಾರಣ ನಾನು ತಲೆಮರೆಸಿಕೊಂಡೆ. ನನ್ನ ಕುಟುಂಬದವರಿಗೆ ಜೀವ ಬೆದರಿಕೆ ಹಾಕಿ, ಅಟ್ರಾಸಿಟಿ ಕೇಸ್ ಹಾಕುವ ಬೆದರಿಕೆಯೊಡ್ಡಿದ್ದಾರೆ. ಇದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ಇವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಡೆತ್‌ನೋಟ್‌ನಲ್ಲಿ ಬರೆದಿದ್ದಾರೆ.


'ಅಂದೋಲಾ ಸ್ವಾಮೀಜಿ, ಕಲಬುರಗಿ ಬಿಜೆಪಿ ಮುಖಂಡ ಚಂದು ಪಾಟೀಲ, ಮಣಿಕಂಠ ರಾಠೋಡ್ ಹಾಗೂ ಶಾಸಕ ಬಸವರಾಜ ಮತ್ತಿಮಡು ಅವರ ಕೊಲೆಗೆ ಸಂಚು ರೂಪಿಸಿದ್ದಾರೆ' ಎಂದೂ ಸಚಿನ್ ಆರೋಪ ಮಾಡಿದ್ದಾರೆ.

ಪ್ರಿಯಾಂಕ್ ಖರ್ಗೆ ಸಚಿವಮಿಥ್ಯಾರೋಪ ಮಾಡುವುದು ಬಿಜೆಪಿಯವರ ಹಳೆಯ ಅಭ್ಯಾಸ. ಆಧಾರರಹಿತ ಆರೋಪಗಳಿಂದ ನನ್ನನ್ನು ಕುಗ್ಗಿಸುವ ಬಿಜೆಪಿಯವರ ಪ್ರಯತ್ನ ಯಶಸ್ವಿಯಾಗುವುದಿಲ್ಲಸವಿತಾ ಸಚಿನ್ ಸಹೋದರಿನನ್ನ ಸಹೋದರ ಸಚಿನ್ ತನಗಾದ ಅನ್ಯಾಯದ ಬಗ್ಗೆ ಡೆತ್‌ನೋಟ್‌ನಲ್ಲಿ ಎಳೆಎಳೆಯಾಗಿ ಬರೆದಿದ್ದಾನೆ. ಅವನ ಸಾವಿಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು

ರಾಜು ಕಪನೂರ ಏನಂತಾರೆ?

'ಸಚಿನ್ ಪಾಂಚಾಳ್ ಒಂದು ವರ್ಷದಿಂದ ನನಗೆ ಪರಿಚಯ. ಬಿಇ ಸಿವಿಲ್ ಎಂಜಿನಿಯರ್ ಮುಗಿದಿದೆ. ನಾನು ಪ್ರಥಮ ದರ್ಜೆ ಗುತ್ತಿಗೆದಾರ. ನನ್ನ ಬಳಿ ಲೈಸನ್ಸ್ ಇದೆ. ನಾನು ಓಡಾಡಿ ಕೆಲಸ ಮಾಡುತ್ತೇನೆ' ಎಂದು ಹೇಳಿದರು. ಮೊದಲು ಏರ್‌ಪೋರ್ಟ್ ಟೆಂಡರ್ ಹಾಕಿದ್ದೆವು. ಫೇಕ್ ಮಾಡಿದರು. ಆನಂತರ ಕೆಐಎಡಿಬಿ ಟೆಂಡರ್‌ಗೆ ಸಂಬಂಧಿಸಿದಂತೆ ಅವರ ಖಾತೆಗೆ ಹಣ ಹಾಕಿದೆ. ಮೊದಲು ರೂ.65 ಲಕ್ಷ ಖಾತೆಗೆ ಹಾಕಿದೆ. ಬಳಿಕ ರೂ.15 ಲಕ್ಷ ನಗದು ಕೊಟ್ಟಿದ್ದೆ. ಟೆಂಡರ್ ಇಂದು ನಾಳೆ ಆಗುತ್ತದೆ ಎಂದು ಆರೇಳು ತಿಂಗಳು ಸತಾಯಿಸಿದ. ಬೆಂಗಳೂರಿಗೆ ಹೋಗಿ ವಿಚಾರಿಸಿದಾಗ ಟೆಂಡರ್ ಫೇಕ್ ಇರುವುದು ಗೊತ್ತಾಗಿದೆ. ಈ ಸಂಬಂಧ ಸಚಿನ್ ಅವರನ್ನು ಪ್ರಶ್ನಿಸಿದಾಗ ನಮ್ಮ ತಂದೆಯಿಂದ ಹಣ ಕೊಡಿಸುತ್ತೇನೆ ಎಂದಿದ್ದಾನೆ' ಎಂದು ರಾಜು ಕಪನೂರ ಅವರು ವಿಡಿಯೊ ಹೇಳಿಕೆಯಲ್ಲಿ ತಿಳಿಸಿದ್ದಾರೆ. 'ಒಂದೂವರೆ ತಿಂಗಳ ನಂತರ ನಾನು ಸಚಿನ್ ಅವರ ಮನೆಗೆ ಹೋಗಿ ವಿಷಯ ತಿಳಿಸಿದೆ. ಕಾಲಾವಕಾಶ ಕೊಡಬೇಕೆಂದು ಅವರ ಸಹೋದರಿಯರು ಕೇಳಿದರು. ಫೇಸ್‌ಬುಕ್‌ನಲ್ಲಿ ಇಂಥವರಿಂದ ಹಿಂಸೆಯಾಗಿದೆ ಎಂದು ಸಚಿನ್ ಹೇಳಿಕೊಂಡಿದ್ದಾನೆ. ಇದನ್ನು ಗಮನಿಸಿ ನಾನು ಗ್ರಾಮೀಣ ಠಾಣೆಗೆ ಹೋಗಿ ದೂರು ಕೊಟ್ಟಿದ್ದೇನೆ. ನಾನು ಟಾರ್ಚರ್ ಮಾಡಿಲ್ಲ ಬಡ್ಡಿ ವ್ಯವಹಾರ ಮಾಡಿಲ್ಲ. ಲೈಸನ್ಸ್ ಇದೆ ಅನ್ನೋ ಕಾರಣಕ್ಕಾಗಿ ವ್ಯವಹಾರಕ್ಕೆ ಮುಂದಾಗಿದ್ದೆ. ಇದಕ್ಕೆ ಯಾವುದೇ ಬಣ್ಣ ಹಚ್ಚಬೇಕಿಲ್ಲ. ಸತ್ಯಾಸತ್ಯತೆ ಹೊರಬರಲಿ' ಎಂದಿದ್ದಾರೆ.

# 281ನೇ ನಗರ ಸಂಕೀರ್ತನೆ ಯಶಸ್ವಿ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಡಿ.27: ಉತ್ತರಾದಿ ಮಠದ ವಿಶ್ವಮಧ್ವಮಹಾಪರಿಷತ್ತಿನ ಅಂಗಸಂಸ್ಥೆಯಾದ ನಗರದ ಹರಿದಾಸ ಸಾಹಿತ್ಯ ಪ್ರಚಾರ ವಾಹಿನಿಯ 281ನೇ ನಗರ ಸಂಕೀರ್ತನೆ ಕಾರ್ಯಕ್ರಮ ಏಕಾದಶಿ ದಿನವಾದ ಗುರುವಾರ ಸಂಜೆ ನಡೆಯಿತು.

ನಗರದ ಜೇವರ್ಗಿ ಕಾಲೋನಿಯ ಶ್ರೀ ರಾಘವೇಂದ್ರಸ್ವಾಮಿ ಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಪ್ರಸನ್ನ ಮಾರುತಿ ಭಜನಾ ಮಂಡಳಿಯವರಿಂದ ಶ್ರೀ ಲಕ್ಷ್ಮೀಶೋಭಾನ ಹಾಗೂ ಹರಿಕಥಾಮೃತಸಾರದ ಸಾಮೂಹಿಕ ಪಾರಾಯಣ ಜರುಗಿತು. ಪ್ರಚಾರ ವಾಹಿನಿಯ ಅಧ್ಯಕ್ಷರಾದ ಪಂ. ಗೋಪಾಲಾಚಾರ್ಯ ಅಕಮಂಚಿಯವರು ಉಪನ್ಯಾಸ ನೀಡಿದರು. ದಾಸಸಾಹಿತ್ಯ ಚಿಂತಕರಾದ ಶ್ರೀಮತಿ (ಡಾ.) ವಿರಜಾ ಪಾಂಡುರಂಗರಾವ ಕಂಪ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಹಿರಿಯ ದಾಸಸಾಹಿತ್ಯ ವಿದ್ವಾಂಸ ಪ್ರೋ. ವ್ಯಾಸರಾಜ ಸಂತೆಕೆಲ್ಲೂರ ಕಾರ್ಯಕ್ರಮ ನಿರೂಪಿಸಿದರು. ಹರಿದಾಸ ಸಾಹಿತ್ಯ ಪ್ರಚಾರ ವಾಹಿನಿಯ ಸಂಚಾಲಕ ಭೀಮಭಟ್ಟ ಬೆಂಕಿ ಮೋತಕಪಲ್ಲಿ ವಂದಿಸಿದರು.

# ಒಂದನೆ ಪುಟದಿಂದ...

## ಧೀಮಂತ ನಾಯಕ ಮನಮೋಹನ ಸಿಂಗ್ : ಬಿ.ಜಿ. ಶೆಟಕಾರ

ಉತ್ತೇಜಿಸಲು ಅವರು ಅನೇಕ ಮಹತ್ವದ ಕ್ರಮಗಳನ್ನು ಕೈಗೊಂಡಿರುವುದನ್ನು ನೆನಪಿಸಿದರು.

ಮನಮೋಹನ ಸಿಂಗ್ ಬೀದರ ಒಡನಾಟ:

ವಿಶೇಷವಾಗಿ ಮನಮೋಹನ್ ಸಿಂಗ್‌ಅವರ ಬೀದರ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯನ್ನು 14. ಅಕ್ಟೋಬರ್ 1997 ಉದ್ಘಾಟನೆ ಮಾಡಿದ್ದು ಅತ್ಯಂತ ಸರಳ ಸೌಜನ್ಯ ಮೂರ್ತಿಯಾಗಿದ್ದು ಬೀದರ ಬಂದಾಗ ಅತಿಗಣ್ಯರ ವಿಭಾಗದಲ್ಲಿ ಊಟದ ವ್ಯವಸ್ಥೆ ಮಾಡಿದರೂ ಸಾಮಾನ್ಯರ ಜೊತೆ ಸೇರಿ ಊಟ ಮಾಡಿ ಸರಳತೆ ಮೆರೆದಿರುವುದನ್ನು ನೆನೆದರು. ಅವರನ್ನು ಬೀದರ ಕರೆತರುವಲ್ಲಿ ಅಂದಿನ ಸಂಸದ ರಾಮಚಂದ್ರ ವೀರಪ್ಪ, ಕಾಂಗ್ರೆಸ್ ಧುರೀಣ ಬಸವರಾಜ ಬುಳ್ಳಾ ಮೊದಲಾದವರ ಶ್ರಮವನ್ನು ನೆನಪಿಸಿದರು.

ಬೀದರಗೆ ಮನಮೋಹನ ಸಿಂಗ್ ಕೊಡುಗೆ:

ಬೀದರ ಅಬಿವೃದ್ಧಿಯಲ್ಲಿ ಮನಮೋಹನ ಸಿಂಗ್ ಅವರ ಕೊಡುಗೆ ಅಪಾರವಾಗಿದ್ದು ಗುರುದ್ವಾರ ಗುರುತಾ ಗದ್ದಿ ಉತ್ಸವ ಸಂದರ್ಭದಲ್ಲಿ ಸಂಸದರಾಗಿದ್ದ ಧರ್ಮಸಿಂಗ್ ಹಾಗೂ ಬೀದರ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ, ಪದಾಧಿಕಾರಿಗಳ ನೇತೃತ್ವದಲ್ಲಿ ಬಲಬೀರಸಿಂಗ್, ಚನ್ನಬಸಪ್ಪ ಹಾಲಹಳ್ಳಿ ಮೊದಲಾದವರ ನಿಯೋಗ ಫಲವಾಗಿ 100. ಕೋಟಿ ಅನುದಾನ ಬಿಡುಗಡೆ ಮಾಡಿದ್ದು ಬೀದರ ಸಮಗ್ರ ಅಭಿವೃದ್ಧಿಗೆ ನೆರವಾಯಿತು.

ಜಿಲ್ಲಾಧಿಕಾರಿ ಹರ್ಷಗುಪ್ತ ಅವರ ದೂರದೃಷ್ಟಿಯಿಂದ ಬೀದರ ಹೊರವರ್ತುಲ (ಔಟರ್ ರಿಂಗ್) ರಸ್ತೆ ನಿರ್ಮಾಣವಾಗಿ ನಗರ ಸುಂದರೀಕರಣವಾಗಿರುವುದನ್ನು ಸ್ಮರಿಸಿದರು. ಶ್ರದ್ಧಾಂಜಲಿ ಸಭೆಯಲ್ಲಿ ಬೀದರ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ, ಕಾರ್ಯದರ್ಶಿ ವೀರೇಂದ್ರ ಶಾಸ್ತ್ರಿ, ಜಂಟಿ ಕಾರ್ಯದರ್ಶಿ ರಾಜಶೇಖರ ಮಿಟಕಾರಿ, ಖಜಾಂಚಿ ಮಡಿವಾಳಪ್ಪ ಗಂಗಶೆಟ್ಟಿ, ಆಡಳಿತ ಮಂಡಳಿ ಸದಸ್ಯರಾದ ಕಂಟೆಪ್ಪ ಪಾಟೀಲ, ವೀರಕುಮಾರ ಮಜಗೆ, ಸದಸ್ಯರಾದ ಸೂರ್ಯಕಾಂತ ಶೆಟಕಾರ, ಮೊದಲಾವರು ಭಾಗವಹಿಸಿದರು.

# ಗುಣಗಾನ ಮಾಡಿದ ಪ್ರಧಾನಿ ಮೋದಿ

ಖರ್ಗೆ, ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅನೇಕ ಕಾಂಗ್ರೆಸ್ ನಾಯಕರುಕೂಡ ಮನಮೋಹನ್ ಸಿಂಗ್ ಅವರ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ನಾನು ಓರ್ವ ಗುರು ಮತ್ತು ಮಾರ್ಗದರ್ಶಕನನ್ನು ಕಳೆದುಕೊಂಡಿದ್ದೇನೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕಂಬನಿ ಮಿಡಿದಿದ್ದಾರೆ.

## ಸಾರ್ವಜನಿಕರು ಪಡೆದುಕೊಳ್ಳಬೇಕು–ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ

ಶ್ವಾನ ಪ್ರದರ್ಶನ, ಸಣ್ಣ ಮತ್ತು ಮುದ್ದು ಪ್ರಾಣಿ ಪಕ್ಷಿಗಳ ಪ್ರದರ್ಶನ, ಮೀನು ತಳಿಗಳು ಅಲಂಕಾರಿಕ ಮೀನುಗಳ ಪ್ರದರ್ಶನ, ಮಾದ್ಯವರ್ಧಿತ ಹಾಲು ಮತ್ತು ಹಾಲಿನ ಉತ್ಪನ್ನಗಳ ಪ್ರದರ್ಶನ, ವಿವಿಧ ಹೊಸ ತಂತ್ರಜ್ಞಾನಗಳ ಯಂತ್ರೋಪಕರಣಗಳ ಪ್ರದರ್ಶನ ಇರುವುದರಿಂದ ಈ ಬಗ್ಗೆ ಹೆಚ್ಚಿನ ಪ್ರಚಾರ ನೀಡಿ ಮೇಳದಲ್ಲಿ ರೈತರು ಭಾಗವಹಿಸುವಂತೆ ನೋಡಿಕೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ವಿವಿಧ ಇಲಾಖೆಗಳಿಂದ 15–20 ಮಳಿಗೆಗಳನ್ನು ನಿರ್ಮಿಸಿ ಎನ್.ಆರ್.ಎಲ್.ಎಂ. ಮತ್ತು ಮಹಿಳಾ ರೈತರಿಗೆ ಶಕ್ತಿ ಯೋಜನೆಯಡಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ನೋಡಿಕೊಳ್ಳಬೇಕು. ಹಾಗೂ ಗ್ರಾಮ ಪಂಚಾಯತಿಗಳಿಂದ ಹೆಚ್ಚಿನ ಪ್ರಚಾರ ನೀಡಿ ರೈತರಿಗೆ ಸೇರಿಸಬೇಕು. ಈ ಮೇಳದಲ್ಲಿ ಭಾಗವಹಿಸುವ ಸಾರ್ವಜನಿಕರಿಗೆ ಕುಡಿಯುವ ನೀರು, ಶೌಚಾಲಯಗಳ ವ್ಯವಸ್ಥೆ ಮಾಡಬೇಕು ಮತ್ತು ಶಾಲೆಗಳ ವಿದ್ಯಾರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೇರುವಂತೆ ನೋಡಿಕೊಳ್ಳಬೇಕೆಂದರು.

ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆಗಳ ವಿಶ್ವವಿದ್ಯಾಲಯ ಬೀದರನ ವಿಸ್ತರಣಾ ನಿರ್ದೇಶಕರಾದ ಡಾ.ಬಸವರಾಜು ಅವಟಿ ಅವರು ಮಾತನಾಡಿ, ಕಾರ್ಯಕ್ರಮದ ಉದ್ದೇಶಗಳು ಮತ್ತು ಯುವಕರಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಲು ಇದರ ಪ್ರಾಮುಖ್ಯತೆಗಳನ್ನು ವಿವರಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ ಅವರು ಜಾನುವಾರು ಕುಕ್ಕುಟ ಮತ್ತು ಮತ್ಸ್ಯಮೇಳ–2025ರ ಪೋಸ್ಟರ ಬಿಡುಗಡೆಗೊಳಿಸಿದರು.

ಈ ಕಾರ್ಯಕ್ರಮದಲ್ಲಿ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಪ್ರಚಾರ ಸಮಿತಿ ಅಧ್ಯಕ್ಷರಾದ ಡಾ.ಚನ್ನಪ್ಪಗೌಡ ಬಿರಾದಾರ, ಪ್ರಾಧ್ಯಾಪಕರಾದ ಡಾ.ಎಂ.ಕೆ.ತಾಂದಳೆ, ಡಾ.ಶ್ರೀಕಾಂತ ಕುಲಕರ್ಣಿ, ಸಹ ಪ್ರಾಧ್ಯಾಪಕರಾದ ಡಾ.ಪ್ರಕಾಶ ಕುಮಾರ ರಾಠೋಡ, ಡಾ.ವೆಂಕನಗೌಡ, ಡಾ.ಅಕ್ಷಯಕುಮಾರ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಮಹೇಶ ಮೇಘಣ್ಣನವರ, ಕೃಷಿ ಇಲಾಖೆ ಜಂಟಿ ನಿರ್ದೇಶಕರಾದ ಜಿಯಾವುಲ್ಲಾ, ಪಶು ಸಂಗೋಪನಾ ಇಲಾಖೆ ಉಪನಿರ್ದೇಶಕರಾದ ನರಸಪ್ಪ, ಡಾ.ಗೌತಮ ಅರಳಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಜ 28 ರಿಂದ ಭಾರತೀಯ ಸಂಸ್ಕೃತಿ ಉತ್ಸವ: ಬಸವರಾಜ್ ಪಾಟೀಲ್ ಸೇಡಂ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ಸೇಡಂನ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಕಲ್ಬುರ್ಗಿಯ ಭಾರತ ವಿಕಾಸ ಸಂಗಮ ಮತ್ತು ವಿಕಾಶ ಅಕಾಡೆಮಿ ಪ್ರತಿ 3 ವರ್ಕ್ಕೆ ನಡೆಸುತ್ತಿರುವ ಭಾರತೀಯ ಸಂಸ್ಕೃತಿ ಉತ್ಸವ ಮತ್ತು ಕೊತ್ತಲ ಸ್ವರ್ಣ ಜಯಂತಿ ಬರುವ ಜ.28 ರಿಂದ ಫೆ 6 ವರೆಗೆ ಕಲ್ಬುರ್ಗಿ–ಸೇಡಂ ರಾಜ್ಯ ಹೆದ್ದಾರಿಯ ಬೀರನಹಳ್ಳಿ ಕ್ರಾಸ್ ನ ಪ್ರಕೃತಿ ನಗರದಲ್ಲಿ ಹಮ್ಮಿಕೊಂಡಿದೆ ಎಂದು ಮಾಜಿ ಸಂಸದರು ಮತ್ತು ಉತ್ಸವದ ಸಂಯೋಜಕ ಬಸವರಾಜ್ ಪಾಟೀಲ್ ಸೇಡಂ ಹೇಳಿದ್ದಾರೆ. ಅವರು ಇಂದು ನಗರದಲ್ಲಿ ಸುದ್ದಿಗೋಷ್ಟಿ ನಡೆಸಿ, ನೆಲ, ಜಲ, ಪ್ರಕೃತಿ ರಕ್ಷಣೆ–ಯ ಉದ್ದೇಶದಿಂದ ವಿಕಾಸ ಅಕಾಡೆಮಿ ಕಾರ್ಯನಿರ್ವಹಿಸುತ್ತಿದೆ. ಅಕಾಡೆಮಿಯಿಂದ ಏಳನೇ ಭಾರತೀಯ ಸಂಸ್ಕೃತಿ ಉತ್ಸವ ಹಮ್ಮಿಕೊಂಡಿದೆ. ಇದನ್ನು 240 ಎಕರೆ ಪ್ರದೇಶದಲ್ಲಿ 9 ದಿನಗಳ ಕಾಲ ನಡೆಯಲಿದೆ. ಇಲ್ಲಿ ಕೃಷಿ, ಜ್ಞಾನ ವಿಜ್ಞಾನ, ದೃಶ್ಯಕಲಾ, ಆರೋಗ್ಯ, ಕಾಯಕ, ಸೇವಾ, ಮಕ್ಕಳ, ಸ್ವದೇಶಿ ಉದ್ಯಮ, ಉದ್ಯಮ, ಸಂಸ್ಕೃತಿ ಲೋಕ ಇಲ್ಲಿ ಅನಾವರಣಗೊಳ್ಳಲಿದೆ. ಮೊದಲ ದಿನ ಕೈ ತುತ್ತಿನ ಕಾರ್ಯಕ್ರಮ ಇರಲಿದೆ. ಫೆ 2 ರಂದು ಬೆಳಿಗ್ಗೆ 6 ರಿಂದ 8 ವರೆಗೆ ಯೋಗ ಶಿಬಿರವೂ ನಡೆಯಲಿದೆ. ಇದರಲ್ಕಿ ಒಂದು ಲಕ್ಷ ಯೋಗ ಪಟುಗಳು ಭಾಗವಹಿಸಲಿದ್ದಾರೆ.

# ರೈತ ಹಾಗೂ ಶೋಷಿತರ ಧ್ವನಿಯಾಗಿದ್ದ ಭಾಸ್ಕರ ರಾವ್ ನ್ಯಾ. ಹಂಚಾಟೆ




ಮಲ್ಲಮ್ಮ ನುಡಿ ವಾರ್ತೆ

ಶಹಾಪುರ: ದಿ.ಭಾಸ್ಕರ್ ರಾವ್ ಮೂಡಬೂಳ ಅವರು ತಮ್ಮ ವಕೀಲ ವೃತ್ತಿಯನ್ನು ಜೀವನದುದ್ಧಕ್ಕೂ ಯಾರಿಗೂ ರಾಜೀಯಾಗದೆ ಸಗರ ನಾಡಿನ ರೈತರು ಹಾಗೂ ಇಲ್ಲಿನ ಶೋಷಿತ ಜನರ ಪರ ಹೋರಾಟ ಮಾಡುವ ಮೂಲಕ ಈ ಭಾಗದ ರೈತರ, ಶೋಷಿತರ ಧ್ವನಿಯಾಗಿ ನಿಂತವರು. ಅವರ ಜೀವನದ ಸಾತ್ವಿಕತೆಯನ್ನು ಮುಂದಿನ ಪೀಳಿಗೆ ಅಳವಡಿಸಿಕೊಳ್ಳಬೇಕು ಎಂದು ಉಚ್ಚ ನ್ಯಾಯಾಲಯದ ನ್ಯಾಯಾದೀಶ ಸಂಜೀವಕುಮಾರ್ ಹಂಚಾಟೆ ಹೇಳಿದರು.

ಇತ್ತೀಚೆಗೆ ಶಹಾಪುರ ನಗರದಲ್ಲಿ ನಿಧನರಾಗಿದ್ದ ಖ್ಯಾತ ವಕೀಲ, ರೈತ ಹೋರಾಟಗಾರ, ಶಿಕ್ಷಣ ಪ್ರೇಮಿ, ಖ್ಯಾತ ಸಂಶೋಧಕರಾದ ದಿ. ಭಾಸ್ಕರ್ ರಾವ್ ಮುಡಬೂಳ ಅವರ ಮನೆಗೆ ಹೈಕೋರ್ಟ್ ನ್ಯಾಯಾಧೀಶ ಹಂಚಾಟೆ ಸಂಜೀವ್ ಕುಮಾರ್ ಅವರು ಕುಟುಂಬ ಸಮೇತ ಭೇಟಿ ನೀಡಿ ಮುಡಬೂಳ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಬಳಿಕ ಮಾತನಾಡಿದ ಅವರು, ಭಾಸ್ಕರ್ ರಾವ್ ತಮ್ಮ ವಕೀಲ ವೃತ್ತಿಯ ವೃತ್ತಿಯ ಜೊತೆ ರೈತರ ಬಗ್ಗೆ ಅವರಲ್ಲಿ ಅಪಾರ ಕಾಳಜಿ ಇತ್ತು. ರೈತ ಚಳುವಳಿಗೆ ಶಕ್ತಿಯಾಗಿದ್ದರು. ಇತಿಹಾಸ ಸಂಶೋಧನೆ ಬಗ್ಗೆ ಅಪಾರಜ್ಞಾನ ಇರುವ ಇವರು ಈ ಭಾಗದ ಅತ್ಯಂತ ಪ್ರಭಾವಿ ವ್ಯಕ್ತಿಯಾಗಿದ್ದರು. ಅವರಲ್ಲಿ ಕಿಂಚಿತ್ತು ಅಹಂ ಇರಲಿಲ್ಲ. ಡಾ.ಸ್ವಾಮಿನಾಥ ವರದಿ ಜಾರಿಯಾದ ಹೊರತು ರೈತರಿಗೆ ನ್ಯಾಯ ಸಿಗಲು ಸಾಧ್ಯವಿಲ್ಲ ಎಂದು ಹೋರಾಟದ ಮೂಲಕ ಅನೇಕ ಚರ್ಚೆಗಳನ್ನು ಮಾಡುವ ಮೂಲಕ ರೈತರಲ್ಲಿ ಹೋರಾಟದ ಕಿಚ್ಚನ್ನು ಹಚ್ಚಿದವರು. ಅವರು ನಮ್ಮಿಂದ ಭೌತಿಕವಾಗಿ ದೂರವಾಗಿರಬಹುದು. ಮಾನಸಿಕವಾಗಿ ಅವರು ನಮ್ಮ ಜೊತೆಯಲ್ಲೇ ಇದ್ದು ನಮಗೆ ಅವರ ಕೆಲಸ ಕಾರ್ಯದ ಬಗ್ಗೆ ಸದಾ ಮಾರ್ಗದರ್ಶನ ನೀಡುತ್ತಿದ್ದಾರೆ. ಅವರಿಂದ ಇನ್ನೂ ನಾವು ಬಹಳಷ್ಟು ಕಲಿಯಬೇಕಾಗಿದೆ. ಅವರು ಜೀವನದುದ್ದಕ್ಕೂ ಸಾರ್ವಜನಿಕರೊಂದಿಗೆ ಸದಾ ಹಸನ್ಮುಖಿಯಾಗಿ ಜೀವನ ನಡೆಸಿದ್ದಾರೆ. ಅವರ ಸಾತ್ವಿಕ ಜೀವನವೇ ಮುಂದಿನ ಪೀಳಿಗೆಗೆ ಸ್ಪೂರ್ತಿಯಾಗಿದೆ. ತಂದೆಯ ಹಾದಿಯಲ್ಲಿ ಜನ ಸೇವೆಯಲ್ಲಿ ತೊಡಗುವ ಮೂಲಕ ಅವರ ಹೆಸರನ್ನು ಉಳಿಸಬೇಕು. ಎಂದು ಅವರ ಕುಟುಂಬಸ್ಥರಿಗೆ ಕಿವಿಮಾತು ಹೇಳಿದರು. ಇದೆ ವೇಳೆ ಮಾತನಾಡಿದ, ಶಹಾಪುರದ ಹಿರಿಯ ನ್ಯಾಯಾಧೀಶ ಸಿದ್ದರಾಮ ಟಿಪಿ ಅವರು, ವಯಸ್ಸಿನಲ್ಲಿ ಹಿರಿಯರಾಗಿದ್ದರೂ ಕೂಡ ಅವರಲ್ಲಿನ ಉಸ್ತುಕತೆ ಮತ್ತು ಸರಳತೆ ನಮ್ಮಲ್ಲಿ ಹೊಸ ಚೈತನ್ಯ ತುಂಬುತ್ತದೆ. ಅವರ ಅಕಾಲಿಕ ನಿಧನದಿಂದ ಈ ಭಾಗದ ಜನರಿಗೆ ತುಂಬಲಾರದ ನಷ್ಟವಾಗಿದೆ ಎಂದರು.

ಈ ಸಂದರ್ಭದಲ್ಲಿ ನಗರದ ಜೆಎಂಎಫ್‌ಸಿ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶೆ ಕು. ಶೋಭಾ, ಹೆಚ್ಚುವರಿ ನ್ಯಾಯಾಧೀಶ ಬಸವರಾಜ್, ಸಿಎಂಒ ಗುರುರಾಜ್ ದೇಶಪಾಂಡೆ, ಪ್ರಕಾಶ್, ದಿ. ಭಾಸ್ಕರ್ ರಾವ್ ಅವರ ಮಗ ವಕೀಲ ಉಮೇಶ್, ಹಿರಿಯ ವಕೀಲರಾದ ಆರ್ ಚೆನ್ನಬಸ್ಸು, ಟ ನಾಗೇಂದ್ರ, ಹೇಮರೆಡ್ಡಿ, ಅಮರೇಶ, ವಿಶ್ವನಾಥ್ ಫಿರಂಗಿ ಶರಣಪ್ಪ ಪ್ಯಾಟಿ, ಲೀಲಾಧರ ಭಂಡಾರಿ, ಮಲ್ಲಯ್ಯ ಪೋಲಂಪಲ್ಲಿ, ಮಂಜುನಾಥ್ ಬಿರಾದಾರ್, ಬಸವರಾಜ ಕರೆಗಾರ, ಮಾನಪ್ಪ ಸೇರಿದಂತೆ ಅನೇಕರಿದ್ದರು.

# ಗ್ರಾಮ ಪಂಚಾಯತಿಯ ಗಣಕಯಂತ್ರ ನಿರ್ವಾಹಕರ ಕಾರ್ಯ ಶ್ಲಾಘನೀಯ : ಜಿ.ಪಂ ಯೋಜನಾ ನಿರ್ದೇಶಕ ಪ್ರಕಾಶ್ ವಿ




(ವೀರಯ್ಯ ವಿ ಹಿರೇಮಠ)

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :– ಪ್ರಸಕ್ತದಲ್ಲಿ ಎಲ್ಲಾ ಸೇವೆಗಳು ಗಣಕಿಕೃತವಾಗಿರುವದರಿಂದ ಗ್ರಾಮ ಪಂಚಾಯತಿ ಹಂತದಲ್ಲಿ ಗ್ರಾಮ ಪಂಚಾಯತಿಯ ಆಪರೇಟರ್ ಪಾತ್ರ ಶ್ಲಾಘನೀಯವಾಗಿದೆಂದು ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕ ಪ್ರಕಾಶ್ ವಿ ಕರೆ ನೀಡಿದರು.

ಕೊಪ್ಪಳ ತಾಲೂಕ ಪಂಚಾಯತಿಯ ಸಭಾಂಗಣದಲ್ಲಿ ಆಯೋಜಿಸಿದ್ದ ಗ್ರಾಮ ಪಂಚಾಯತಿಯ ಕಂಪ್ಯೂಟರ್ ಆಪರೇಟರ್ ದಿನಾಚರಣೆಯ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಕಂಪ್ಯೂಟರ್ ಪಿತಾಮಹರೆಂದೆ ಖ್ಯಾತರಾದ ಚಾರ್ಲ್ಸ್ ಬ್ಯಾಬೇಜ್ ಕಂಪ್ಯೂಟರ್ ಕಂಡು ಹಿಡಿದ ಪರಿಣಾಮವಾಗಿ ಎಲ್ಲಾ ಇಲಾಖೆಗಳಲ್ಲಿ ಮಾಹಿತಿಯು ಗಣಕೀಕರಣವಾಗಿರುವರಿಂದ ಇಲಾಖೆಯ ಸೇವೆಗಳ ಮಾಹಿತಿ, ಜಗತ್ತಿನ ಬಗ್ಗೆ ಮಾಹಿತಿಯನ್ನು ನಾವು ಒಂದು ಕ್ಷಣದಲ್ಲಿ ಪಡೆಯಬಹುದಾಗಿದೆ ಎಂದರು. ಗ್ರಾಮ ಪಂಚಾಯತಿಯಲ್ಲಿ ಎಲ್ಲಾ ಸೇವೆಗಳು ಆನ್ ಲೈನ್ ಇರುವದರಿಂದ ಗ್ರಾಮ ಪಂಚಾಯತಿಯಿಂದ ಸಾರ್ವಜನಿಕರಿಗೆ ಹಲವಾರು ಸೇವೆಗಳು ಸಕಾಲದಲ್ಲಿ ದೊರೆಯುತ್ತಿವೆ. ಈ ಮುಂಚೆ ಗ್ರಾಮ ಪಂಚಾಯತಿಯಲ್ಲಿ ಕೈ ಬರವಣಿಗೆಯ ರೂಪದಲ್ಲಿ ದಾಖಲಾತಿಗಳು ಲಭ್ಯವಿದ್ದವು. ಮಹಾತ್ಮಾ ಗಾಂಧಿ ನರೇಗಾ ಯೋಜನೆ ಜಾರಿಯಾದಾಗಿನಿಂದ ಪ್ರತಿ ಗ್ರಾಮ ಪಂಚಾಯತಿಯ ಕಂಪ್ಯೂಟರ್ ಆಪರೇಟರ್ ಹುದ್ದೆ ಅವಶ್ಯವಿದ್ದ ಪ್ರಯುಕ್ತ ಈ ಹುದ್ದೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹೊಸದಾಗಿ ಸೃಜಿಸಿತು. ಇದರ ಪರಿಣಾಮವಾಗಿ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಗಣಕಯಂತ್ರ ನಿರ್ವಾಹಕರ ನೇಮಕಾತಿ ಮಾಡಿಕೊಳ್ಳಲಾಯಿತು. ಗ್ರಾಮ ಪಂಚಾಯತಿಯಿಂದ ದೊರೆಯುವ ಎಲ್ಲಾ ಸೇವೆಗಳು ಸಕಾಲದಲ್ಲಿ ಎಲ್ಲರಿಗೂ ದೊರೆಯುವಂತಾಗಬೇಕಾದರೆ ನೀವುಗಳು ಸದಾ ಸಿದ್ದರಾಗಿರಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕೊಪ್ಪಳ ತಾಲೂಕ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ದುಂಡಪ್ಪ ತುರಾದಿ ಮಾತನಾಡಿ ಚಾರ್ಲ್ಸ್ ಬ್ಯಾಬೇಜ್ ಅವರ ಪಾತ್ರ ಗಣನೀಯವಾಗಿರುತ್ತದೆ. ಗಣಕಯಂತ್ರ ನಿರ್ವಾಹಕರು ಪ್ರಸಕ್ತ ಕೆಲಸದಲ್ಲಿ ಹೆಚ್ಚು ಆಸಕ್ತಿವಹಿಸಿ ನಿರ್ವಹಿಸುತ್ತಿರುವರಿಂದ ಎಲ್ಲಾ ಯೋಜನೆಗಳು ತಾಲೂಕಿನಲ್ಲಿ ಪ್ರಗತಿ ಸಾಧಿಸಲಾಗುತ್ತಿದೆ. ಇದೇ ರೀತಿಯಾಗಿ ನೀವು ಹೆಚ್ಚಿನ ರೀತಿಯಲ್ಲಿ ತೊಡಗಿಸಿಕೊಂಡು ಎಲ್ಲಾ ಯೋಜನೆಗಳಲ್ಲಿ ಕೊಪ್ಪಳ ತಾಲೂಕು ಹೆಚ್ಚು ಪ್ರಗತಿ ಸಾಧಿಸಲು ಕಾರ್ಯನಿರತರಾಗಬೇಕೆಂದು ಕರೆ ನೀಡಿದರು.

ಚಾರ್ಲ್ಸ್ ಬ್ಯಾಬೇಜ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸ್ಮರಿಸಲಾಯಿತು. ನಂತರ ಕೇಕ್ ಕತ್ತರಿಸುವ ಮೂಲಕ ಕಂಪ್ಯೂಟರ್ ಆಪರೇಟರ್ ದಿನ ಆಚರಿಸಲಾಯಿತು. ಬಿಸರಳ್ಳಿ ಗ್ರಾಮ ಪಂಚಾಯತಿಯ ಕಂಪ್ಯೂಟರ್ ಆಪರೇಟರ್ ನಿಸಾರ ಅಹಮದ್ ದಿನಾಚರಣೆಯ ಕುರಿತು ಮಾತನಾಡಿದರು. ವಂದನಾರ್ಪಣೆಯನ್ನು ಗೊಂಡಬಾಳ ಗ್ರಾಮ ಪಂಚಾಯತಿಯ ಡಿಇಓ ಮಾರುತಿ ಹಣವಾಳ ನಿರ್ವಹಿಸಿದರು.

ಕಾರ್ಯಕ್ರಮದಲ್ಲಿ ಸಹಾಯಕ ನಿರ್ದೇಶಕ(ಗ್ರಾಉ) ಯಂಕಪ್ಪ, ಪಂಚಾಯತ್ ರಾಜ್ ಸಹಾಯಕ ನಿರ್ದೇಶಕ ಮಹೇಶ್, ತಾಲೂಕ ಯೋಜನಾಧಿಕಾರಿ ರಾಜೇಸಾಬ ನದಾಫ್, ತಾಲೂಕ ಐಇಸಿ ಸಂಯೋಜಕ ದೇವರಾಜ ಪತ್ತಾರ, ತಾಲೂಕಿನ ಎಲ್ಲಾ ಗ್ರಾಮ ಪಂಚಾಯತಿಗಳ ಕಂಪ್ಯೂಟರ್ ಆಪರೇಟರ್ಗಳು, ಭಾಗವಹಿಸಿದ್ದರು.

ವಿಜ್ಞಾನಿ ಚಾರ್ಲ್ಸ್ ಬ್ಯಾಬೇಜ್ ಜನ್ಮದಿನ ಸ್ಮರಣಾರ್ಥ ಕಂಪ್ಯೂಟರ್ ಆಪರೇಟರ್‌ಗಳ ದಿನಾಚರಣೆ

# ಯೋಜನೆಗಳ ಯಶಸ್ವಿ ಅನುಷ್ಠಾನದಲ್ಲಿ ಡಿಇಓಗಳ ಪಾತ್ರ ಬಹುಮುಖ್ಯ: ಇಓ ಘುಲೆ



ಮಲ್ಲಮ್ಮ ನುಡಿ ವಾರ್ತೆ

ಹುಲಸೂರ: 'ಸರ್ಕಾರಿ ಯೋಜನೆಗಳು ಹಾಗೂ ಗ್ರಾಪಂ ಕಚೇರಿಗಳಲ್ಲಿ ಸಿಗುವ ಸೌಲಭ್ಯಗಳನ್ನು ಸಾರ್ವಜನಿಕರಿಗೆ ತಲುಪಿಸುವಲ್ಲಿ ಗ್ರಾಪಂ ಕಂಪ್ಯೂಟರ್ ಆಪರೇಟರ್‌ಗಳ ಪಾತ್ರ ಬಹುಮುಖ್ಯವಾಗಿದೆ' ಎಂದು ಇಲ್ಲಿನ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ವೈಜಣ್ಣ ಘುಲೆ ಹೇಳಿದರು.

ಡಿ.26 ಕಂಪ್ಯೂಟರ್ ಪಿತಾಮಹ-ವಿಜ್ಞಾನಿ ಚಾರ್ಲ್ಸ್ ಬ್ಯಾಬೇಜ್ ಅವರ ಜನ್ಮ ದಿನ ಸ್ಮರಣಾರ್ಥ ಗುರುವಾರ ಪಟ್ಟಣದ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಿದ್ದ 'ಕಂಪ್ಯೂಟರ್ ಆಪರೇಟರ್‌ಗಳ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಂಪ್ಯೂಟರ್ ಪಿತಾಮಹ ಚಾರ್ಲ್ಸ್ ಬ್ಯಾಬೇಜ್ ಅವರ ಜನ್ಮ ದಿನವಾದ ಡಿ.26ರಂದು ರಾಜ್ಯದ ಎಲ್ಲ ಗ್ರಾಪಂಗಳಲ್ಲಿನ ಡಾಟಾ ಎಂಟ್ರಿ ಆಪರೇಟರ್‌ಗಳು ಇನ್ನು ಮುಂದೆ ಪ್ರತಿ ವರ್ಷ ಈ ದಿನವನ್ನು ಕಂಪ್ಯೂಟರ್ ಆಪರೇಟರ್‌ಗಳ ದಿನವನ್ನಾಗಿ ಆಚರಿಸುವುದಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಪ್ರಿಯಾಂಕ ಖರ್ಗೆ ಅವರು ಇತ್ತೀಚೆಗೆ ಘೋಷಿಸಿದ್ದು ಅತ್ಯಂತ ಸಂತೋಷದ ವಿಷಯ ಎಂದರು.

ನರೇಗಾ ಯೋಜನೆ ಸಹಾಯಕ ನಿರ್ದೇಶಕ ಮಹಾದೇವ ಜಮ್ಮು ಹಾಗೂ ಪಂಚಾಯತ್ ರಾಜ್ ವಿಭಾಗದ ಸಹಾಯಕ ನಿರ್ದೇಶಕ ಮಹಮ್ಮದ ಸಲೀಂ ಅವರು ಮಾತನಾಡಿ, ಗ್ರಾಪಂಗಳಲ್ಲಿ ಲಭ್ಯವಿರುವ ಸರ್ಕಾರಿ ಯೋಜನೆಗಳನ್ನು ಜನ ಸಾಮಾನ್ಯರಿಗೆ ಪರಿಚಯಿಸಿ ಅವರ ಮನೆ ಬಾಗಿಲವರೆಗೆ ತಲುಪಿಸುವರೆಗಿನ ಸಂಪೂರ್ಣ ಪ್ರಕ್ರಿಯೆಯಲ್ಲಿ ಕಂಪ್ಯೂಟರ್ ಆಪರೇಟರ್‌ಗಳು ಅತ್ಯಂತ ಶ್ರಮಪಟ್ಟು ಕೆಲಸ ಮಾಡುತ್ತಾರೆ. ಗ್ರಾಮ ಪಂಚಾಯಿತಿಗೆ ಆಧಾರ ಸ್ತಂಭಗಳಂತಿರುವ ಇವರು ಯೋಜನೆಗಳ ಯಶಸ್ವಿ ಅನುಷ್ಠಾನದಲ್ಲಿ ಇವರದು ಸಿಂಹಪಾಲು ಎಂದು ಶ್ಲಾಘಿಸಿದರು.

ಕಂಪ್ಯೂಟರ್ ಪಿತಾಮಹ-ವಿಜ್ಞಾನಿ ಚಾರ್ಲ್ಸ್ ಬ್ಯಾಬೇಜ್ ಅವರ ಭಾವಚಿತ್ರಕ್ಕೆ ಅತಿಥಿ ಗಣ್ಯರು ಪೂಜೆ ಸಲ್ಲಿಸಿದರು. ತಾಪಂ ಸಹಾಯಕ ಲೆಕ್ಕಾಧಿಕಾರಿ ಮಾಧವ್, ಪಿಡಿಓ ರಮೇಶ ಮಿಲಿಂದಕರ್, ಬಸವರಾಜ ರೂಗಿ, ಸಂದೀಪ್ ಬಿರಾದಾರ, ತಾಪಂ ಹಾಗೂ ವಿವಿಧ ಗ್ರಾಪಂಗಳ ಸಿಬ್ಬಂದಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಗಡಿಗೌಂಡಗಾಂವ ಗ್ರಾಪಂ ಡಿಇಓ ಕವಿರಾಜ ಬಿರಾದಾರ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ತಾಪಂ ತಾಲ್ಲೂಕು ಐಇಸಿ ಸಂಯೋಜಕ ಗಣಪತಿ ಹರಕೂಡೆ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

ಕಲಬುರಗಿ (ನಗರ): ಅಪೂರ್ಣವಾಗಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ

# ಅರ್ಜಿಯನ್ನು ಪೂರ್ಣಗೊಳಿಸಲು ಜನವರಿ 5 ರವರೆಗೆ ಕಾಲಾವಕಾಶ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.27-ಕಲಬುರಗಿ (ನಗರ) ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿನ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಖಾಲಿಯಿರುವ ಒಟ್ಟು 92 ಅಂಗನವಾಡಿ ಸಹಾಯಕಿಯರ ಗೌರವ ಸೇವೆ ಹುದ್ದೆಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ ವೆಬ್‌ಸೈಟ್‌ನಲ್ಲಿ ಒಟ್ಟು 4 ವಿವಿಧ ಹಂತಗಳಿದ್ದು, ಇದರಲ್ಲಿ ಕೆಲವರಿಗೆ 01ನೇ ಹಂತದಲ್ಲಿಯೇ ಂಠಿ-ಠಿಟುಛಿಚಿಣುಠಟಿ, ಣಾಛಿಛಿಜ-ಜಿಣಟಟಥಿ ಣಾಠಿಟಂಚಿಜಜಜ ಎಂಬ ಮೆಸ್ಸೇಜ್ ಅವರ ಮೊಬೈಲ್‌ಗೆ ಸ್ವೀಕೃತವಾಗಿರುವುದರಿಂದ ಅರ್ಜಿಯನ್ನು ಪೂರ್ಣಗೊಳಿಸಿರುವುದಿಲ್ಲ. ಅಪೂರ್ಣ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಮಾತ್ರ 2025ರ ಜನವರಿ 5ರ ಸಂಜೆ 5.30 ಗಂಟೆಯವರೆಗೆ ಅರ್ಜಿಗಳನ್ನು ಪೂರ್ಣಗೊಳಿಸಲು ವೆಬ್‌ಸೈಟ್‌ನಲ್ಲಿ ಇಲಾಖೆಯ ವತಿಯಿಂದ ಅವಕಾಶ ನೀಡಲಾಗಿದೆ ಎಂದು ಕಲಬುರಗಿ (ನಗರ) ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ.

ಕಲಬುರಗಿ ನಗರದಲ್ಲಿ ಅಂಗನವಾಡಿ ಸಹಾಯಕಿಯರ ಹುದ್ದೆಗೆ 1943 ಅಪೂರ್ಣ ಅರ್ಜಿಗಳು ಸ್ವೀಕೃತವಾಗಿರುತ್ತವೆ. ಅಭ್ಯರ್ಥಿಗಳು ಒಂದನೇ ಹಂತದಲ್ಲಿ ಆನ್‌ಲೈನ್ ತಂತ್ರಾಂಶದಲ್ಲಿ ನಿಗದಿತ ಅರ್ಜಿ ನಮೂನೆಯಲ್ಲಿ ಮಾಹಿತಿ ತುಂಬಬೇಕು. ಎರಡನೇ ಹಂತದಲ್ಲಿ ತಮ್ಮ ಭಾವಚಿತ್ರ ಸಹಿಯನ್ನು ಅಪಲೋಡ್ ಮಾಡಬೇಕು. ಮೂರನೇ ಹಂತದಲ್ಲಿ ತಮ್ಮ ದಾಖಲಾತಿಗಳನ್ನು ಅಪಲೋಡ್ ಮಾಡಬೇಕು. ನಾಲ್ಕನೇ ಹಂತದಲ್ಲಿ ತಮ್ಮ ಆಧಾರ ಸಂಖ್ಯೆ ನಮೂದಿಸಿ ಇ-ಹಸ್ತಾಕ್ಷರದೊಂದಿಗೆ ಅರ್ಜಿಯನ್ನು ಪೂರ್ಣಗೊಳಿಸಬೇಕು. ಅಪೂರ್ಣವಾಗಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ನಿಗದಿಪಡಿಸಿರುವ ದಿನಾಂಕದೊಳಗಾಗಿ ಅರ್ಜಿಯನ್ನು ಪೂರ್ಣಗೊಳಿಸದಿದ್ದಲ್ಲಿ ಅಪೂರ್ಣ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ಈ ಹಿಂದೆ ದಿನಾಂಕ: 05-07-2024ರಂದು ಅಧಿಸೂಚನೆ ಹೊರಡಿಸಿ ದಿನಾಂಕ:07-07-2024 ರಿಂದ ದಿನಾಂಕ 07-08-2024ರ ವರೆಗೆ ಹಾಗೂ ದಿನಾಂಕ:14-08-2024ರವರೆಗೆ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು. ಪ್ರಸ್ತುತ ಅರ್ಜಿ ಸಲ್ಲಿಸುವ ಕಾಲಾವಧಿ ಮುಗಿದಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಕಲಬುರಗಿ (ನಗರ) ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬೇಕೆಂದು ಅವರು ತಿಳಿಸಿದ್ದಾರೆ.

ಶರಣಮ್ಮ ಮಾತೆಯವರ ಗೋಶಾಲೆಗೆ ಕಲಿಕೆ ಶಿಕ್ಷಣ ಹಾಗೂ ಗ್ರಾಮೀಣ ಅಭಿವೃದ್ಧಿ ಸಂಸ್ಥೆ(ರಿ)

# ಲಿಂಗಸುಗೂರು ಇವರ ವತಿಯಿಂದ ಜಾನುವಾರಗಳಿಗೆ ಮೇವು ದಾನ



ಮಲ್ಲಮ್ಮ ನುಡಿ ವಾರ್ತೆ

ಲಿಂಗಸುಗೂರು:ತಾಲೂಕಿನ ಮುದಗಲ್. ಶ್ರೀ ಶರಣಮ್ಮ ಮಾತೆಯವರ ಗೋಶಾಲೆಗೆ ಕಲಿಕೆ ಶಿಕ್ಷಣ ಹಾಗೂ ಗ್ರಾಮೀಣ ಅಭಿವೃದ್ಧಿ ಸಂಸ್ಥೆ(ರಿ) ಲಿಂಗಸುಗೂರು ಇವರ ವತಿಯಿಂದ ಜಾನುವಾರಗಳಿಗೆ ಮೇವು ದಾನ ಮಾಡಲಾಯಿತು ಹಾಗೂ ಗೋಶಾಲೆಯಲ್ಲಿ ಪ್ರತಿನಿತ್ಯ ಗೋವುಗಳ ಆರೈಕೆ ಮಾಡುವಂತ ಕುಟುಂಬಕ್ಕೆ ಸನ್ಮಾನಿಸಿ ಗೌರವಿಸಲಾಯಿತು. ಪ್ರತಿಯೊಬ್ಬರ ಜೀವನದಲ್ಲಿ ಸಹಕಾರ ಸಹನೆ ಧಾನ ಮತ್ತು ಧರ್ಮವನ್ನೊಳಗೊಂಡು ಮನುಕುಲದಲ್ಲಿ ಮಾನವನ ಸ್ವಾರ್ಥ ಜೀವನದಲ್ಲಿ ಪ್ರಾಣಿ ಪಕ್ಷಿಗಳ ಬಗ್ಗೆ ಅತೀವ ಕಾಳಜಿಯಿಂದ ಪ್ರತಿಯೊಬ್ಬ ಜನಸಾಮಾನ್ಯರು ಕೂಡ ಜಾನುವಾರಗಳ ಪ್ರೀತಿಗೆ ಪಾತ್ರರಾಗಬೇಕೆಂದು ಎಂಬ ನಿಲುವಿನೊಂದಿಗೆ ನಾವು ಸಂಪಾದಿಸುವ ಒಂದು ರೊಟ್ಟಿಯಲ್ಲಿ ಅರ್ದ ರೊಟ್ಟಿಯನ್ನಾದರೂ ಇನ್ನೊಬ್ಬರ ಬದುಕಿಗೆ ಆಸರೆಯಾಗುವಂತೆ ಅಥವಾ ಮನುಕುಲವರಿತು ಪ್ರಾಣಿ ಪಕ್ಷಿಗಳ ಬಗ್ಗೆ ದಯೆನೀತಿಯನ್ನು ಪರಿಪಾಲನೆ ಮಾಡಬೇಕಾದುದು ಮಾನವ ಧರ್ಮದ ಅತಿ ಅಮೂಲ್ಯವಾದಗಳಿಗೆಯಾಗಿರುತ್ತದೆ ಇತ್ತೀಚಿನ ದಿನದಲ್ಲಿ ಅನೇಕ ಸಂಘ ಸಂಸ್ಥೆಗಳು ಪ್ರಾಣಿದಯೆ ಹಾಗೂ ಗೋಶಾಲೆಗಳನ್ನು ಇನ್ನು ಹೆಚ್ಚಿನ ರೀತಿಯಲ್ಲಿ ಶಾಖೆಗಳು ಪ್ರಾರಂಭಿಸಿ ಜಾನುವಾರಗಳ ಕುರಿತು ಇವುಗಳ ಆರೋಗ್ಯ ಮತ್ತು ಅಹಾರದ ಬಗ್ಗೆ ಹೆಚ್ಚಿನ ರೀತಿಯಲ್ಲಿ ಕಾಳಜಿ ವಹಿಸುವಂತಾಗಬೇಕು. ಇದೇ ಸಂದರ್ಭದಲ್ಲಿ ಕಲಿಕೆ ಶಿಕ್ಷಣ ಹಾಗೂ ಗ್ರಾಮೀಣ ಅಭಿವೃದ್ಧಿ ಸಂಸ್ಥೆ(ರಿ) ಲಿಂಗಸುಗೂರು ಇವರು ಸಮಾಜದಲ್ಲಿ ಒಂದಲ್ಲಾ ಒಂದು ವಿಶೇಷತೆ, ಸಮಾಜದ ಕುರಿತು ಕಾಳಜಿ, ಪ್ರಾಣಿ ಪಕ್ಷಿಗಳ ಬಗ್ಗೆ ಹೆಚ್ಚಿನ ಅಭಿರುಚಿ ಹೊಂದಿ ಮೇವು ದಾನ ಮಾಡಿರುವುದು ಅತೀವ ಸಂತೋಷ ತಂದಿದೆ ಇದೇ ರೀತಿ ಇನ್ನು ಮುಂದೆಕೂಡ ಸಂಸ್ಥೆ ಹೆಚ್ಚಿನ ರೀತಿಯಲ್ಲಿ ಸಮಾಜದ ಏಳಿಗೆಯ ಕಾರ್ಯದಲ್ಲಿ ಪಾಲ್ಗೊಳ್ಳಲಿ ಎಂದು ಗುಂಡಪ್ಪ ಮುದಗಲ್ ಅವರು ಹರ್ಷಿಸಿದರು.

ಈ ಸಂದರ್ಭದಲ್ಲಿ ಕಲಿಕೆಯ ಸಂಸ್ಥೆಯ ಅಧ್ಯಕ್ಷರಾದ ಆಕಾಶ್ ಡಿಜಿಟಲ್ ಮಾಲಿಕರು ಹನುಮೇಶ ಹೂಗಾರ ಹಾಗೂ ಸಂಘದ ಇತರೇ ಸದಸ್ಯರನ್ನೊಳಗೊಂಡು ಅಲ್ಪಮಟ್ಟಿನ ತಮ್ಮ ಅಳಿಲು ಸೇವೆಯನ್ನು ಸಮರ್ಪಿಸಿದರು. ಇದೇ ಸಂದರ್ಭದಲ್ಲಿ ನಿತಿನ್ ಹೂಗಾರ, ಹುಲಿರಾಜ್, ವೆಂಕಟೇಶ ಮಾನಮಟ್ಟಿ, ಅನ್ನಪೂರ್ಣ ಗೌಡೂರ, ಇತರರು ಇದ್ದರು.

ಜೇವರ್ಗಿ: ಅಪೂರ್ಣವಾಗಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ

# ಅರ್ಜಿಯನ್ನು ಪೂರ್ಣಗೊಳಿಸಲು ಜನವರಿ 5 ರವರೆಗೆ ಕಾಲಾವಕಾಶ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.27-ಜೇವರ್ಗಿ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿ ಇರುವ ಒಟ್ಟು 10 ಅಂಗನವಾಡಿ ಕಾರ್ಯಕರ್ತೆ ಹಾಗೂ 20 ಅಂಗನವಾಡಿ ಸಹಾಯಕಿಯರ ಗೌರವಧನ ಸೇವೆ ಹುದ್ದೆಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ ವೆಬ್‌ಸೈಟ್‌ನಲ್ಲಿ ಒಟ್ಟು 4 ವಿವಿಧ ಹಂತಗಳಿದ್ದು, ಇದರಲ್ಲಿ ಕೆಲವರಿಗೆ 01ನೇ ಹಂತದಲ್ಲಿಯೇ "ಂಠಿ-ಠಿಟುಛಿಚಿಣುಠಟಿ ಖಣಾಛಿಛಿಜ-ಜಿಣಟಟಥಿಗಿಠಿಟಂಚಿಜಜಜ" ಎಂಬ ಮೇಸೇಜ್ ಅವರ ಮೊಬೈಲ್‌ಗೆ ಸ್ವೀಕೃತವಾಗಿರುವುದರಿಂದ ಅರ್ಜಿಗಳನ್ನು ಪೂರ್ಣಗೊಳಿಸಿರುವುದಿಲ್ಲ. ಅಪೂರ್ಣ ಅರ್ಜಿಗಳನ್ನು ಪೂರ್ಣಗೊಳಿಸಲು 2025ರ ಜನವರಿ 5 ರ ಸಂಜೆ 5.30 ಗಂಟೆಯವರೆಗೆ ಕಾಲಾವಕಾಶ ನೀಡಲಾಗಿದೆ ಎಂದು ಜೇವರ್ಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ.

ಒಂದನೇ ಹಂತದಲ್ಲಿ ಆನ್‌ಲೈನ್ ತಂತ್ರಾಂಶದಲ್ಲಿ ನಿಗದಿತ ಅರ್ಜಿ ನಮೂನೆಯಲ್ಲಿ ಮಾಹಿತಿ ತುಂಬಬೇಕು. ಎರಡನೇ ಹಂತದಲ್ಲಿ ತಮ್ಮ ಭಾವಚಿತ್ರ ಸಹಿಯನ್ನು ಅಪ್ಲೋಡ್ ಮಾಡಬೇಕು. ಮೂರನೇ ಹಂತದಲ್ಲಿ ತಮ್ಮ ದಾಖಲಾತಿಗಳನ್ನು ಅಪ್ಲೋಡ್ ಮಾಡಬೇಕು. ನಾಲ್ಕನೇ ಹಂತದಲ್ಲಿ ತಮ್ಮ ಆಧಾರ ಸಂಖ್ಯೆ ನಮೂದಿಸಿ, ಇ-ಹಸ್ತಾಕ್ಷರದೊಂದಿಗೆ ಅರ್ಜಿಯನ್ನು ಪೂರ್ಣಗೊಳಿಸಬೇಕು. ಜಿಲ್ಲೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗೆ 385 ಅಪೂರ್ಣ ಅರ್ಜಿಗಳು ಹಾಗೂ ಸಹಾಯಕಿಯರ ಹುದ್ದೆಗೆ 182 ಅಪೂರ್ಣ ಅರ್ಜಿಗಳು ಸ್ವೀಕೃತವಾಗಿರುತ್ತವೆ.

ಅರ್ಜಿ ಸಲ್ಲಿಸುವ 4 ಹಂತಗಳನ್ನು ಪೂರ್ಣಗೊಳಿಸದೇ ಅಪೂರ್ಣ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಮಾತ್ರ ಜನವರಿ 5 ರ ಸಂಜೆ 5.30 ಗಂಟೆಯವರೆಗೆ ಅರ್ಜಿಗಳನ್ನು ಪೂರ್ಣಗೊಳಿಸಲು ವೆಬ್‌ಸೈಟ್‌ನಲ್ಲಿ ಇಲಾಖೆಯ ವತಿಯಿಂದ ಅವಕಾಶ ನೀಡಲಾಗಿದೆ. ಅಪೂರ್ಣವಾಗಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ನಿಗದಿಪಡಿಸಿರುವ ದಿನಾಂಕದೊಳಗಾಗಿ ಪೂರ್ಣಗೊಳಿಸದಿದ್ದಲ್ಲಿ ಅಪೂರ್ಣ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ಮೇಲ್ಕಂಡ ಹುದ್ದೆಗಳಿಗೆ ಸಂಬಂಧಿಸಿದಂತೆ ಈ ಹಿಂದೆ ದಿನಾಂಕ: 05-07-2024 ರಂದು ಅಧಿಸೂಚನೆ ಹೊರಡಿಸಿ, ದಿನಾಂಕ:07-07-2024 ರಿಂದ ದಿನಾಂಕ:07-08-2024ರ ವರೆಗೆ ಹಾಗೂ ದಿನಾಂಕ:14-08-2024ರವರೆಗೆ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿರುತ್ತದೆ. ಪ್ರಸ್ತುತ ಅರ್ಜಿ ಸಲ್ಲಿಸುವ ಕಾಲಾವಧಿ ಮುಗಿದಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಜೇವರ್ಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬೇಕೆಂದು ಅವರು ತಿಳಿಸಿದ್ದಾರೆ.

# ಇಂದು "ರಂಗದಂಗಳದಲ್ಲಿ ಮಾತುಕತೆ" ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.27-ಕಲಬುರಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ರಂಗಾಯಣದ ವತಿಯಿಂದ "ರಂಗದಂಗಳದಲಿ ಮಾತುಕತೆ" ಕಾರ್ಯಕ್ರಮವನ್ನು ಡಿಸೆಂಬರ್ 28 ರಂದು ಶನಿವಾರ ಬೆಳಿಗ್ಗೆ 11 ಗಂಟೆಗೆ ಕಲಬುರಗಿ ಐವಾನ್ ಶಾಹಿ ರಸ್ತೆಯ ಪಿ.ಡಬ್ಲ್ಯೂ.ಡಿ ಕ್ವಾಟರ್ಸ್ ಹತ್ತಿರದ ಹೆಚ್.ಕೆ.ಇ.ಎಸ್. ಬಾಲಕಿಯರ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಗಳಾಗಿ ರಾಯಚೂರು ಹಿರಿಯ ರಂಗಕರ್ಮಿಗಳಾದ ತಾಯಣ್ಣ ಯರಗೇರಾ ಅವರು ಭಾಗವಹಿಸುವರು. ಕಲಬುರಗಿ ರಂಗಾಯಣ ನಿರ್ದೇಶಕಿ ಡಾ.ಸುಜಾತಾ ಜಂಗಮಶೆಟ್ಟಿ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸುವರು.

ಕಲಬುರಗಿ ಗುಲಬರ್ಗಾ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ.ಕೆ.ಲಿಂಗಪ್ಪ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಕಾರ್ಯಕ್ರಮದಲ್ಲಿ ಕಲಬುರಗಿ ಹೆಚ್.ಕೆ.ಇ.ಎಸ್. ಬಾಲಕಿಯರ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಂಶುಪಾಲ ಉಷಾದೇವಿ ಪಿ.ಪಾಟೀಲ ಉಪಸ್ಥಿತರಿರುವರು.

# ತಾತ್ಕಾಲಿಕ ಪಟ್ಟಿ ಪ್ರಕಟ: ಆಕ್ಷೇಪಣೆ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.27-ಕಲಬುರಗಿ ಮಹಾನಗರ ಪಾಲಿಕೆಯ 2012-13 ಮತ್ತು 2014-15ನೇ ಸಾಲಿನ ಪಾಲಿಕೆ ನಿಧಿ ಪರಿಷ್ಕೃತ ಕ್ರಿಯಾ ಯೋಜನೆಯ 2024-25ನೇ ಸಾಲಿಗಾಗಿ ಶೇ. 24.10ರ ಯೋಜನೆಯಡಿ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟಜಾತಿ/ಪರಿಶಿಷ್ಟಪಂಗಡದ ಸಮುದಾಯ ಭವನಗಳಿಗೆ ಆಟದ ಸಾಮಗ್ರಿ ವಿತರಿಸಲು ಅರ್ಜಿ ಆಹ್ವಾನಿಸಿ, ಅರ್ಜಿದಾರರ ತಾತ್ಕಾಲಿಕ ಪಟ್ಟಿಯನ್ನು ಕಲಬುರಗಿ ಮಹಾನಗರ ಪಾಲಿಕೆಯ ನೋಟೀಸ್ ಬೋರ್ಡ್‌ನಲ್ಲಿ ಈಗಾಗಲೇ ಪ್ರಕಟಿಸಲಾಗಿದೆ.

ಈ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಗಳು ಇದ್ದಲ್ಲಿ 2025ರ ಜನವರಿ 15 ರೊಳಗಾಗಿ ಪೂರಕ ದಾಖಲೆಗಳೊಂದಿಗೆ ಕಲಬುರಗಿ ಮಹಾನಗರಪಾಲಿಕೆಯ ಕಚೇರಿಯಲ್ಲಿ ಆಕ್ಷೇಪಣೆ ಸಲ್ಲಿಸಬೇಕು. ಕೊನೆಯ ದಿನಾಂಕದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಕಲಬುರಗಿ ಮಹಾನಗರ ಪಾಲಿಕೆಯ ಉಪ ಆಯುಕ್ತರು (ಆಡಳಿತ) ಅವರು ತಿಳಿಸಿದ್ದಾರೆ.

# ಋಣಾನುಬಂಧ ವೇದಿಕೆ ವತಿಯಿಂದ ಸುಭಾಷ್ ಹೋತ ಪೇಟೆ ಅವರಿಗೆ ಸನ್ಮಾನ



(ಮಲ್ಲಿಕಾರ್ಜುನ್ ಮಳಿಕೇರಿ)

ಮಲ್ಲಮ್ಮ ನುಡಿ ವಾರ್ತೆ

ವಾರ್ತೆ ನಗರದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಮಾಜ ಸೇವೆ ಪ್ರಶಸ್ತಿ ಪುರಸ್ಕೃತರಾದ ಸುಭಾಷ್ ಹೋತಪೇಟ್ ಅವರಿಗೆ ಋಣಾನುಬಂಧ ಬರುವ ವಧು-ವರರ ವೇದಿಕೆ ವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು.

ಹಿರಿಯ ಪತ್ರಕರ್ತರಾದ ನಾರಾಯಣ್ ಆಚಾರ್ಯ ಸಗರ್. ಮಲ್ಲಿಕಾರ್ಜುನ್ ಮಳಿಕೇರಿ. ಭೀಮರಾಯ ಪೂಜಾರಿ ಹಾಗೂ ಗೆಳೆಯರ ಬಳಗ ಉಪಸ್ಥಿತರಿದ್ದರು.

# ಡಿಸೆಂಬರ್ 31 ರಂದು ರಾಷ್ಟ್ರೀಯ ಗ್ರಾಹಕರ ದಿನಾಚರಣೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.27-ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಖಾಯಂ ಸಂಚಾರಿ ಪೀಠ ಕಲಬುರಗಿ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಕಾನೂನು ಮಾಪನಶಾಸ್ತ್ರ ಇಲಾಖೆ ಮತ್ತು ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಪ್ರಾಧಿಕಾರ ಇವುಗಳ ಸಂಯುಕ್ತಾಶ್ರಯದಲ್ಲಿ "ರಾಷ್ಟ್ರೀಯ ಗ್ರಾಹಕರ ದಿನಾಚರಣೆ-2024" ಕಾರ್ಯಕ್ರಮವನ್ನು ಡಿಸೆಂಬರ್ 31 ರಂದು ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಕಲಬುರಗಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಲಬುರಗಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ (ಪ್ರಭಾರಿ) ಅಧ್ಯಕ್ಷೆ ಪರ್ಹೀನ್ ಬೇಗಂ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ಅಧ್ಯಕ್ಷತೆವಹಿಸುವರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀನಿವಾಸ್ ನವಲೆ ಅವರು ವಿಶೇಷ ಆಹ್ವಾನಿತರಾಗಿ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

ಕಲಬುರಗಿ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯ ಎಮ್. ಲೋಕೇಶ್, ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಕಲಬುರಗಿ ಖಾಯಂ ಸಂಚಾರಿ ಪೀಠದ ಸಹಾಯಕ ನಿಬಂಧಕರು ಮತ್ತು ಸಹಾಯಕ ಆಡಳಿತಾತ್ಮಕ ಅಧಿಕಾರಿ ಮಲ್ಲಿಕಾರ್ಜುನ ಒಡೆಯರ್, ಜಿಲ್ಲಾ ಗ್ರಾಹಕರ ರಕ್ಷಣಾ ಪರಿಷತ್‌ನ ಸದಸ್ಯರು ಹಾಗೂ ಶ್ರೀ ಬಸವೇಶ್ವರ ರೂರಲ್ ಡೆವಲಪ್‌ಮೆಂಟ್ ಟ್ರಸ್ಟಿನ ಅಧ್ಯಕ್ಷರಾದ ಬಾಪುಗೌಡ ಪಾಟೀಲ, ಶಾಲಾ ಶಿಕ್ಷಣ ಇಲಾಖೆಯ (ಪದವಿಪೂರ್ವ) ಉಪನಿರ್ದೇಶಕ ಅಶೋಕ ಶಾಸ್ತ್ರೀ ಹಾಗೂ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ (ಆಡಳಿತ) ಸೂರ್ಯಕಾಂತ ಮದಾನೆ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಕಾರ್ಯಕ್ರಮದಲ್ಲಿ ನ್ಯಾಯವಾದಿಗಳು, ಮಹಾತ್ಮ ಗಾಂಧೀಜಿ ಹಿತರಕ್ಷಣಾ ವೇದಿಕೆಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಗ್ರಾಹಕರ ರಕ್ಷಣಾ ಪರಿಷತ್ತಿನ ಸದಸ್ಯರಾದ ವೈಜನಾಥ ಝಳಕಿ ಅವರು ಉಪನ್ಯಾಸ ನೀಡುವರು.

# ಶಿಷ್ಯವೇತನಕ್ಕಾಗಿ ಮಾಜಿ ಸೈನಿಕರ ಮಕ್ಕಳಿಂದ ಅರ್ಜಿ ಸಲ್ಲಿಕೆ ಕೊನೆಯ ದಿನಾಂಕ ವಿಸ್ತರಣೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.27-ಪ್ರಸಕ್ತ 2024-25ನೇ ಸಾಲಿಗೆ ಪ್ರಧಾನಮಂತ್ರಿ ಶಿಷ್ಯವೇತನ ಯೋಜನೆಯಡಿ ಭಾರತೀಯ ಸೇನೆಯ ಜೆ.ಸಿ.ಓ. ರ್‍ಯಾಂಕವರೆಗಿನ ಅಥವಾ ವಾಯು ಸೇನೆ, ನೌಕಾ ಸೇನೆಯ ತತ್ಸಮಾನ ರ್‍ಯಾಂಕವರೆಗಿನ ಮಾಜಿ ಸೈನಿಕರ ಮಕ್ಕಳು, ದ್ವಿತೀಯ ಪಿ.ಯು.ಸಿ ಯಲ್ಲಿ ಶೇ. 60 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು, ವೃತ್ತಿಪರ ಶಿಕ್ಷಣದಲ್ಲಿ ಪದವಿ ವ್ಯಾಸಂಗಕ್ಕಾಗಿ 2024-25ನೇ ಸಾಲಿನಲ್ಲಿ ಪ್ರವೇಶಾತಿ ಪಡೆದವರಿಂದ ಶಿಷ್ಯವೇತನಕ್ಕಾಗಿ ಅರ್ಜಿ ಸಲ್ಲಿಕೆ ಕೊನೆಯ ದಿನಾಂಕವನ್ನು 2025ರ ಜನವರಿ 3 ರವರೆಗೆ ವಿಸ್ತರಿಸಲಾಗಿದೆ.

ಅದರೆ ಕೆಲವು ಪ್ರವೇಶಾತಿ ವಿಳಂಬವಾಗಿರುವುದರಿಂದ ಕೋರಿಕೆಯ ಮೇರೆಗೆ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವನ್ನು 2024ರ ಡಿಸೆಂಬರ್ 30 ರಿಂದ 2025ರ ಜನವರಿ 3 ರವರೆಗೆ ಒಂದು ಬಾರಿ ಮಾತ್ರ ವಿಸ್ತರಿಸಲಾಗಿದೆ. ಅರ್ಹ ಮಾಜಿ ಸೈನಿಕರ ಮಕ್ಕಳು ಕೇಂದ್ರೀಯ ಸೈನಿಕ ಮಂಡಳಿಯ https://online.ksb.gov.in ವೆಬ್‌ಸೈಟ್‌ದಲ್ಲಿ ಮೇಲ್ಕಂಡ ಕೊನೆಯ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸಬೇಕು. ಕೊನೆಯ ದಿನಾಂಕದ ನಂತರ ಯಾವುದೇ ದಿನಾಂಕ ವಿಸ್ತರಣೆ ಮಾಡಲಾಗುವುದಿಲ್ಲ. ಈ ಹಿಂದೆ ಅರ್ಜಿ ಸಲ್ಲಿಕೆ ಕೊನೆಯ ದಿನಾಂಕವನ್ನು 2024ರ ನವೆಂಬರ್ 30 ರಂದು ನಿಗದಿಪಡಿಸಲಾಗಿತ್ತು.

ಹೆಚ್ಚಿನ ಮಾಹಿತಿಗಾಗಿ ಕೇಂದ್ರೀಯ ಸೈನಿಕ ಮಂಡಳಿಯ ಣಣಠಿ:// ಠಟಿಟುಟಿಜ. ಇ ಛ.ರಠತ.ಟಿ ವೆಬ್‌ಸೈಟ್‌ನ್ನು ಅಥವಾ ಕಲಬುರಗಿ ಸೈನಿಕ ಕಲ್ಯಾಣ ಮತ್ತು ಪುರ್ನವಸತಿ ಇಲಾಖೆ ಉಪನಿರ್ದೇಶಕರ ಕಚೇರಿಯನ್ನು ಹಾಗೂ ಕಚೇರಿ ದೂರವಾಣಿ ಸಂಖ್ಯೆ 08472-225003 ಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಬೇಕೆಂದು ಕಲಬುರಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಸೇಡಂ: ಫಲಾನುಭವಿಗಳ ತಾತ್ಕಾಲಿಕ ಪಟ್ಟಿ ಪ್ರಕಟ: ಆಕ್ಷೇಪಣೆ ಆಹ್ವಾನ

ಕಲಬುರಗಿ,ಡಿ.26.(ಕ.ವಾ)- ಸೇಡಂ ಪುರಸಭೆ ವತಿಯಿಂದ 2024-25ನೇ ಸಾಲಿನ ಎಸ್.ಎಫ್.ಸಿ. ಯೋಜನೆ ಶೇ.7.25ರ ಅನುದಾನದಲ್ಲಿ ಇತರೆ ಹಿಂದುಳಿದ ವರ್ಗದವರಿಗೆ ಪಿ.ಜಿ. ಓದುತ್ತಿರುವ ವಿದ್ಯಾರ್ಥಿಗಳಿಗೆ ಸಹಾಯಧನ ನೀಡಲು ಹಾಗೂ 2023-24 ಮತ್ತು 2024-25ನೇ ಸಾಲಿನ ಶೇ.5ರ ಅನುದಾನದಲ್ಲಿ ಅಂಗವಿಕಲರಿಗೆ ತ್ರೀಚಕ್ರ ಮೋಟಾರು ವಾಹನ ನೀಡಲು ಫಲಾನುಭವಿಗಳನ್ನು ತಾತ್ಕಾಲಿಕ ಆಯ್ಕೆ ಮಾಡಿ, ಆಯ್ಕೆ ಮಾಡಲಾದ ಫಲಾನುಭವಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸೇಡಂ ಪುರಸಭೆಯ ಕಾರ್ಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ ಎಂದು ಸೇಡಂ ಪುರಸಭೆಯ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

ಈ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಲಿಖಿತವಾಗಿ ಪೂರಕದಾಖಲೆಗಳೊಂದಿಗೆ ಸೇಡಂ ಪುರಸಭೆ ಕಚೇರಿಯಲ್ಲಿ 2025ರ ಜನವರಿ 4 ರೊಳಗಾಗಿ ಆಕ್ಷೇಪಣೆ ಸಲ್ಲಿಸಬೇಕು. ಕೊನೆಯ ದಿನಾಂಕದ ನಂತರ ಬಂದ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

ಆರನೇ ತರಗತಿಗೆ ಪ್ರವೇಶ ಪರೀಕ್ಷೆ: ವೆಬ್‌ಸೈಟ್‌ದಿಂದ

# ಪ್ರವೇಶಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.27-ಕೋರವಾರ ಜವಾಹರನವೋದಯ ವಿದ್ಯಾಲಯದ 6ನೇ ತರಗತಿಯ ಪ್ರವೇಶ ಪರೀಕ್ಷೆಯು 2025ರ ಜನವರಿ 18 ರಂದು ನಡೆಯಲಿದ್ದು, ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಹಾಲ್ ಟಿಕೇಟ್‌ನ್ನು ವೆಬ್‌ಸೈಟ್‌ದಿಂದ ಡೌನ್‌ಲೋಡ್ ಮಾಡಿಕೊಳ್ಳಬೇಕೆಂದು ಕೋರವಾರ ಜವಾಹರನವೋದಯ ವಿದ್ಯಾಲಯದ ಪ್ರಾಂಶುಪಾಲರು ತಿಳಿಸಿದ್ದಾರೆ. ಈ ಪ್ರವೇಶ ಪರೀಕ್ಷೆಯು ಹಾಲ್ ಟಿಕೇಟ್ ವೆಬ್‌ಸೈಟ್‌ದಲ್ಲಿ ಲಭ್ಯವಿದ್ದು, ಈ ವಿದ್ಯಾಲಯದ ವ್ಯಾಪ್ತಿಗೆ ಬರುವ ತಾಲೂಕುಗಳಾದ ಚಿಂಚೋಳಿ, ಚಿತ್ತಾಪುರ ಹಾಗೂ ಸೇಡಂ ತಾಲೂಕಿನ ವಿದ್ಯಾರ್ಥಿಗಳ ಪಾಲಕರು ಹಾಗೂ ಶಿಕ್ಷಕರು ಹಾಲ್ ಟಿಕೇಟ್‌ನ್ನು https://cbseitms.rcil.gov.in/nvs/AdminCard/Adminಅಚಿಡಿಜ ವೆಬ್‌ಸೈಟ್‌ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬೇಕೆಂದು ಅವರು ತಿಳಿಸಿದ್ದಾರೆ. ಐ.ಟಿ ಪಾರ್ಕ್ ಫೀಡರ್: ರಾಮಮಂದಿರ ಹಿಂದುಗಡೆ, ಶಿವಶಕ್ತಿ ನಗರ, ರೇಣುಕಾ ದಾಭಾ ತಿಮ್ಮಾಪುರಿ ಲೇಔಟ್, ಕಾರ್ತೀಕ ಹೈಟ್ಸ್ ಗಿರಿ ಲೇಔಟ್, ಲಕ್ಷ್ಮೀನಾರಯಣ ಕಲ್ಯಾಣ ಮಂಟಪ, ಹಾಗೂ ಸುತ್ತ ಮುತ್ತಲ್ಲಿನ ಪ್ರದೇಶಗಳು, ಜಯತೀರ್ಥ ಕಲ್ಯಾಣ ಮಂಟಪ ಓಝಾ ಲೇಔಟ್ ಉದನೂರ ರಸ್ತೆ, ಐ.ಟಿ.ಪಾರ್ಕ, ಸಂತೋಷ ಕಾಲೋನಿ,

ಕೋಟನೂರ ವಾಟರ್ ಸಪ್ಲೈ ಫೀಡರ್: ಕೋಟನೂರ್ ವಾಟರ್ ಸಪ್ಲೆ, ರಾಮ ಮಂದಿರ ವಿವೇಕಾನಂದ ನಗರ, ಹೊಸ ಓಜಾ ಲೇಔಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಜಿ.ಡಿ.ಎ.ಫೀಡರ್: ಧರಿಯಾಪೂರ ಜಿ.ಡಿ.ಎ, ಕೋಟನೂರ ಜಿ.ಡಿ.ಎ ನಿಯರ ಕಾಢಾ ಕಛೇರಿ, ಉಪ್ಪಿನ ತೋಟ, ಬನಶಂಕರಿ ಆಸ್ಪತ್ರೆ, ಕಾಯಕ ಕಾಲೇಜು, ಆರ್ಯನ್ ಶಾಲೆ, ಓಜಾ ಲೇಔಟ್, ವಿವೇಕಾನಂದ ಕಾಲೋನಿ, ಆರ್.ಟಿ ನಗರ, ಸಜ್ಜನ ಲೇಔಟ್, ಆರ್ಯನ್ ಶಾಲೆ ಸುತ್ತಮುತ್ತಲಿನ ಪ್ರದೇಶಗಳು ಅಂಬೇಡ್ಕರ ಹಾಸ್ಟೇಲ್.

ಹೌಸಿಂಗ್ ಬೋರ್ಡ್ ಫೀಡರ್: ಜಿ.ಡಿ.ಎ, ಪಿ ಆಂಡ್ ಟಿ, ನವಜೀವನ ನಗರ, ಮೋಹನ ನಗರ ಗಾಬ್ರೇ ಲೇಔಟ್, ಹೌಸಿಂಗ್ ಬೋರ್ಡ ಕಾಲೋನಿ ಕಣ್ಮಕರ ಲೇಔಟ್ ಕಾಯಕ ಮತ್ತು ನಳಂಧ ಶಾಲೆ, ತೋಶಣಿ ಬಾಲಾ ಲೇಔಟ್, ಸಿದ್ದೇಶ್ವರ ಕಲ್ಯಾಣ ಮಂಟಪ ಗಣೇಶ ನಗರ ಭಗ್ಯವಂತಿ ನಗರ, ಮುಕ್ತಾ ಟಾಕೀಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಉದನೂರ ಐ.ಪಿ. ಫೀಡರ್: ಉದನೂರ ಐ.ಪಿ. ಗ್ರಾಹಕರು. ಸರಾಫ್ ಬಜಾರ್ ಫೀಡರ್: ಸರಾಫ್ ಬಜಾರ್, ಕ್ಲಾಥ್ ಬಜಾರ್, ಚಪ್ಪಲ ಬಜಾರ, ಹೋಳಿ ಕಟ್ಟಾ, ಮಕ್ತಂಪೂರ್, ಸಂದಾಲ ಗಲ್ಲಿ, ಚಟ್ಟೆವಾಡಿ, ಹೊಸ ಡಂಕಾ, ಸಂತ್ರಾಸ್‌ವಾಡಿ ಮತ್ತು ಸುತ್ತಮುತ್ತಲಿನ ಪ್ರದೇಶಗಳು. ಗಾಜಿಪೂರ ಫೀಡರ್: ಅತ್ತರ ಕಂಪೌಂಡ, ಗಾಜಿಪೂರ, ಚಕ್ಕರ ಕಟ್ಟಾ ಸೂಪರ್ ಮಾರ್ಕೆಟ್ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು.

ಮಿಲನ್ ಚೌಕ್ ಫೀಡರ್: ಮಿಲನ್ ಚೌಕ್, ಮಟನ್ ಮಾರ್ಕೆಟ್ ಮೇಹಾಬಾಸ್ ಏರಿಯಾ, ಗಾಜಿಪೂರ್ ಬಸವಣ್ಣ ದೇವಸ್ಥಾನ, ಸರಸ್ವತಿ ಗೋದಾಮ್, ಜಗತ್ ಪೋಸ್ಟ ಆಪೀಸ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು. .ಎಸ್.ಎನ್.ಎಲ್. ಫೀಡರ್: ಸೂಪರ್ ಮಾರ್ಕೆಟ್, ಸಿಟಿ ಬಸ್‌ನಿಲ್ದಾಣ, ಚೌಪಟ್ಟಿ ಕಲಬುರಗಿ ಕೋಟೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು.

ಲಾಲ್‌ಗೀರಿ ಫೀಡರ್: ಲಾಲ್‌ಗೀರಿ ಕ್ರಾಸ್, ಜನತಾ ಲೇಔಟ್, ಕೈಲಾಸ್ ನಗರ, ಕಾಳೆ ಲೇಔಟ್, ಅಗ್ನಿ ಶಾಮಕ ಠಾಣೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು. ಕಿರಣಾ ಬಜಾರ ಫೀಡರ್: ಕಿರಾಣಾ ಬಜಾರ್, ಮಾರವಾಡಿ ಗಲ್ಲಿ, ಖಟಗಪುರ, ಕೋಟೆ ರಸ್ತೆ, ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಎಫ್-1 ಚಿಂಚನಸೂರ ಎನ್.ಜೆ.ವಾಯ್ ಫೀಡರ್ ಆಂಡ್ ಎಫ್-3 ಕಲ್ಲಹಂಗರಗಾ ಐಪಿ, ಎಫ್-2 ಬಣ್ಣೂರ ಎನ್.ಜೇ.ವಾಯ್, ಎಫ್-5 ಸುಲ್ತಾನಪೂರ ಐಪಿ, ಎಫ್-6 ಜಂಬಗಾ ಐಪಿ ಆಂಡ್ ಎಫ್-7 ಜಂಬಗಾ ಎನ್.ಜೆ.ವಾಯ್ ಫೀಡರ್: ತಾಜ ಸುಲ್ತಾನಪೂರ, ಸೈಯದ ಚಿಂಚೋಳಿ, ಕುಮಸಿ, ಗಣಜಲಖೇಡ, ಬನ್ನೂರ, ಜಂಬಗಾ, ಅಷ್ಟಗಾ, ಕಲ್ಲಹಂಗರಗಾ, ಕುಮಸಿವಾಡಿ, ಕೆರಿ ಅಂಬಲಗಾ, ಚಿಂಚನಸೂರ ಮತ್ತು ಭೀಮಳ್ಳಿ.

## ಪ್ರಧಾನಿ ಮೋದಿ ಸೇರಿದಂತೆ ಗಣ್ಯರಿಂದ ಮನಮೋಹನ್ ಸಿಂಗ್ ಅವರಿಗೆ ಅಂತಿಮ ನಮನ ಸಲ್ಲಿಕೆ



ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ, ಡಿ.27 : ಪ್ರಧಾನಿ ನರೇಂದ್ರ ಮೋದಿ ಅವರು ಇಂದು ದೆಹಲಿಯ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ನಿವಾಸಕ್ಕೆ ತೆರಳಿ ಅಂತಿಮ ನಮನ ಸಲ್ಲಿಸಿದರು. ಕೇಂದ್ರ ಸಚಿವರಾದ ಅಮಿತ್ ಶಾ ಮತ್ತು ಜೆಪಿ ನಡ್ಡಾ ಅವರ ಜೊತೆಗಿದ್ದರು.ಪಿಎಂ ಮೋದಿ ಅವರು ನಿನ್ನೆ ಫಿ ಪೋಸ್ಟ್‌ನಲ್ಲಿ ಸಿಂಗ್ ಇಂಡಿಯಾದ ಅತ್ಯಂತ ಪ್ರತಿಷ್ಠಿತ ನಾಯಕರು ಎಂದು ಕರೆದಿದ್ದರು.

ವಿನಮ್ರ ಮೂಲದಿಂದ ಏರಿದ ಅವರು ಗೌರವಾನ್ವಿತ ಅರ್ಥಶಾಸ್ತ್ರಜ್ಞರಾದರು. ಅವರು ಹಣಕಾಸು ಸಚಿವರಾಗಿಯೂ ಸೇರಿದಂತೆ ವಿವಿಧ ಸರ್ಕಾರಿ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು, ವರ್ಷಗಳಲ್ಲಿ ನಮ ಆರ್ಥಿಕ ನೀತಿಯ ಮೇಲೆ ಬಲವಾದ ಮುದ್ರೆ ಹಾಕಿದರು. ಸಂಸತ್ತಿನಲ್ಲಿ ಅವರ ಮಧ್ಯಸ್ಥಿಕೆಗಳು ಸಹ ಒಳನೋಟವುಳ್ಳದ್ದಾಗಿದೆ ಎಂದು ಪಿಎಂ ಮೋದಿ ಹೇಳಿದರು.

ಡಾ ಮನಮೋಹನ್ ಸಿಂಗ್ ಜಿ ಅವರು ಪ್ರಧಾನಿಯಾಗಿದ್ದಾಗ ಮತ್ತು ನಾನು ಗುಜರಾತ್ ಸಿಎಂ ಆಗಿದ್ದಾಗ ನಿಯಮಿತವಾಗಿ ಸಂವಹನ ನಡೆಸುತ್ತಿದ್ದವು. ನಾವು ಆಡಳಿತಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ವ್ಯಾಪಕವಾದ ಚರ್ಚೆಗಳನ್ನು ನಡೆಸುತ್ತೇವೆ. ಅವರ ಬುದ್ಧಿವಂತಿಕೆ ಮತ್ತು ನಮ್ರತೆ ಯಾವಾಗಲೂ ಗೋಚರಿಸುತ್ತದೆ. ಈ ದುಃಖದ ಸಮಯದಲ್ಲಿ, ನನ್ನ ಆಲೋಚನೆಗಳು ಡಾ. ಮನಮೋಹನ್ ಸಿಂಗ್ ಅವರ ಕುಟುಂಬ, ಅವರ ಸ್ನೇಹಿತರು ಮತ್ತು ಅಸಂಖ್ಯಾತ ಅಭಿಮಾನಿಗಳೊಂದಿಗೆ ಇರುತ್ತದೆ ಎಂದು ಅವರು ಹೇಳಿದರು.

### ಮನಮೋಹನ್ ಸಿಂಗ್ ಅವರ ಅಂತಿಮ ದರ್ಶನ ಪಡೆದ ಹೆಚ.ಡಿ.ಕುಮಾರಸ್ವಾಮಿ

ಬೆಂಗಳೂರು, ಡಿ.27– ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಹೆಚ.ಡಿ.ಕುಮಾರಸ್ವಾಮಿ ಅವರು ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರ ಅಂತಿಮ ದರ್ಶನ ಪಡೆದು ಸಂತಾಪ ಸಲ್ಲಿಸಿದ್ದಾರೆ. ಇಂದು ಬೆಳಗ್ಗೆಯೇ ನಗರದಿಂದ ದೆಹಲಿಗೆ ತೆರಳಿದ ಅವರು ಮನಮೋಹನ್ ಸಿಂಗ್ ಅವರಿಗೆ ಅಂತಿಮ ನಮನ ಸಲ್ಲಿಸಿದ್ದಾರೆ.

ಭಾರತದ ಮಾಜಿ ಪ್ರಧಾನಮಂತ್ರಿ, ಪ್ರಖ್ಯಾತ ವಿತ್ತತಜ್ಞರು, ಆರ್ಥಿಕ ಸುಧಾರಣೆಗಳ ಹರಿಕಾರರೂ ಆಗಿದ್ದ ಡಾ.ಮನಮೋಹನ್ ಸಿಂಗ್ ಅವರ ನಿಧನದ ವಾರ್ತೆ ಕೇಳಿ ಬಹಳ ದುಃಖವಾಯಿತು ಎಂದು ಕುಮಾರಸ್ವಾಮಿ ಎಕ್ಸ್ ನಲ್ಲಿ ತಿಳಿಸಿದ್ದಾರೆ.

ದೂರದೃಷ್ಟಿ, ಸಂಯಮ ಮತ್ತು ತಮ ಆರ್ಥಿಕ ಮೇದಸ್ಸಿನಿಂದ ರಾಷ್ಟ್ರವನ್ನು ದುರಿತ ಕಾಲದಲ್ಲಿ ಸಶಕ್ತವಾಗಿ ಮುನ್ನಡೆಸಿದ್ದ ಮನಮೋಹನ್ ಸಿಂಗ್ ಅವರು ದೇಶಕ್ಕೆ ನೀಡಿರುವ ಕೊಡುಗೆ ಅಪಾರ. ಆರ್ಥಿಕ ಸುಧಾರಣೆಗಳ ಮೂಲಕ ಭಾರತಕ್ಕೆ ಜಾಗತಿಕ ಮನ್ನಣೆ ತಂದುಕೊಟ್ಟವರು. ಅವರ ಕೊಡುಗೆಗಳು ಚಿರಸರಣೀಯ ಎಂದು ಅವರು ಬಣ್ಣಿಸಿದ್ದಾರೆ.

ಶ್ರೀಯುತರ ಆತಕ್ಕೆ ಚಿರಶಾಂತಿ ಸಿಗಲಿ ಹಾಗೂ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬಕ್ಕೆ, ಅಭಿಮಾನಿಗಳಿಗೆ ಕರುಣಿಸಲಿ ಎಂದು ಅವರು ಪ್ರಾರ್ಥಿಸಿದ್ದಾರೆ.

### ಸಿಂಗ್ ಅತ್ಯುತ್ತಮ ಅರ್ಥಶಾಸ್ತ್ರಜ್ಞ ; ಬಿರ್ಲಾ

ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ನಿಧನದಿಂದ ಭಾರತವು ತನ್ನ ಅತ್ಯುನ್ನತ ನಾಯಕ ಮತ್ತು ಅತ್ಯುತ್ತಮ ಅರ್ಥಶಾಸ್ತ್ರಜ್ಞರನ್ನು ಕಳೆದುಕೊಂಡಿದೆ ಎಂದು ಆದಿತ್ಯ ಬಿರ್ಲಾ ಗ್ರೂಪ್ ಅಧ್ಯಕ್ಷ ಕುಮಾರ್ ಮಂಗಳಂ ಬಿರ್ಲಾ ಹೇಳಿದ್ದಾರೆ. ಸಿಂಗ್ ಅವರ ನಿಧನಕ್ಕೆ ಸಂತಾಪ ಸೂಚಿಸಿದ ಬಿರ್ಲಾ, ಹಲವಾರು ದಶಕಗಳ ಸಾರ್ವಜನಿಕ ಜೀವನದಲ್ಲಿ ಅವರ ಬುದ್ಧಿಶಕ್ತಿ, ಬುದ್ಧಿವಂತಿಕೆ ಮತ್ತು ನಮ್ರತೆ ಮಾದರಿಯಾಗಿ ನಿಂತಿದೆ, ರಾಷ್ಟ್ರದ ಆತಸಾಕ್ಷಿಯ ಮೇಲೆ ಅಳಿಸಲಾಗದ ಗುರುತು ಹಾಕಿತು.

ಭಾರತವು ತನ್ನ ಅತ್ಯುನ್ನತ ನಾಯಕರಲ್ಲಿ ಒಬ್ಬರನ್ನು ಮತ್ತು ಅತ್ಯುತ್ತಮ ಅರ್ಥಶಾಸ್ತ್ರಜ್ಞರನ್ನು ಕಳೆದುಕೊಂಡಿದೆ. ಅವರ ಅತ್ಯಂತ ನಿರ್ಣಾಯಕ ಕೊಡುಗೆ–ಯುಗದ 91 ರ ಸುಧಾರಣೆಗಳು ಬಹು–ದಶಮಾನದ ಆರ್ಥಿಕ ಉತ್ಕರ್ಷಕ್ಕೆ ಉತ್ತೇಜನ ನೀಡಿತು ಮತ್ತು ಹೆಚ್ಚು ಮುಖ್ಯವಾಗಿ ಭಾರತ ಮತ್ತು ಭಾರತೀಯರ ಸಾಧ್ಯತೆಗಳ ಲೆಕ್ಕಾಚಾರವನ್ನು ಮರುರೂಪಿಸಿತು ಎಂದು ಬಿರ್ಲಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹಲವು ದಶಕಗಳಿಂದ ಸಾರ್ವಜನಿಕ ಜೀವನದಲ್ಲಿ ಅವರ ಬುದ್ಧಿಶಕ್ತಿ, ಬುದ್ಧಿವಂತಿಕೆ ಮತ್ತು ನಮ್ರತೆ ಮಾದರಿಯಾಗಿ ನಿಂತಿದೆ, ಇದು ರಾಷ್ಟ್ರದ ಆತಸಾಕ್ಷಿಯ ಮೇಲೆ ಅಳಿಸಲಾಗದ ಗುರುತು ಹಾಕಿತು ಎಂದು ಅವರು ಹೇಳಿದರು. ವಿನಮ್ರ ಆರಂಭದಿಂದ ಪ್ರಧಾನಿ ಕಚೇರಿಗೆ ಸಿಂಗ್ ಅವರ ಅಸಾಧಾರಣ ಏರಿಕೆಯು ಭಾರತದ ಅಪರಿಮಿತ ಸಾಮರ್ಥ್ಯವನ್ನು ಬಿಂಬಿಸುತ್ತದೆ ಮತ್ತು ತಲೆಮಾರುಗಳ ಭಾರತೀಯರಿಗೆ ಸ್ಫೂರ್ತಿಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ಬಿರ್ಲಾ ಹೇಳಿದರು.

## ಅನಧಿಕೃತವಾಗಿ ಕಾಲುವೆ ನೀರನ್ನು ಬಳಸುವ ರೈತರಿಗೆ ಎಚ್ಚರಿಕೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು,ಡಿ.27–ತುಂಗಭದ್ರಾ ಎಡದಂಡೆ ಕಾಲುವೆಯು ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ 2,44,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯನ್ನು ಒದಗಿಸುತ್ತಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಕಾಲುವೆಯ ಎಡಭಾಗದಲ್ಲಿ ರೈತರು ಅನಧಿಕೃತವಾಗಿ ಹೊಂಡಗಳನ್ನು (ವಕ್ರಾಣಿ) ಮತ್ತು ವಿತರಣಾ ಕಾಲುವೆಯ ಪಕ್ಕದಲ್ಲಿ ಕೆರೆಗಳನ್ನು ನಿರ್ಮಿಸಿ, ನಿರೀಕ್ಷಿತ ಪ್ರಮಾಣಕ್ಕಿಂತ ಹೆಚ್ಚು ನೀರನ್ನು ಬಳಸುತ್ತಿದ್ದಾರೆ. ಇದು ಗೇಜ್‌ಗಳನ್ನು ನಿರ್ವಹಿಸಲು ಮತ್ತು ನೀರಿನ ಸಮರ್ಪಿತ ವಿತರಣೆಗೆ ತೊಂದರೆ ಉಂಟುಮಾಡುತ್ತಿದೆ.

ತುಂಗಭದ್ರಾ ಜಲಾಶಯದಿಂದ ರಾಯಚೂರಿನವರೆಗೆ ವಿಸ್ತಾರವಾದ 226.91 ಕಿ.ಮೀ ಉದ್ದದ ಈ ಕಾಲುವೆಯು ವಡ್ಡರಹಟ್ಟಿ, ಸಿಂಧನೂರು, ಸಿರವಾರ ಮತ್ತು ಯರಮರಸ್ ವಿಭಾಗಗಳಿಂದ ನಿರ್ವಹಿಸಲ್ಪಡುತ್ತದೆ. 21ನವೆಂಬರ್ 2024 ರಂದು ವಿಕಾಸ ಸೌಧ ಕೊಠಡಿ ಸಂಖ್ಯೆ 419ರಲ್ಲಿ ನಡೆದ ತುಂಗಭದ್ರಾ ಯೋಜನೆಯ 122ನೇ ನೀರಾವರಿ ಸಲಹಾ ಸಮಿತಿಯ ಸಭೆಯಲ್ಲಿ, ಮುಂಗಾರು ಹಂಗಾಮಿನಲ್ಲಿ ಬಳಕೆಯಾದ ನೀರಿನ ಪ್ರಮಾಣ ಮತ್ತು ಹಿಂಗಾರು ಹಂಗಾಮಿಗೆ ಲಭ್ಯವಿರುವ ನೀರನ್ನು ಕಾಲುವೆಗಳಲ್ಲಿ ಹರಿಸಲು ನಿರ್ಧಾರ ಕೈಗೊಳ್ಳಲಾಯಿತು. ಈ ಸಭೆಯಲ್ಲಿ ಅಧಿಕೃತ ಬೆಳೆಗಳನ್ನು ಮಾತ್ರ ಬೆಳೆಯುವಂತೆ ರೈತರಿಗೆ ಕೋರಿಕೆ ಸಲ್ಲಿಸಲಾಗಿದ್ದು.

ಮಾನವಿ, ಸಿರವಾರ, ಕವಿತಾಳ ಮತ್ತು ಯರಮರಸ್ ಮುಂತಾದ ಪ್ರದೇಶಗಳಲ್ಲಿ ರೈತರು ನಿರಂತರವಾಗಿ ಮುಷ್ಕರ ಹಾಗೂ ರಸ್ತೆ ತಡೆಗಳನ್ನು ಹಮ್ಮಿಕೊಂಡು ನಿಗದಿತ ಪ್ರಮಾಣದ ನೀರನ್ನು ಹರಿಸಬೇಕೆಂದು ಹಕ್ಕೊತ್ತಾಯ ಮಾಡುತ್ತಿದ್ದಾರೆ. ಆದರೆ, ಈ ಅನಧಿಕೃತ ನೀರಿನ ಬಳಕೆಯನ್ನು ತಡೆಯದಿದ್ದಲ್ಲಿ ಕೆಳಗಿನ ರೈತರಿಗೆ ನಿಗದಿತ ಪ್ರಮಾಣದ ನೀರನ್ನು ಹರಿಸಲು ಈ ಇಲಾಖೆಗೆ ಸಾಧ್ಯವಾಗುವುದಿಲ್ಲ.

ತುಂಗಭದ್ರಾ ಎಡದಂಡೆ ಕಾಲುವೆಯ ಎಡಭಾಗದಲ್ಲಿ ಅನಧಿಕೃತವಾಗಿ ನೀರನ್ನು ಬಳಸುತ್ತಿರುವ ರೈತರು ಇನ್ನು ಮುಂದೆ ಈ ರೀತಿ ಅನಧಿಕೃತ ನೀರಿನ ಬಳಕೆಯನ್ನು ನಿಲ್ಲಿಸಬೇಕೆಂದು ಇಲ್ಲದವಾದಲ್ಲಿ ಅಂತಹವರ ವಿರುದ್ಧ ನೀರಾವರಿ ತಿದ್ದುಪಡಿ ಕಾಯ್ದೆಯ ಪ್ರಕಾರ 2 ವರ್ಷಗಳ ಕಾರಾಗೃಹ ಶಿಕ್ಷೆ ಮತ್ತು 2ಲಕ್ಷ ರೂಪಾಯಿ ಜುಲ್ಮಾನೆಯನ್ನು ವಿಧಿಸಬಹುದು ಎಂದು ಯರಮರಸ್ ತುಂಗಭದ್ರಾ ಕಾಲುವೆ ನಿರ್ಮಾಣ ವೃತ್ತದ ಅಧೀಕ್ಷಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಿರವಾರ ಶಿಶು ಅಭಿವೃದ್ಧಿ ಯೋಜನೆ: ಅಪೂರ್ಣ ಅರ್ಜಿಗಳನ್ನು ಪೂರ್ಣಗೊಳಿಸಲು ಅವಕಾಶ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು,ಡಿ.27– ರಾಯಚೂರು ಜಿಲ್ಲೆಯ ಸಿರವಾರ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ ಖಾಲಿ ಇರುವ ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗಳಿಗೆ ಆನ್‌ಲೈನ್ ವೆಬ್‌ಸೈಟ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. 2024 ಸೆಪ್ಟೆಂಬರ್ 21 ರಿಂದ 2024 ಅಕ್ಟೋಬರ್ 20ರವರೆಗೆ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು.

ಆದರೆ, 2024 ಡಿಸೆಂಬರ್ 20ರ ಸರ್ಕಾರದ ಆದೇಶದ ಪ್ರಕಾರ, ಅರ್ಜಿ ಸಲ್ಲಿಸುವ ನಾಲ್ಕು ಹಂತಗಳನ್ನು ಪೂರ್ಣಗೊಳಿಸದೇ ಅಪೂರ್ಣ ಅರ್ಜಿಗಳನ್ನು ಸಲ್ಲಿಸಿದ ಅಭ್ಯರ್ಥಿಗಳಿಗೆ ಮಾತ್ರ, 2024 ಡಿಸೆಂಬರ್ 26 ರಿಂದ 2025 ಜನವರಿ 5ರ ವರೆಗೆ ತಮ್ಮ ಅರ್ಜಿಗಳನ್ನು ಪೂರ್ಣಗೊಳಿಸಲು ವೆಬ್‌ಸೈಟ್‌ನಲ್ಲಿ ಇಲಾಖೆಯ ವತಿಯಿಂದ ಅವಕಾಶ ಕಲ್ಪಿಸಲಾಗಿದೆ.

ಅಪೂರ್ಣ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ, ತಮ್ಮ ಅರ್ಜಿಗಳನ್ನು 2024 ಡಿಸೆಂಬರ್ 26ರಿಂದ 2025 ಜನವರಿ 5ರ ಸಂಜೆ 5:30ರವರೆಗೆ ಪೂರ್ಣಗೊಳಿಸಲು ಅವಕಾಶವಿದೆ ಎಂದು ಸಿರವಾರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಳ್ಳಾರಿ ಸೊಸೈಟಿ ನಿರ್ದೇಸದಕ ಸ್ಥಾನಗಳಿಗೆಡಿ.29 ಮತದಾನ 8 ಕ್ಷೇತ್ರಕ್ಕೆ 15 ಜನ ಸ್ಪರ್ಧೆ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಡಿ.27:ನಗರದಲ್ಲಿರುವ ಬಳ್ಳಾರಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ(ಸೊಸೈಟಿ) ದ 12 ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ಘೋಷಣೆಯಾಗಿದ್ದು ಇದರಲ್ಲಿ ನಾಲ್ಕು ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗಿದ್ದು. ಉಳಿದ ಎಂಟು ಬಗ್ಗೆ ಗೆ 15 ಜನಸ್ಪರ್ಧಾ ಕಣದಲ್ಲಿದ್ದಾರೆ. ಸಮಾಜ ಅಧ್ಯಕ್ಷರುಗಳಾದ ದೊಡ್ಡನಗೌಡ ಮತ್ತು ಎಂ.ಶ್ರೀಧರ್ ಅವರ ಗುಂಪಿನ ನಡುವೆ ಸ್ಪರ್ಧೆ ಏರ್ಪಟ್ಟಿದೆ.

ಡಿ. 29 ರಂದು ಸೊಸೈಟಿ ಸಭಾಂಗಣದಲ್ಲಿ ಬೆಳಿಗ್ಗೆ 9. ರಿಂದ ಸಂಜೆ ನಾಲ್ಕರವರೆಗೆ ಮತದಾನ ನಡೆಯಲಿದೆ

700ಕ್ಕೂ ಹೆಚ್ಚು ಮತದಾರರಿದ್ದಾರೆ.

ಒಬಿಸಿ ಬಿ ನ ಒಂದು ಸ್ಥಾನಕ್ಕೆ ಮಾಜಿ ಅಧ್ಯಕ್ಷ ದೊಡ್ಡನಗೌಡ, ಎಸ್ಸಿ ಮೀಸಲು ಒಂದು ಸ್ಥಾನಕ್ಕೆ ಶ್ರೀರಾಂಪುರ ಕಾಲೋನಿಯ ಶಾರದಮ್ಮ, ಮಹಿಳೆಯರ ಮೀಸಲಿನ ಎರೆಡು ಸ್ಥಾನಗಳಿಗೆ ಚಂದ್ರಿಕಾ ಮತ್ತು ಶ್ರೀಕಳಾ ಇವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಳಿದಂತೆ ಸಾಲಗಾರರಲ್ಲದ ಕ್ಷೇತ್ರದಿಂದ ಒಂದುಸ್ಥಾನಕ್ಕೆ ಜ್ಯೋತಿ ಮತ್ತು ಶಿಲ್ಪ ಅವರು ಕಣದಲ್ಲಿದ್ದಾರೆ.

ಇನ್ನು ಸಾಲಗಾರರ ಸಾಮಾನ್ಯ ಕ್ಷೇತ್ರದ ಐದು ಸ್ಥಾನಗಳಿಗೆ ಎಂಟು ಜನ ಕಣದಲ್ಲಿದ್ದಾರೆ. ಅವರುಗಳೆಂದರೆ ಹಾಲಿ ಅಧ್ಯಕ್ಷ ಬಿ.ಕೆ.ಕೆರಕೋಡಪ್ಪ,ಜೆ.ಪಂಪಾಪತಿ, ಬೆಳ್ಳಿ ಕಟ್ಟೆಪ್ಪ, ಶ್ರೀನಿವಾಸರೆಡ್ಡಿ, ಬಜ್ಜೆಪ್ಪ,ಎಂ.ದುರ್ಗಾಪ್ರಸಾದ್, ಕೆ.ಫಕ್ಕೀರಪ್ಪ, ಹಂಪವತಿ ಕೆ ಇವರುಗಳಾಗಿದ್ದಾರೆ.

ಇನ್ನು ಓಬಿಸಿ ಎ ಕ್ಷೇತ್ರದ ಒಂದು ಸ್ಥಾನಕ್ಕೆ ಕಲ್ಪನಾ ಕೆ.ಜೆ,ಯು.ಕೆ.ತಿಮ್ಮಪ್ಪ ಮತ್ತು ಹೊನ್ನೂರಸ್ವಾಮಿ, ಎಸ್ಟಿ ಕ್ಷೇತ್ರದ ಒಂದು ಸ್ಥಾನಕ್ಕೆ ಸುರೇಶ್ ಕಮ್ಮರಚೇಡು, ಆಂಜನೇಯ ಇವರು ಸ್ಪರ್ಧೆ ಮಾಡಿದ್ದಾರೆ.

ಎರೆಡು ಗುಂಪಿನ ಅಭ್ಯರ್ಥಿಗಳು ತಮ್ಮ ಬೆಂಬಲಿಗರೊಂದಿಗೆ ಮತದಾರರ ಮನೆ ಮನೆಗೆ ತೆರಳಿ ಮತಯಾಚಿಸುವ ಕಾರ್ಯ ಬಿರುಸಿನಿಂದ ಕೈಗೊಂಡಿದ್ದಾರೆ.

ಲಾಭದಾಯಕ ಮತ್ತು ಹೆಚ್ಚಿನ ವಹಿವಾಡಿನ ಸೊಸೈಟಿ ಗಳಲ್ಲಿ ಒಂದಾದ ಈ ಸಂಘದ ಆಡಳಿದ ಚುಕ್ಕಾಣಿ ಹಿಡಿಯಲು ಸ್ಪರ್ಧೆ ಉಂಟಾಗಿದೆ.

## ಜೇನುಗೂಡು ಚಿಣ್ಣರ ಚಿಲಿಪಿಲಿ ಸವಿಗಾನ ಕವನ ಸಂಕಲನ ಬಿಡುಗಡೆ ಸಮಾರಂಭ.



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ತಾಲೂಕಿನ ಹೊನ್ನ ಕೀರಣಗಿ ಗ್ರಾಮದ ಯುವಕವಿ ಸಂಗಮನಾಥ ಪಿ ಸಜ್ಜನ ಅವರ ದ್ವಿತೀಯ ಕವನ ಸಂಕಲನವನ್ನು ಬೆಂಗಳೂರು ನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಕೃಷ್ಣರಾಜ ಪರಿಷತ್‌ಮಂದಿರದಲ್ಲಿ ನಡೆದ ಕಾವ್ಯಶ್ರೀ ಚಾರಿಟಬಲ್‌ಟ್ರಸ್ಟ್ ನ ವಾರ್ಷಿಕೋತ್ಸವ ಸಮಾರಂಭದಲ್ಲಿ ಸಂಗಮನಾಥ ಪಿ ಸಜ್ಜನರವರ ಜೇನುಗೂಡು(ಚಿಣ್ಣರ ಚಿಲಿಪಿಲಿಯ ಸವಿಗಾನ) ಎಂಬ ಕವನ ಸಂಕಲನವನ್ನು ಬಿಡುಗಡೆ ಮಾಡಲಾಯಿತು. ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಪತ್ರಕರ್ತರು, ಚಲನಚಿತ್ರ ನಿರ್ದೇಶಕರಾದ ರಮೇಶ ಸುರ್ವೆ ಅವರು ಮಕ್ಕಳ ಕೈಗೆ ಮೊಬೈಲ್ ಕೊಡುವುದನ್ನು ಬಿಡಿ, ಅವರಿಗೆ ಪುಸ್ತಕ ಕೊಡಿ, ಸಾಹಿತ್ಯದ ಬಗ್ಗೆ ತಿಳಿಸಿ, ಮಕ್ಕಳೊಂದಿಗೆ ನೀವು ಮಕ್ಕಳಾಗಿ ಪುಸ್ತಕಗಳನ್ನು ಓದಿ ಎಂದು ಸಲಹೆ ನೀಡಿದರು.

ಪುಸ್ತಕ ಪರಿಚಯಿಸಿ ಮಾತನಾಡಿದ ಸಾಹಿತಿ ಟಿ.ಸತೀಶ್ ಜವರೇಗೌಡರು ಮಕ್ಕಳಿಂದ ಬೆನ್ನುಡಿ ಬರೆಸಿಕೊಂಡ ಮೊದಲ ಕವಿಯಾಗಿ ಹೊರಹೊಮ್ಮಿದ್ದಾರೆ. ಎಲ್ಲ ಕವಿತೆಗಳು ಚಿತ್ರಸಹಿತವಾಗಿದ್ದು, ಮಕ್ಕಳ ಕಲಿಕೆಗೆ ಉತ್ತಮವಾಗಿವೆ ಎಂದು ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಡಾ.ಆರೂಢ ಭಾರತೀ ಸ್ವಾಮಿಗಳು, ಖ್ಯಾತನಟಿ ಮಾಲತಿಶ್ರೀ ಮೈಸೂರು, ಸಮಾಜ ಸೇವಕರಾದ ಹೇಮಾವತಿ ಶಿವಣ್ಣ, ಡಾ.ಶ್ವೇತಾ ಪ್ರಕಾಶ್, ಡಾ.ರೇವಣ್ಣ ಸಾಹಿತಿಗಳಾದ ಡಾ.ರಾಮಲಿಂಗೇಶ್ವರ ಶಿಸಿರಾ, ಡಾ.ಚಂದ್ರಶೇಖರ ಮಾಡಲಗೇರಿ, ಚಿತ್ರನಟಿ ಸುಪ್ರಿಯಾ ನಿಪ್ಪಾಣಿ ಹಾಗೂ ಇತರ ಗಣ್ಯರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

## ಹವಾಮಾನ ಬದಲಾವಣೆವರ್ಷದಲ್ಲಿ 3700 ಮಂದಿ ಸಾವು

ಮಲ್ಲಮ್ಮ ನುಡಿ ವಾರ್ತೆ



ನವದೆಹಲಿ, ಡಿ.27–ಹವಾಮಾನ ಬದಲಾವಣೆ ವೈಪರಿತ್ಯದಿಂದ 2024 ರಲ್ಲಿ 3,700 ಕ್ಕೂ ಹೆಚ್ಚು ಜೀವಗಳನ್ನು ಬಲಿ ತೆಗೆದುಕೊಂಡಿವೆ ಎಂದು ಹವಾಮಾನ ಸಂಶೋಧನಾ ಸಂಸ್ಥೆ ಹೇಳಿದೆ.ಹವಾಮಾನ ವೈಪರೀತ್ಯದಿಂದ ಲಕ್ಷಾಂತರ ಜನರು ಸ್ಥಳಾಂತರ ಗೊಂಡಿದ್ದಾರೆ. ಜೊತೆಗೆ ವರ್ಷದಲ್ಲಿ 41 ದಿನಗಳ ಅಪಾಯಕಾರಿ ಶಾಖವನ್ನು ಜಾಗತಿಕವಾಗಿ ಮಾರ್ಪಟ್ಟಿದೆ ಎಂದು ಹೇಳಲಾಗಿದೆ.ವಿಶ್ವ ಹವಾಮಾನ ಗುಣಲಕ್ಷಣ ಮತ್ತು ಕ್ಲೈಮೇಟ್ ಸೆಂಟ್ರಲ್‌ನಿಂದ 2024 ರಲ್ಲಿ ಅಪಾಯಗಳು ರಿಯಾಲಿಟಿ ಆಗಿರುವಾಗ ವಿಶ್ಲೇಷಣೆ, ಪಳೆಯುಳಿಕೆ ಇಂಧನಗಳಿಂದ ದೇಶಗಳು ಪರಿವರ್ತನೆಗೊಳ್ಳುವ ತುರ್ತು ಅಗತ್ಯದ ಕುರಿತು ವರಿಯಲ್ಲಿ ಈ ವಿಷಯ ತಿಳಿಸಿದೆ.

## ರೈತ ಬಂಧುಗಳಲ್ಲಿ ಜಾಗೃತಿ ಮೂಡಿಸುವ ಕುರಿತಾದ ವಿಚಾರ ಸಂಕಿರಣ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಡಿಸೆಂಬರ್ 27–ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ವಲಯ ಭೀಮರಾಯನಗುಡಿ ಅಚ್ಚುಕಟ್ಟು ಪ್ರದೇಶದ ನಾರಾಯಣಪುರ ಎಡದಂಡೆ ಕಾಲುವೆಯ ವ್ಯಾಪ್ತಿಯಲ್ಲಿನ ಶಹಾಪೂರ ಶಾಖಾ ಕಾಲುವೆ ಮುಡಬೂಳ ಶಾಖಾ ಕಾಲುವೆ ಮತ್ತು ಜೇವರ್ಗಿ ಶಾಖಾ ಕಾಲುವೆಯ ರೈತರ ಜಮೀನುಗಳಿಗೆ ನೀರಿನ ಸಮರ್ಪಕ ಬಳಕೆ ಹಾಗೂ ಕಾಲುವೆಗಳ ನಿರ್ವಹಣೆಯ ಕುರಿತು ರೈತ ಬಂಧುಗಳಲ್ಲಿ ಜಾಗೃತಿ ಮೂಡಿಸುವ ಕುರಿತಾದ ವಿಚಾರ ಸಂಕಿರಣ ಕಾರ್ಯಕ್ರಮವನ್ನು 2024ರ ಡಿಸೆಂಬರ್ 27ರಂದು ಬೆಳಿಗ್ಗೆ 10 ಗಂಟೆಗೆ ಭೀಮರಾಯನಗುಡಿ ಕೃಷಿ ಮಹಾವಿದ್ಯಾಲಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ವಾಲ್ಮಿ ಧಾರವಾಡ ನಿರ್ದೇಶಕರು ಶ್ರೀ ಡಾ.ರಾಜೇಂದ್ರ ಪೋದ್ದಾರ ಕಾರ್ಯಕ್ರಮವನ್ನು ಉದ್ಘಾಟಿಸುವರು. ಭೀಮರಾಯನಗುಡಿ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಕಾಲುವೆ ವಲಯ ಸಂ.1 ಮುಖ್ಯ ಇಂಜಿನಿಯರರು ಶ್ರೀ ಪ್ರೇಮ್‌ಸಿಂಗ್ ಅವರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಭೀಮರಾಯನಗುಡಿ ಕೃಷ್ಣಾ ಕಾಡಾ ಆಡಳಿತಾಧಿಕಾರಿ ಶ್ರೀ ಜಿ.ಜಿ.ಪವಾರ ಮುಖ್ಯ ಅತಿಥಿಗಳಾಗಿ ಆಗಮಿಸುವರು.

ಭೀಮರಾಯನಗುಡಿ ಕೃಷಿ ಮಹಾವಿದ್ಯಾಲಯ ಡೀನ್ ಶ್ರೀ ಡಾ.ಪಿ.ಹೆಚ್ ಕುಚನೂರ, ಭೀಮರಾಯನಗುಡಿ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಕಾಲುವೆಗಳು ಮುಖ್ಯ ಲೆಕ್ಕಾಧಿಕಾರಿ ಶ್ರೀ ಡಾ.ಮಹೇಶ ಮಾಲಗತ್ತಿ, ಕೃಷ್ಣಾಪುರ ನಾಬದಂಕಾ ವೃತ್ತ ಸಂ.2 ಅಧೀಕ್ಷಕ ಅಭಿಯಂತರರು ಶ್ರೀ ಲಕ್ಷ್ಮಣ ಎಂ.ನಾಯಕ, ಭೀಮರಾಯನಗುಡಿ ಜೆಬಿಸಿ ವೃತ್ತ ಅಧೀಕ್ಷಕ ಅಭಿಯಂತರರು ಶ್ರೀ ಅಬ್ದುಲ್ ಖುದ್ದೂಸ್, ಧಾರವಾಡ ಕೃ.ವಿ.ವಿ ನಿವೃತ್ತ ಕುಲಪತಿಗಳು ವಾಲ್ಮಿ ಧಾರವಾಡ ಸಮಾಲೋಚಕರು ಶ್ರೀ ಡಾ.ವಿಠ್ಠಲ್ ಆಯ್. ಬೆಣಗಿ, ಯಾದಗಿರಿ ಜಿಲ್ಲೆ ಕರ್ನಾಟಕ ಪ್ರಾಂತ ರೈತ ಸಂಘ ಅಧ್ಯಕ್ಷರು ಶ್ರೀ ಚನ್ನಪ್ಪ ಆನೆಗುಂದಿ, ಯಾದಗಿರಿ ಕರ್ನಾಟಕ ರಾಜ್ಯ ರೈತ ಸಂಘ (ಕೆ.ಎಸ್.ಪುಟ್ಟಣ್ಣಯ್ಯ ಬಣ) ಜಿಲ್ಲಾ ಅಧ್ಯಕ್ಷರು ಶ್ರೀ ಶರಣು ವ್ಹಿ.ಮಂದರವಾಡ ಮದ್ದರಕಿ, ಯಾದಗಿರಿ ರೈತ ಸೇನೆ ಕರ್ನಾಟಕ ರಾಜ್ಯ ರೈತ ಸಂಘ ರಾಜ್ಯ ಉಪಾಧ್ಯಕ್ಷರು ಶ್ರೀ ಲಕ್ಷ್ಮೀಕಾಂತ ಪಾಟೀಲ್ ಮದ್ದರಕಿ, ಯಾದಗಿರಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಕಾರ್ಯಧ್ಯಕ್ಷರು ಶ್ರೀ ಮಹೇಶಗೌಡ ಎಂ.ಸುಬೇದಾರ ಸಗರ, ಯಾದಗಿರಿ ರೈತ ಸಂಘ ಜಿಲ್ಲಾಧ್ಯಕ್ಷರು ಶ್ರೀ ಮಲ್ಲಣ್ಣಗೌಡ ಹಗರಟಗಿ ಅತಿಥಿಗಳಾಗಿ ಪಾಲ್ಗೊಳ್ಳುವರು. ಅಚ್ಚುಕಟ್ಟು ಪ್ರದೇಶದ ರೈತ ಬಾಂಧವರು ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಸಲಹೆ ಸೂಚನೆ ನೀಡಿ, ಅಮೂಲ್ಯ ಮಾಹಿತಿಯನ್ನು ಪಡೆದುಕೊಳ್ಳಲು ಕೋರಲಾಗಿದೆ ಭೀಮರಾಯನಗುಡಿ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಕಾಲುವೆ ವಲಯ ಸಂ.1, ಮುಖ್ಯ ಇಂಜಿನಿಯರರು ಕಛೇರಿಯ ಅಧೀನದಲ್ಲಿ ಬರುವ ಎಲ್ಲಾ ಇಂಜಿನಿಯರರಿಗೆ ಪ್ರಕಟಣೆಯಲ್ಲಿ ಸ್ವಾಗತ ಕೋರಲಾಗಿದೆ.

ಜಾಹೀರಾತಿಗಾಗಿ
ಇಂದೇ
ಸಂಪರ್ಕಿಸಿರಿ:9964206170

### ಪ್ರಥಮ ಬಾರಿಗೆ ಬೀದರನಲ್ಲಿ ವೀರ್ ಬಾಲ ದಿವಸ್ ಆಚರಣೆ

## ಮಕ್ಕಳಲ್ಲಿ ದೇಶಭಕ್ತಿ ಮೂಡಿಸಿ: ಡಿ.ಕೆ.ಗಣಪತಿ



ಮಲ್ಲಮ್ಮ ನುಡಿ ವಾರ್ತೆ

ಬೀದರ: ಮಕ್ಕಳನ್ನು ಅಂಕ ಗಳಿಸುವ ಯಂತ್ರಗಳಾಗಿ ಮಾಡದೆ ಪಾಲಕರು ಮಕ್ಕಳಲ್ಲಿ ದೇಶಭಕ್ತಿ ಮತ್ತು ಸಂಸ್ಕಾರ ಮೂಡಿಸಬೇಕೆಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಡಿ.ಕೆ.ಗಣಪತಿ ತಿಳಿಸಿದರು.

ದಕ್ಷಿಣ ಮಧ್ಯವಲಯ ಸಾಂಸ್ಕೃತಿಕ ಕೇಂದ್ರ ನಾಗಪುರ, ಸಂಸ್ಕೃತಿ ಮಂತ್ರಾಲಯ ನವದೆಹಲಿ, ಕರುಣಾಮಯ ಯುವಕ ಸಂಘ ಬೀದರ ಹಾಗೂ ನಾಟ್ಯಶ್ರೀ ನೃತ್ಯಾಲಯ ಹಾಗೂ ಓಂ ಸಾಯಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಗಣೇಶಪುರ ಇವರ ಸಂಯುಕ್ತಾಶ್ರಯದಲ್ಲಿ ನಗರದ ಮಹಾಲಕ್ಷ್ಮಿ ಸಭಾಂಗಣದಲ್ಲಿ ಜರುಗಿದ ವೀರ್ ಬಾಲ ದಿವಸ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

1704 ರಲ್ಲಿ ಔರಂಗಜೇಬನು ತನ್ನ ಧರ್ಮ ಸ್ವೀಕಾರ ಮಾಡುವಂತೆ ಗುರುಗೋವಿಂದಸಿಂಗರ ಮಕ್ಕಳಾದ ಜೋರಾವರ್ ಸಿಂಗ್ ಮತ್ತು ಫತ್ತೇಹ್ ಸಿಂಗ್ ಅವರಿಗೆ ಒತ್ತಾಯ ಮಾಡುತ್ತಾನೆ. ಆದರೆ ಆ ವೀರ ಮಕ್ಕಳು "ಪ್ರಾಣ ಬಿಟ್ಟೇವು ಆದರೆ ಧರ್ಮ ಬಿಡೇವು" ಎಂದಾಗ ಔರಂಗಜೇಬನು ಈ ಇಬ್ಬರೂ ಬಾಲಮಕ್ಕಳನ್ನು ಜೀವಂತ ಸಮಾಧಿ ಮಾಡುತ್ತಾನೆ. ಈ ವೀರ ಮಕ್ಕಳ ಸ್ಮರಣಾರ್ಥವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು 2022 ರ ಡಿ. 26 ರಂದು 'ವೀರ್ ಬಾಲ ದಿವಸ್' ಆಚರಣೆ ಮಾಡಲು ಪ್ರಾರಂಭಿಸಿ, ಅಂದು ಶೌರ್ಯ ಮೆರೆದ ಮಕ್ಕಳನ್ನು ಪ್ರಶಸ್ತಿ ನೀಡಲು ಪ್ರಾರಂಭಿಸಿದರು. ಹೀಗಾಗಿ ಪಾಲಕರು ಮಕ್ಕಳಿಗೆ ಉತ್ತಮ ಸಂಸ್ಕಾರ ಮತ್ತು ದೇಶಭಕ್ತಿ ತುಂಬಬೇಕೆಂದು ಗಣಪತಿ ಸಲಹೆ ನೀಡಿದರು.

ರಾಜ್ಯ ಅಭಿವೃದ್ಧಿ, ಸಮನ್ವಯ ಮತ್ತು ಮೇಲುಸ್ತುವಾರಿ ಸಮಿತಿ ಭಾರತ ಸರ್ಕಾರದ ಸದಸ್ಯ ಶಿವಯ್ಯಾ ಸ್ವಾಮಿ ಮಾತನಾಡಿ ಗುರು ಗೋವಿಂದ ಸಿಂಗರ ಈ ವೀರ ಮಕ್ಕಳ ತ್ಯಾಗ ಮತ್ತು ಬಲಿದಾನವನ್ನು ರಾಜ್ಯ ಸರ್ಕಾರಗಳು ಇಷ್ಟು ದಿವಸ ಪಠ್ಯಪುಸ್ತಕದಲ್ಲಿ ಅಳವಡಿಸದೇ ಇರುವುದು ನಿಜಕ್ಕೂ ದುರದೃಷ್ಟಕರ ಎಂದು ಕಳವಳ ವ್ಯಕ್ತಪಡಿಸಿದರು. ಈ ದಿನ ಭಾರತೀಯರಿಗೆ ಸ್ಫೂರ್ತಿದಾಯಕ ದಿನ. ಇಂದಿನ ದಿನ ಪ್ರತಿಯೊಂದು ಸಂಘ ಸಂಸ್ಥೆಗಳವರು ಸಾಧಕ ಮಕ್ಕಳಿಗೆ ಪ್ರೋತ್ಸಾಹಿಸುವ ಕಾರ್ಯ ಮಾಡಬೇಕು. ದೇಶ ಮೊದಲು, ಧರ್ಮ ನಂತರ ಮತ್ತು ವೈಯಕ್ತಿಕ ತೃತೀಯ ಎಂಬ ಭಾವ ಮೂಡಿಸಬೇಕು. ಈ ನಿಟ್ಟಿನಲ್ಲಿ ಡಾ. ರಾಜಕುಮಾರ ಹೆಬ್ಬಾಳೆಯವರ ಕಾರ್ಯ ಶ್ಲಾಘನೀಯ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ರಾಷ್ಟ್ರೀಯ ಜನಪದ ಬುಡಕಟ್ಟು ಕಲಾ ಪರಿಷತ್ತಿನ ಕಾರ್ಯದರ್ಶಿ ಡಾ. ರಾಜಕುಮಾರ ಹೆಬ್ಬಾಳೆ ಕೇಂದ್ರ ಸರ್ಕಾರ ಕಲೆ ಮತ್ತು ಸಂಸ್ಕೃತಿ ವಿನಿಮಯಕ್ಕಾಗಿ ಸಂಸ್ಕೃತಿ ಮಂತ್ರಾಲಯ ಆರಂಭಿಸಿದೆ. ಹಾಗೂ ಮಕ್ಕಳ ಪ್ರತಿಭೆ ಗುರುತಿಸಲು 2022 ರಲ್ಲಿ ವೀರ್ ಬಾಲ ದಿವಸ್ ಆಚರಣೆ ಜಾರಿಗೆ ತಂದು ಪ್ರತೀ ವರ್ಷ ರಾಷ್ಟ್ರಪತಿಗಳು ಅಸಾಧಾರಣ ಮಕ್ಕಳಿಗೆ ಪ್ರಶಸ್ತಿ ನೀಡಿ ಪ್ರೇರೇಪಿಸುತ್ತಿದೆ. ಬೀದರನಲ್ಲಿ ಪ್ರಥಮ ಬಾರಿಗೆ ವೀರ್ ಬಾಲ ದಿವಸ್ ಆಚರಣೆ ಮಾಡುವ ಮೂಲಕ ಮಕ್ಕಳಲ್ಲಿ ಸೂಪ್ತವಾಗಿ ಅಡಗಿರುವ ಪ್ರತಿಭೆಗೆ ವೇದಿಕೆ ಒದಗಿಸುವ ಮೂಲಕ ಕಾರ್ಯ ಮಾಡಿದ್ದೇವೆ. ಪ್ರತೀ ವರ್ಷ ಡಿ. 26 ರಂದು ಆಚರಣೆ ಮಾಡಲಾಗುವುದು ಎಂದರು.

ಗಾಯಕಿ ಪ್ರಿಯಂಕಾ ಶ್ರೀಗುರು ದೇಶಭಕ್ತಿಗೀತೆ ಗಾಯನ ಮಾಡಿದರು. ಅಧ್ಯಕ್ಷತೆಯನ್ನು ನಾಟ್ಯಶ್ರೀ ನೃತ್ಯಾಲಯದ ನಿರ್ದೇಶಕಿ ರಾಣಿ ಸತ್ಯಮೂರ್ತಿ ವಹಿಸಿದ್ದರು. ವೇದಿಕೆ ಮೇಲೆ ಓಂ ಸಾಯಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಅಧ್ಯಕ್ಷ ಶಿವಶರಣಪ್ಪ ಗಣೇಶಪುರ, ಉದ್ಯಮಿ ಅಶೋಕ ಹೆಬ್ಬಾಳೆ ಉಪಸ್ಥಿತರಿದ್ದರು.

ಕು. ಅರ್ಪಿತಾ ಅವರ ಭರತನಾಟ್ಯ, ಚಿ. ಕೃಷ್ಣ ಹೆಬ್ಬಾಳೆ ಅವರ ತಬಲಾವಾದನ, ನೈತಿಕ್ ಮಸೂದೆ ಅವರ ಕೊಳಲು ವಾದನ, ಕು. ವೈಷ್ಣವಿ ಸಂತೋಷ ಪರಶೆಟ್ಟಿ, ಕು. ಜ್ಞಾನದೇವಿ ರಾಜಕುಮಾರ ಗೂನ್ನಳ್ಳಿ ಅವರ ಜನಪದ ನೃತ್ಯ ಹಾಗೂ ನಾಟ್ಯಶ್ರೀ ನೃತ್ಯಾಲಯದ ಮಕ್ಕಳ ನೃತ್ಯ ಸಭೀಕರ ಗಮನ ಸೆಳೆಯಿತು. ಕು. ವಿನಾಯಕ ಹೆಬ್ಬಾಳೆ ವೀರ್ ಬಾಲ ದಿವಸ್ ಕುರಿತು ಅದ್ಭುತವಾಗಿ ಮಾತನಾಡಿದರು.

ಜೈಪ್ರೀತ್ ಗುರುದೇವ ಪ್ರಾರ್ಥಿಸಿದರು. ಎಸ್.ಬಿ.ಕುಚಬಾಳ ನಿರೂಪಿಸಿದರು. ಶಿವಶರಣಪ್ಪ ಗಣೇಶಪುರ ಸ್ವಾಗತಿಸಿದರು. ಪ್ರಕಾಶ ಕನ್ನಾಳೆ ವಂದಿಸಿದರು. ಕಾರ್ಯಕ್ರಮದಲ್ಲಿ ಪ್ರಮುಖರಾದ ಬಸವರಾಜ ಹೆಗ್ಗೆ, ಧನರಾಜ ಆನೆಕಲೆ, ಮಹಾರುದ್ರ ಡಾಕುಳಗೆ, ಮಹಾನಂದ ಹೆಬ್ಬಾಳೆ, ಸಂತೋಷ ಜೋಳದಾಪಕೆ, ಕೆ. ಸತ್ಯಮೂರ್ತಿ, ಬಸವರಾಜ ಮೂಲಗೆ, ಅಶ್ವಿನಿ ಹೆಬ್ಬಾಳೆ, ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಗುದಗೆಗೆ ಉತ್ತಮ ವೈದ್ಯ ಪ್ರಶಸ್ತಿ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 27 :- ನಗರದ ಖ್ಯಾತ ಹೃದೋಗ ತಜ್ಞ ಡಾ.ಚಂದ್ರಕಾಂತ್ ಗುದಗೆ ಅವರಿಗೆ ಪಿಜಿಶಿಯನ್ ದಿನಾಚರಣೆ ಅಂಗವಾಗಿ ಬೆಂಗಳೂರಿನಲ್ಲಿ ಇತ್ತೀಚೆಗೆ ಅಸೋಸಿಯೇಷನ್ ಆಫ್ ಫಿಜಿಶಿಯನ್ ಆಫ್ ಇಂಡಿ-ಯಾ (ಎಪಿಐ) ವತಿಯಿಂದ ಉತ್ತಮ ವೈದ್ಯ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಸಂಸದ ಹಾಗೂ ಜಯದೇವ ಆಸ್ಪತ್ರೆ ಮಾಜಿ ನಿರ್ದೇಶಕ ಮಂಜುನಾಥ್ ಅವರು ಪ್ರಶಸ್ತಿ ನೀಡಿ ಗೌರವಿಸಿದರು.

## ತಾಯಿ ಭಾಷೆ ಅನ್ನದ ಚಿನ್ನದ ಭಾಷೆಯಾಗಲಿ: ಸಾಹಿತಿ ಡಾ. ಸುಬ್ಬಣ್ಣ ಕರಕನಳ್ಳಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 27 :- ಭಾಲ್ಕಿ ತಾಲ್ಲೂಕಿನ ಚಳಕಾಪೂರು ಗ್ರಾಮದ ಹನುಮಾನ ಮಂದಿರದಲ್ಲಿ ಗುರುವಾರ, ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ಬಸವಣ್ಣ ಶಿಕ್ಷಣ ಮತ್ತು ಗ್ರಾಮೀಣ ಮತ್ತು ನಗರಾಭಿವೃದ್ಧಿ ಸೇವಾ ಸಂಸ್ಥೆ ಬೀದರ ಇವರ ಸಂಯುಕ್ತಾಶ್ರದಲ್ಲಿ 2023-24 ನೇ ಸಾಲಿನ ಸಂಘ ಸಂಸ್ಥೆಗಳ ಸಾಮಾನ್ಯ ಯೊಜನೆಯಡಿಲ್ಲಿ ಜಿಲ್ಲಾ ಮಟ್ಟದ ಕನ್ನಡ ಭಾಷೆ ಜಾಗೃತಿ ವಿಚಾರ ಸಂಕಿರಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ವೀರ ಕನ್ನಡಿಗರ ಸೇನೆ ರಾಜ್ಯ ಸಂಚಾಲಕ, ಸಾಹಿತಿ ಡಾ. ಸುಬ್ಬಣ್ಣ ಕರಕನಳ್ಳಿ ಉದ್ಘಾಟಿಸಿ, ತಾಯಿ ಭಾಷೆ ಅನ್ನದ ಭಾಷೆ, ಆಡಳಿತ ಭಾಷೆ, ಚಿನ್ನಡ ಭಾಷೆಯಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಸರ್ಕಾರಿ ಶಾಲಾ ಕಾಲೇಜುಗಳಿಂದ ಡಾಕ್ಟರ, ಇಂಜಿನಿಯರ, ಭಾರತೀಯ ಆಡಳಿತ ಸೇವೆ ಕರ್ನಾಟಕ ಆಡಳಿತ ಸೇವೆ ಸಲ್ಲಿಸುವವರಾಗಿರಬೇಕು. ದೇಶಿ ಸಾಹಿತ್ಯ ಸಂಸ್ಕೃತಿಯನ್ನು ಮಾಹಿತಿ ತಂತ್ರಜ್ಞಾನದ ಕಾಲದಲ್ಲಿ ಉಳಿಸಿ ಬೆಳಸುವ ಕಾರ್ಯವನ್ನು ಗ್ರಾಮೀಣ ಭಾಗದ ಮಹಿಳೆರು ಮಾಡುತ್ತಿದ್ದಾರೆ. ಭಾಷೆ ಸಾಹಿತ್ಯ ಸಂಸ್ಕೃತಿ ಬಗ್ಗೆ ಡಾ. ಗೌತಮ ಬಕ್ಕಪ್ಪ ಮಾತನಾಡಿ ಕನ್ನಡ ಭಾಷೆ ಸಂಸ್ಕೃತಿ ಶ್ರೀಮಂತವಾಗಿದೆ. ಆಚಾರ ವಿಚಾರಗಳು ವರ್ತಮಾನದ ಬದುಕಿಗೆ ಸ್ಪೂರ್ತಿಯಾಗಿವೆ. ಭವಿಷ್ಯದ ಬದುಕಿಗೂ ನಾವು ಉಳಿಸಿ ಬೆಳಸಿಕೊಂಡು ಹೊಗಬೇಕ್ಕಾಗಿದೆ. ನಿವೃತ್ತ ಪ್ರಧ್ಯಾಪಕ ಟಿ ಜಿ ಹಾದಿಮನಿ ಗ್ರಾಮೀಣಭಾಗದಲ್ಲಿನ ಕನ್ನಡ ಭಾಷೆ ಸಂಸ್ಕೃತಿ ವೈಷ್ಠತೆಗಳ ಬಗ್ಗೆ ತಿಳಿಸಿಕೊಟ್ಟರು.

ಕನ್ನಡಿಗರ ಸೇನೆ ಜಿಲ್ಲಾಧ್ಯಕ್ಷ ಸುಭಾಷ ಕೇನಾಡೆ ಗಡಿಭಾಗದಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ಪ್ರಸಾರಕ್ಕೆ ಸರ್ಕಾರ ವಿವಿಧ ಯೋಜನೆಗಳು ಜಾರಿಗೆ ತರಬೇಕು. ಮುಖ್ಯ ಅತಿಥಿಗಳಾಗಿ ಕನ್ನಡಿಗರ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಶ್ರೀಕಾಂತ ಭವಾನಿ ದಿವ್ಯ ಸಾನಿಧ್ಯಃ ಶಂಕರಾನಂದ ಸ್ವಾಮಿ ಸಿದ್ದಾರೋಡ ಮಠ ರವರು ವಹಿಸಿದರು, ಅಧ್ಯಕ್ಷತೆ ಬಸವಣ್ಣ ಶಿಕ್ಷಣ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸೇವಾ ಸಂಸ್ಥೆ ಬೀದರ ಅಧ್ಯಕ್ಷತೆ, ಶ್ರೀ ಬಸವರಾಜ ಖಂಡ್ರೆ ವಹಿಸಿದರು. ಅತಿಥಿಗಳಾಗಿ ಶ್ರೀ ಬಾಬು ಸಂಗ್ರಾಮ ಜಿಲ್ಲಾಧ್ಯಕ್ಷರು ಫೆವಾರ್ಡ ಕೆ, ಸುದರ್ಶನ ರಡ್ಡಿ ಅರಕ್ಷಕ ಉಪನಿರೀಕ್ಷರು ಖಟಕಚಿಂಚೋಳಿ, ಶ್ರೀಮತಿ ಸುರೇಖಾ ಹಣಮಂತ ಉಪಾಧ್ಯಕ್ಷರು ಗ್ರಾಮ ಪಂಚಾಯತ ಮಳಚಾಪೂರ, ಕಿಶೋರ ಕುಲಕರ್ಣಿ ಮಾಜಿ ತಾಲ್ಲೂಕ ಪಂಚಾಯತ ಸದಸ್ಯರು, ಭಾಲ್ಕಿ, ಶಿವರಾಜ ಮಹಲ್ದಾರ, ಗ್ರಾಮ ಮುಖಂಡರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಸಾಂಸ್ಕೃತಿಕ ನಾಟಕ ಹಾಗೂ ಜಾನಪದ ಹಾಡುಗಳು ಶಂಕರ ಚೊಂಡಿ, ಕನ್ನಡ ಹಾಡುಗಳು ರಮೇಶ ಬಾಬು ಅಮಲಾಪೂರ, ರವಿದಾಸ ಕಾಂಬಳೆ ಡಾ. ಸುನೀತಾ ಬಿಕ್ಲೆ ಕವಿತೆ ವಾಚನ ಮಾಡಿದರು, ರಮಾಬಾಯಿ ಅಂಬೇಡ್ಕರ ಕಲಾ ಮತ್ತು ಸಾಹಿತ್ಯ ಸಂಘ ಸಿದ್ದಾರೋಡ ಭಜನ ಮಂಡಳ, ನೂಲಿಗೆ ಚಂದಯ್ಯ ಜಾನಪದ ಸಂಘ ಚಳಕಾಪೂರ, ರಮಾಬಾಯಿ ಭಜನ ಮಂಡಳ ಖಟಕ ಚಿಂಚೋಳ್ಳಿ ಭಜನೆ ಹಾಡುಗಳುನ್ನು ಹಾಡಿದರು. ಸ್ವಾಗರ ಪ್ರದೀಪ ನಾಟೇಕರ್, ನಿರೂಪಣೆ ಭೀಮರಾವ ಮಾಲಗತ್ತಿ ವಂದನೆ ಅರುಣ ಪಟೇಲ್ ಮಾಡಿದರು.

## ಯಾಳಗಿಯಲ್ಲಿ ಅದ್ದೂರಿಯಾಗಿ ಜರುಗಿದ ಗ್ರಾಮದೇವತೆ ಜಾತ್ರಾಮಹೋತ್ಸವ

ಮಲ್ಲಿಕಾರ್ಜುನ್ ಮಳಿಕೇರಿ

ಮಲ್ಲಮ್ಮ ನುಡಿ ವಾರ್ತೆ

ಕೆಂಭಾವಿ: ಸಮೀಪದ ಯಾಳಗಿ ಗ್ರಾಮದಲ್ಲಿ ಗ್ರಾಮದೇವತೆ ಶ್ರೀದೇವಿ ಜಾತ್ರಾ ಮಹೋತ್ಸವ ಬಲು ಸಂಭ್ರಮ ಸಡಗರದಿಂದ ಬಲು ಅದ್ದೂರಿಯಾಗಿ ಜರುಗಿತು

ಗುರುವಾರ ರಾತ್ರಿ ದೇವಸ್ಥಾನದಲ್ಲಿ ಗ್ರಾಮದೇವತೆ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ಎತ್ತಿನಬಂಡಿಯ ರಥದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಗಂಗಾಸ್ನಾನದ ನಂತರ ಪೂಜಾ ಕೈಕಂರ್ಯ ಕೈಗೊಂಡು ಲಕ್ಷ್ಮೀ ಗುಡಿಯ ಪಕ್ಕದಲ್ಲಿ ದೇವತೆಯನ್ನು ಪ್ರತಿಷ್ಠಾಪಿಸಿದರು. ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಉಡಿ ತುಂಬಲಾಯಿತು

ಗ್ರಾಮದಲ್ಲಿ ಮಳೆ ಬೆಳೆ, ಶಾಂತಿ ಸಮೃದ್ಧಿಗಾಗಿ ದೇವಿಗೆ ಭಕ್ತರು ಬೇಡಿಕೊಂಡು ಮೂರು ವರ್ಷಕ್ಕೊಮ್ಮೆ ನೇರವೇರುವ ಈ ಜಾತ್ರೆಯಲ್ಲಿ ಕವಡಿ ಪದಗಳು, ಭಜನೆ ಪದಗಳು,ಸಂಗೀತ ರಸಮಂಜರಿ,ಟೋರ್ನಾಮೆಂಟ್ , ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಭಕ್ತರು ದೇವಿಗೆ ದೀಡ ನಮಸ್ಕಾರ ಹಾಕುವ ಮೂಲಕ ಭಕ್ತಿಯ ಪರಾಕಾಷ್ಟೆ ಮೆರೆದರು. ವಿವಿಧ ಗ್ರಾಮಗಳಿಂದ ಆಗಮಿಸಿದ ಡೊಳ್ಳು ಕುಣಿತಗಳು, ಸರ್ಕಾರಿ ಪ್ರೌಢ ಶಾಲೆಯ ಮಕ್ಕಳ ರಂಗೋಲಿ ಚಿತ್ರಣ, ಕಂಸಾಳೆ ಪದಗಳು ವೀರಗಾಸೆ, ಗೊಂಬೆ ಕುಣಿತ, ಜನರಿಗೆ ಇಮ್ಮಡಿಗೊಳಿಸಿತ್ತು. ಜಾತ್ರಾ ಸಂಭ್ರಮದಲ್ಲಿ ಸಾವಿರಾರು ಭಕ್ತರು ನೆರೆದಿದ್ದರು

### ಬಿಜೆಪಿ ಜಿಲ್ಲಾದ್ಯಕ್ಷ ಅಮೀನರಡ್ಡಿ ಹೇಳಿಕೆ

## ಕಾಂಗ್ರೆಸ್ ನಿಂದ ಅಂಬೇಡ್ಕರ್ ವಗೆ ನಿರಂತರ ಅನ್ಯಾಯ; ಬಾಬಾ ಸಾಹೇಬರು ದೇಶದ ಅಸ್ಮಿತೆ




(ಎಂ.ರಫೀಕ್ ಪಟೇಲ್)

ಮಲ್ಲಮ್ಮ ನುಡಿ ವಾರ್ತೆ

ದಲಿತಪರ ಮುಖಂಡರು ಇತಿಹಾಸವನ್ನು ಅರಿತುಕೊಳ್ಳಬೇಕಿದೆ. ಬಾಬಾ ಸಾಹೇಬರಿಗೆ ಮಾಡಿದ ಅವಮಾನದ ಬಗ್ಗೆ ತಿಳಿದುಕೊಳ್ಳುವ ಅವಶ್ಯಕತೆ ಇದೆ.

**- ಅಮೀನರಡ್ಡಿ ಯಾಳಗಿ ಬಿಜೆಪಿ ಜಿಲ್ಲಾಧ್ಯಕ್ಷ.**

ಯಾದಗಿರಿ: ಕಾಂಗ್ರೆಸ್ ನವರು ದೇಶವನ್ನು ಆಳುವ ಸಂದರ್ಭದಲ್ಲಿ ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಅಪಮಾನ ಮಾಡಿ, ಹೀನಾಯವಾಗಿ ನಡೆಸಿಕೊಂಡಿದ್ದಾರೆ ಎಂದು ಬಿಜೆಪಿ ಜಿಲ್ಲಾದ್ಯಕ್ಷ ಅಮೀನರಡ್ಡಿ ಯಾಳಗಿ ಆರೋಪಿಸಿದರು.

ಡಾ.ಬಾಬಾ ಸಾಹೇಬರು ನೆಹರು ಪ್ರಧಾನಿಯಾಗಿದ್ದಾಗ ಪತ್ರವೊಂದು ಬರೆದು, ಈ ದೇಶದಲ್ಲಿ ಪರಿಶಿಷ್ಟ ಜಾತಿ ಜನತೆ ಅನುಭವಿಸಿದಷ್ಟು ಯಾತನೆ ಮತ್ಯಾರು ಅನುಭವಿಸಿಲ್ಲ. ಆದರೆ, ನೀವು ಅಲ್ಪಸಂಖ್ಯಾತರನ್ನು ಅತೀಯಾಗಿ ಓಲೈಕೆ ಮಾಡುತ್ತಿದ್ದೀರಿ ಎಂದು ಉಲ್ಲೇಖಿಸುತ್ತಾರೆ. ಆದರೆ, ಕಾಂಗ್ರೆಸ್ ಆ ಪತ್ರವನ್ನು ಇದುವರೆಗೂ ಯಾಕೆ ಬಹಿರಂಗ ಪಡಿಸಿಲ್ಲ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಹರಿಹಾಯ್ದರು.

ಕಾಂಗ್ರೆಸ್ ಹಾಗೂ ವಿಶೇಷವಾಗಿ ಗಾಂಧಿ ಕುಟುಂಬ ತಮಗೆ ತಾವೇ ಭಾರತ ರತ್ನ ಪ್ರಶಸ್ತಿ ನೀಡಿ-ಕೊಂಡಿದೆ. ಬಾಬಾ ಸಾಹೇಬರಿಗೆ ಭಾರತ ರತ್ನ ನೀಡಲಿಲ್ಲ. ಸ್ವತಃ ಅವರನ್ನು ಚುನಾವಣೆಯಲ್ಲಿ ಸೋಲಿಸಲು ಎಲ್ಲ ರೀತಿಯ ಪ್ರಯತ್ನ ಮಾಡಿದ್ದಾರೆ. ಮೊನ್ನೆ ಲೋಕಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಆಡಿದ ಮಾತುಗಳನ್ನು ಕಾಂಗ್ರೆಸ್ ತಿರುಚಿ ದೇಶದ ಜನರ ದಿಕ್ಕು ತಪ್ಪಿಸುತ್ತಿದೆ ಎಂದು ಕಿಡಿಕಾರಿದರು.

ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಡಾ.ಅಂಬೇಡ್ಕರ್ ಅವರಿಗೆ ಸಾಕಷ್ಟು ಗೌರವ ಸಲ್ಲಿಸಿದೆ. ಬಾಬಾ ಸಾಹೇಬರು ಈ ದೇಶದ ಅಸ್ಮಿತೆಯಾಗಿದ್ದಾರೆ ಎಂದರು. ಈ ಸಂದರ್ಭದಲ್ಲಿ ಮಾಜಿ ಜಿಲ್ಲಾಧ್ಯಕ್ಷ ಡಾ.ಶರಣಭೂಪಾಲರಡ್ಡಿ, ಅಲೆಮಾರಿ ಅರೆ ಅಲೆಮಾರಿ ನಿಗಮದ ಅಧ್ಯಕ್ಷ ದೇವಿಂದ್ರನಾಥ ನಾದ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರು ಕಾಮ, ಜಿಲ್ಲಾ ವಕ್ತಾರ ಹಣಮಂತ ಇಟಗಿ, ಜಿಲ್ಲಾ ಮಾಧ್ಯಮ ಸಂಚಾಲಕ ವಿರುಪಾಕ್ಷಪ್ಪ ಸ್ವಾಮಿ ಹೆಡಗಿಮದ್ರಾ, ಸಹ ಸಂಚಾಲಕ ಚಂದ್ರಶೇಖರ ಕಡೆಸೂರ ಇದ್ದರು...

## ಮನಮೋಹನ್ ಸಿಂಗ್ ನಿಧನಕ್ಕೆ ಫಾಳೆ ಸಂತಾಪ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 27 :- ಮಾಜಿ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರ ನಿಧನಕ್ಕೆ ಜಿಲ್ಲೆಯವರೇ ಆದ ಕಾಂಗ್ರೆಸ್ ಕಿಸಾನ್, ಖೇತ್ ಮಜ್ದೂರ್ ವಿಭಾಗದ ರಾಷ್ಟ್ರೀಯ ಸಂಯೋಜಕ ಪ್ರಕಾಶ ಫಾಳೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಮನಮೋಹನ್ ಸಿಂಗ್ ಅವರು ದೇಶವನ್ನು ಆರ್ಥಿಕ ಬಿಕ್ಕಟ್ಟಿನಿಂದ ಪಾರು ಮಾಡಿದ್ದರು. ಅಂತೆಯೇ ಅವರನ್ನು ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಓಬಾಮಾ ವಿಶ್ವದ ಶ್ರೇಷ್ಠ ಆರ್ಥಿಕ ತಜ್ಞ ಎಂದು ಬಣ್ಣಿಸಿದ್ದರು. ಅವರ ನಿಧನದಿಂದ ದೇಶ ಹಾಗೂ ವಿಶ್ವಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಹೇಳಿದ್ದಾರೆ.

ಸಿಂಗ್ ಅವರು ಪ್ರಧಾನಿಯಾಗಿದ್ದಾಗ ದೇಶದ ರೈತರ ರೂ. 72 ಸಾವಿರ ಕೋಟಿ ಸಾಲ ಮನ್ನಾ ಮಾಡಿದ್ದರು. ದುಡಿಯುವ ಕೈಗಳಿಗೆ ಕೆಲಸ ಒದಗಿಸಲು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿಗೊಳಿಸಿದ್ದರು. 'ಆಧಾರ್ ಕಾರ್ಡ್' ಅವರ ಕೊಡುಗೆ ಎಂದು ತಿಳಿಸಿದ್ದಾರೆ.

ದೇವರು ಅವರ ಆತ್ಮಕ್ಕೆ ಶಾಂತಿ ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

## ಪಕ್ಷ ಸಂಘಟನೆ ಜೊತೆಗೆ ಗಟ್ಟಿಯಾದ ಹೆಜ್ಜೆಯನ್ನುಟ್ಟುಕೊಂಡು ದುಡಿಯಬೇಕು.ಬಂಡಿ




(ಎಂ.ರಫೀಕ್ ಪಟೇಲ್)

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ನನ್ನ ಮೇಲೆ ಇಲ್ಲಿಯವರೆಗೂ ನೂರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ರಾಜಕೀಯ ಜೀವನದಲ್ಲಿ ಅನೇಕ ಏರಿಳತಗಳನ್ನು ಕಂಡಿದ್ದೇನೆ. ಜೈಲು ವಾಸವೂ ಸಹ ಅನುಭವಿಸಿ ಇದೀಗ ಮಂತ್ರಿಯಾಗಿ ಅಧಿಕಾರ ಪಡೆದು ಜನರ ಸೇವೆಯಲ್ಲಿ ನಿರತನಾಗಿದ್ದೇನೆ ಎಂದು ಕೇಂದ್ರ ಗೃಹ ವ್ಯವಹಾರಗಳ ರಾಜ್ಯ ಸಚಿವರಾದ ಬಂಡಿ ಸಂಜಯಕುಮಾರ ಅವರು ಹೇಳಿದರು.

ನಗರದ ಗ್ರೀನ್ ಸಿಟಿಯಲ್ಲಿರುವ ಬಿಜೆಪಿ ಕಾರ್ಯಾಲಯದಲ್ಲಿ ಆಯೋಜಿಸಿದ ಸನ್ಮಾನ ಸಮಾರಂಭದಲ್ಲಿ ಕಾರ್ಯಕರ್ತರೊಂದಿಗೆ ಮಾತನಾಡಿದ ಅವರು, ನಿರಂತರ ಹೋರಾಟ, ಪಕ್ಷ ಸಂಘಟನೆ ಜೊತೆಗೆ ಗಟ್ಟಿಯಾದ ಹೆಜ್ಜೆಯನ್ನುಟ್ಟುಕೊಂಡು ದುಡಿಯಬೇಕು. ಕಾನೂನು ಹೋರಾಟ ನಡೆಸಲು ಪ್ರತಿಯೊಬ್ಬ ಕಾರ್ಯಕರ್ತರು ಸಜ್ಜಾಗಿರಬೇಕು. ರಾಜ್ಯ ಕಾಂಗ್ರೆಸ್ ಸರ್ಕಾರ ನೀಡಿರುವ ಐದು ಗ್ಯಾರಂಟಿಗಳ ವಿಫಲತೆಗಳ ಬಗ್ಗೆ ಜನರಿಗೆ ಮನವರಿಕೆ ಮಾಡಬೇಕು. ಈಗಾಗಲೇ ಬೋಗಸ್ ಎನ್ನಲಾಗುತ್ತಿರುವ ಗ್ಯಾರಂಟಿಗಳ ಬಗ್ಗೆ ತೀರ್ವವಾದ ವಿರೋಧ ಅಭಿಪ್ರಾಯಗಳನ್ನು ಸಂಗ್ರಹಿಸಿ, ಸರ್ಕಾರದ ವಿಫಲತೆಗಳನ್ನು ಸಾರ್ವಜನಕವಾಗಿ ಬಯಲುಗೊಳಿಸಿ ಎಂದು ಹೇಳಿದರು.


ಜಿಲ್ಲಾ ಬಿಜೆಪಿಯ ವಿವಿಧ ಘಟಕದ ಪದಾಧಿಕಾರಿಗಳ ಜೊತೆ ಸಂವಹನ ನಡೆಸಿದ ಸಚಿವರು ಯುವ ಮೋರ್ಚಾದವರಿಗೆ ನಿಮ್ಮ ಮೇಲೆ ಎಷ್ಟು ಪ್ರಕರಣಗಳು ದಾಖಲಾಗಿವೆ. ಯಾರು ಜೈಲು ವಾಸ ಅನುಭವಿಸಿದ್ದೀರಿ ಎಂದು ಪ್ರಶ್ನೆ ಎಸೆದರು. ಹೋರಾಟ ಮನೋಭಾವನೆ ಇದ್ದವನು ಮಾತ್ರ ರಾಜಕೀಯ ಕ್ಷೇತ್ರದಲ್ಲಿ ಬೆಳೆಯಲು ಸಾಧ್ಯ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಅಮೀನರೆಡ್ಡಿ ಯಾಳಗಿ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರಕಾರದ ಯೋಜನೆಗಳ ವೈಫಲ್ಯಗಳ ಬಗ್ಗೆ ಜನರಿಗೆ ಮನದಟ್ಟು ಮಾಡುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಈಗಾಗಲೇ ವಕ್ಫ್ ಹೋರಾಟಕ್ಕೆ ಮಣಿದ ಸರ್ಕಾರ ಸರಿಪಡಿಸುವ ನಿಟ್ಟಿನಲ್ಲಿ ತನ್ನ ಹೆಜ್ಜೆ ಹಿಂಪಡೆದಿದೆ. ಬಿಜೆಪಿ ಪಕ್ಷದಲ್ಲಿ ಎಲ್ಲರೂ ಸಮಾನರಾಗಿ ದುಡಿಯುವ ಮನೋಭಾವನೆ ಇದೆ. ಪ್ರಧಾನಿ ಮೋದಿ ಅವರ ಯೋಜನೆಗಳನ್ನು ಜನರಿಗೆ ತಲುಪಿಸುವ ಕೆಲಸ ನಾವೆಲ್ಲರೂ ಶ್ರಮವಹಿಸಿ ಮಾಡಬೇಕೆಂದು ಹೇಳಿದರು.

ಯಾವುದೇ ತಾರತಮ್ಯಗಳನ್ನು ಮಾಡದ ಬಿಜೆಪಿ ಪಕ್ಷದಲ್ಲಿ ರಾಷ್ಟ್ರೀಯತೆ ಸಿದ್ಧಾಂತದ ಮೇಲೆ ನಾವೆಲ್ಲರೂ ದುಡಿಯೋಣ, ಪಕ್ಷ ಸಂಘಟನೆ, ಉತ್ತಮ ಕ್ರಿಯಾಶೀಲತೆಯಿಂದ ಕೆಲಸ ಮಾಡಬೇಕು. ಕೇಂದ್ರ ಗೃಹ ವ್ಯವಹಾರಗಳ ರಾಜ್ಯ ಸಚಿವರಾದ ಬಂಡಿ ಸಂ-ಜಯ ಅವರ ಮಾತುಗಳಂತೆ ಹೋರಾಟದಿಂದ ಮಾತ್ರ ಸಂಘಟನೆ ಸಾಧ್ಯ, ಹಾಗಾಗಿ ರಾಜ್ಯ ಕಾಂಗ್ರೆಸ್ ಸರ್ಕಾರ ವಿವಿಧ ಜನವಿರೊಧಿ ನಡೆಯನ್ನು ಖಂಡಿಸಿ ಜಿಲ್ಲೆಯಾದ್ಯಂತ ಹೋರಾಟ, ಪ್ರತಿಭಟನೆ ನಡೆಸಲಾಗುತ್ತದೆ ಎಂದರು.

ಮಾಜಿ ಜಿಲ್ಲಾಧ್ಯಕ್ಷ ಶರಣಬೋಪಾಲರೆಡ್ಡಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರು ಕಾಮಾ, ರಾಜ್ಯ ಮಹಿಳಾ ಕಾರ್ಯದರ್ಶಿ, ನಗರಸಭೆ ಅಧ್ಯ-ಕ್ಷೆ ಲಲಿತಾ ಅನಪುರ, ಜಿಲ್ಲಾ ವಕ್ತಾರ ಹಣಮಂತ ಇಟಗಿ, ದೇವೆಂದ್ರನಾಥ ನಾದ, ವೆಂಕಟರೆಡ್ಡಿ ಅಬ್ಬೆತುಮಕೂರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು....

## ಜನರ ಧ್ವನಿಯಾಗಿ ನಾ ವಿಧಾನಸೌಧದಲ್ಲಿ ಮಾತಾಡ್ತಿನಿ: ಶಾಸಕ ಶರಣಗೌಡ ಕಂದಕೂರ




(ಎಂ.ರಫೀಕ್ ಪಟೇಲ್)

ಮಲ್ಲಮ್ಮ ನುಡಿ ವಾರ್ತೆ

**ಕಂದಕೂರ ಮಂತ್ರಿ ಖಚಿತ**

ರಾಜ್ಯ ರಾಜಕೀಯದಲ್ಲಿ ಮುಂದಿನ ದಿನಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಮತ್ತೇ ಬರ್ತದಾ ಶರಣಗೌಡ ಕಂದಕೂರ ಮಂತ್ರಿ ಆಗೋದು ಖಚಿತ.

**ಸನ್ಮಾನ ಸಮಾರಂಭದಲ್ಲಿ ಕಟಕಟಿ ಬಾವುಕ**

ಅಣ್ಣಾ ಇವತ್ತು ನನ್ನ ಕುಟುಂಬಕ್ಕೆ ನಿಮ್ಮ ಕುಟುಂಬದ ಆಶೀರ್ವಾದ ಸದಾ ಇದೆ. ಊರಿಗೆ ಒಳ್ಳೆಯದನ್ನು ಮಾತ್ರ ನಾ ಮಾಡಿನಿ ಅದಕ್ಕಾಗಿ ಕಂದಕೂರ ಕುಟುಂಬದ ಆಶೀರ್ವಾದ ಇದೆ.

ಕಂದಕೂರ ಕುಟುಂಬಕ್ಕೆ ಯಾವುದೇ ಕಪ್ಪು ಚುಕ್ಕೆ ಬಾರದಂತೆ ಜೆಡಿಎಸ್ ಜಿಲ್ಲಾಧ್ಯಕ್ಷ ಹುದ್ದೆ ನಿಭಾಯಿಸುತ್ತೇನೆ .

**- ಸುಭಾಷ ಕಟಕಟಿ ಜೆಡಿಎಸ್ ಜಿಲ್ಲಾಧ್ಯಕ್ಷರು, ಯಾದಗಿರಿ**

**ಶಾಸಕ ಕಂದಕೂರ ಅದ್ದೂರಿ ಮೆರವಣಿಗೆ**

ಗುರುಮಠಕಲ್ ಮತಕ್ಷೇತ್ರದ ಹೊನಗೇರಾ ಗ್ರಾಮದಲ್ಲಿ ಶಾಸಕ ಶರಣಗೌಡ ಕಂದಕೂರ ಅಭಿನಂದನಾ ಸಮಾರಂಭ ಹಾಗೂ ಜೆಡಿಎಸ್ ನೂತನ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಸುಭಾಶ್ಚಂದ್ರ ಕಟಕಟಿಯವರಿಗೆ ಸನ್ಮಾನ ಸಮಾರಂಭದ ನಿಮಿತ್ತ ಗ್ರಾಮದ ಪ್ರಮುಖ ಬೀದಿಗಳಲ್ಲಿ ಅದ್ದೂರಿ ಮೆರವಣಿಗೆ ಮಾಡಲಾಯಿತು.

ಯಾದಗಿರಿ : ರಾಜಕೀಯದಲ್ಲಿ ವಿರೋಧ ಸಾಮಾನ್ಯ, ವಿಧಾನಸೌಧದಲ್ಲಿ ನಾ ಮಾತಾಡ್ತಿನಿ ಅಂದ್ರ ಅದು ನಿಮ್ಮಾಶೀರ್ವಾದದಿಂದ ಮಾತ್ರ, ಜನರ ಧ್ವನಿಯಾಗಿ ನಾ ವಿಧಾನಸೌಧದಲ್ಲಿ ಮಾತಾಡಿನಿ ಎಂದು ಗುರುಮಠಕಲ್ ಶಾಸಕ ಶರಣಗೌಡ ಕಂದಕೂರ ಹೇಳಿದರು.

ತಾಲೂಕಿನ ಹೊನಗೇರಾ ಗ್ರಾಮದಲ್ಲಿ ಶಾಸಕ ಶರಣಗೌಡ ಕಂದಕೂರ ಅಭಿನಂದನಾ ಸಮಾರಂಭ ಹಾಗೂ ಜೆಡಿಎಸ್ ನೂತನ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಸುಭಾಶ್ಚಂದ್ರ ಕಟಕಟಿಯವರಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು.

ತಾಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ, ಎಪಿಎಂಸಿ ಸೇರಿದಂತೆ ಮುಂದೆ ಹಲವು ಚುನಾವಣೆಗಳು ಬರಲಿವೆ, ಪಕ್ಷ ಸಂಘಟನೆಗೆ ಇನ್ನೂ ಹೆಚ್ಚಾಗಿ ಆಗಬೇಕಿದೆ, ಪಕ್ಷ ಉಳಿದರೆ ನಾವು ನೀವು ಉಳಿಯೋದು ಸಾಧ್ಯ ಅದನ್ನರಿತು ಕಾರ್ಯಕರ್ತರು ಪಕ್ಷ ಸಂಘಟನೆಯಲ್ಲಿ ತೊಡಗಿಕೊಳ್ಳಬೇಕು ಎಂದು ಹೇಳಿದರು.

ಗುರುಮಠಕಲ್ ಮುಖಂಡರಾದ ಬಸಣ್ಣ ದೇವರಳ್ಳಿ ಮಾತನಾಡಿ, ನಾಲ್ಕು ದಶಕಗಳ ದಲಿತರ ಕನಸು ಗುರುಮಠಕಲ್ ನಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಬಾಬು ಜಗಜೀವನರಾಂ ಪುತ್ಥಳಿ ಅನಾವರಣ ಮಾಡಿ ದಲಿತರ ಕನಸು ನನಸು ಮಾಡಿದ್ದಾರೆ ಎಂದರು.

ಶರಣಗೌಡ ಕಂದಕೂರ ಅವರು ಗುರುಮಠಕಲ್‌ಗೆ ಶಾಶ್ವತ ಶಾಸಕರು ಕಳೆದ ನಾಲ್ಕು ದಶಕಗಳಿಂದಾಗ ಅಭಿವೃದ್ಧಿಯನ್ನು ಮಾಡಿದ್ದಾರೆ. ಹಳ್ಳಿಗಳ ಪ್ರತಿಯೊಂದು ಕುಟುಂಬದ ಜೊತೆ ಸಂಪರ್ಕದಲ್ಲಿದ್ದು, ಅವರ ಕಷ್ಟ, ನೋವು ನಲಿವುಗಳಿಗೆ ಸ್ಪಂದಿಸುತ್ತಿದ್ದಾರೆ ಎಂದು ಹೇಳಿದರು.

ಈಶಪ್ಪರ್ಯಾಕಾ ಪ್ರಾಸ್ತಾವಿಕ ಮಾತನಾಡಿ, ಕಂದಕೂರ ಕುಟುಂಬದಿಂದ ಯಾದಗಿರಿ ಜಿಲ್ಲೆಯಲ್ಲಿ ಜೆಡಿಎಸ್ ಜೀವಂತವಾಗಿದೆ. ನಮ್ ನಾಯಕರು ಬರಿ ಹೇಳೋದಲ್ಲ ಕೆಲಸ ಮಾಡಿ ತೋರಸ್ತಾರ ಜೆಡಿಎಸ್ ನಲ್ಲಿ ಲಾಬಿ ಇಲ್ಲ ನಿಷ್ಠೆಗೆ ಮಾತ್ರ ಹುದ್ದೆ ಎನ್ನುವದನ್ನು ಮತ್ತೊಮ್ಮೆ ನಿಷ್ಠಾವಂತ ಕಾರ್ಯಕರ್ತರಿಗೆ ಜಿಲ್ಲಾಧ್ಯಕ್ಷ ಹುದ್ದೆ ಕೊಟ್ಟಿರುವುದೇ ಸಾಕ್ಷಿಯಾಗಿದೆ. ನಮ್ಮೂರಿಗೆ ಜೆಡಿಎಸ್ ಜಿಲ್ಲಾಧ್ಯಕ್ಷ ಹುದ್ದೆಯ ಜವಾಬ್ದಾರಿ ಕೊಟ್ಟು ಮೊತ್ತೊಮ್ಮೆ ಹೊನಗೇರಾ ಗ್ರಾಮದ ಕೈ ಶಾಸಕ ಶರಣಗೌಡ ಕಂದಕೂರ ಅವರು ಹಿಡಿದಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ದೊಡ್ಡನಾಗಪ್ಪ ಬೋವಿ, ಜಿ.ತಮ್ಮಣ್ಣ, ಮಲ್ಲಣಗೌಡ ಕೌಳೂರ, ಶರಣು ಆವಂಟಿ, ಭೋಜನಗೌಡ ಯಡ್ಡಳ್ಳಿ, ಪ್ರಕಾಶ ನಿರೆಟಿ, ಬಸಣ್ಣ ದಢವರಳ್ಳಿ, ಕೃಷ್ಣಾರಡ್ಡಿ, ಪಾಪಣ್ಣಮನ್ನೆ, ನಾಗರಾಜ ದೇಶಮುಖ, ಅಜಯರಡ್ಡಿ ಎಲ್ಹೇರಿ, ರವಿ ಪಾಟೀಲ, ರಾಮಣ್ಣ ಬಳಿಚಕ್ರ, ಸಣ್ಣಪ್ಪ ಕೋಟಗೇರಾ, ಗಿರಿನಾಥರಡ್ಡಿ, ನಾಗರಡ್ಡಿ ಮೋಟ್ನಳ್ಳಿ, ಮಾರ್ಥಂಡಪ್ಪ ಮಾನೇಗಾರ, ತಾಯಪ್ಪ ಬದ್ದೇಪಲ್ಲಿ, ಈಶ್ವರ ನಾಯಕ, ನರಾಪ್ಪ ಕವಡೆ, ಹಣಮಂತ ಬಂದಳ್ಳಿ, ತಿಪ್ಪಾರಡ್ಡಿ, ಶರಣಗೌಡ ಮೋಟ್ನಳ್ಳಿ, ಸೋಮನಗೌಡ ಬೆಳಗೇರಾ, ಗುರುನಾಥರಡ್ಡಿ ಸೈದಾಪೂರ, ಅಮೀನರಡ್ಡಿ, ಮಲ್ಲಣಗೌಡ ಹತ್ತಿಕುಣಿ ಇದ್ದರು.

## ಗುರುಮಠಕಲ್ ಶಾಸಕ ಶರಣಗೌಡ ಕಂದಕೂರ ಮನೆಗೆ ಕೇಂದ್ರ ಗೃಹಖಾತೆ ರಾಜ್ಯ ಸಚಿವ ಬಂಡಿ ಸಂಜಯ ಕುಮಾರ ಭೇಟಿ



(ಎಂ.ರಫೀಕ್ ಪಟೇಲ್)

ಮಲ್ಲಮ್ಮ ನುಡಿ ವಾರ್ತೆ

**ಕಂದಕೂರ ಮಂತ್ರಿ ಖಚಿತ**

ರಾಜ್ಯ ರಾಜಕೀಯದಲ್ಲಿ ಮುಂದಿನ ದಿನಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಮತ್ತೇ ಬರ್ತದಾ ಶರಣಗೌಡ ಕಂದಕೂರ ಮಂತ್ರಿ ಆಗೋದು ಖಚಿತ.

**- ಬಸಣ್ಣ ದೇವರಳ್ಳಿ ಗುರುಮಠಕಲ್ ಮುಖಂಡರು**

ಯಾದಗಿರಿ : ಗುರುಮಠಕಲ್ ಶಾಸಕ ಶರಣಗೌಡ ಕಂದಕೂರ ಮನೆಗೆ ಕೇಂದ್ರ ಗೃಹಖಾತೆ ರಾಜ್ಯ ಸಚಿವ ಬಂಡಿ ಸಂಜಯ ಕುಮಾರ ಸೌಹಾರ್ದಯುತ ಭೇಟಿ ನೀಡಿದರು.

ಯಾದಗಿರಿ ನಗರದ ಶಾಸಕರ ಮನೆಗೆ ಗುರುವಾರ ಸಂಜೆ ಆಗಮಿಸಿದ ಕೇಂದ್ರ ಸಚಿವರು, ಪಕ್ಷ ಸಂಘಟನೆ ಸೇರಿದಂತೆ ಉಭಯ ಕುಶಲೋಪರಿ ನಡೆಸಿದರು. ನಂತರ ಮಾತನಾಡಿದ ಕೇಂದ್ರ ಸಚಿವರು, ಯಾದಗಿರಿ ಜಿಲ್ಲೆಯ ಅಭಿವೃದ್ಧಿ ಕುರಿತಂತೆ ಶಾಸಕರನ್ನು ವಿಚಾರಿಸಿದಾಗ ಶಾಸಕರು ಅಭಿವೃದ್ದಿ ವಿಷಯಗಳ ಬಗ್ಗೆ, ವಾಸ್ತವಾಂಶಗಳನ್ನು ಕೇಂದ್ರ ಸಚಿವರ ಗಮನಕ್ಕೆ ತಂದಿದ್ದಲ್ಲದೇ ಕಳೆದ ಲೋಕಸಭೆ ಚುನಾವಣೆಯಲ್ಲಿನ ಗುರುಮಠಕಲ್ ಕ್ಷೇತ್ರದ ಬಹುತಮದ ಬಗ್ಗೆ ಕೂಡ ಸಚಿವರಿಗೆ ತಿಳಿಸಿದರು.


ರಸ್ತೆ, ಕುಡಿಯುವ ನೀರು ಸೇರಿದಂತೆ ಹಲವು ಮೂಲಸೌಕರ್ಯಗಳ ಜೊತೆ ಇನ್ನಿತರ ಸೌಲಭ್ಯಗಳ ಬಗ್ಗೆ ಉಭಯ ನಾಯಕರು ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷರಾದ ಸುಭಾಶ್ಚಂದ್ರ ಕಟಕಟಿ, ವಕ್ತಾರರಾದ ಮಲ್ಲಣಗೌಡ ಕೌಳೂರ, ಬಿಜೆಪಿ ಮುಖಂಡರಾದ ಡಾ.ಶರಣಭೂಪಾಲರಡ್ಡಿನಾಯ್ಕಲ್, ಗುರುಕಾಮಾ ಸೇರಿದಂತೆ ಜೆಡಿಎಸ್ ಕಾರ್ಯಕರ್ತರಿದ್ದರು.

## ಯಾಳಗಿಯಲ್ಲಿ ಅದ್ದೂರಿಯಾಗಿ ಜರುಗಿದ ಗ್ರಾಮದೇವತೆ ಜಾತ್ರಾಮಹೋತ್ಸವ

(ಮಲ್ಲಿಕಾರ್ಜುನ್ ಮಳಿಕೇರಿ)

ಮಲ್ಲಮ್ಮ ನುಡಿ ವಾರ್ತೆ



ಕೆಂಭಾವಿ: ಸಮೀಪದ ಯಾಳಗಿ ಗ್ರಾಮದಲ್ಲಿ ಗ್ರಾಮದೇವತೆ ಶ್ರೀದೇವಿ ಜಾತ್ರಾ ಮಹೋತ್ಸವ ಬಲು ಸಂಭ್ರಮ ಸಡಗರದಿಂದ ಬಲು ಅದ್ದೂರಿಯಾಗಿ ಜರುಗಿತು

ಗುರುವಾರ ರಾತ್ರಿ ದೇವಸ್ಥಾನದಲ್ಲಿ ಗ್ರಾಮದೇವತೆ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ಎತ್ತಿನಬಂಡಿಯ ರಥದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಗಂಗಾಸ್ನಾನದ ನಂತರ ಪೂಜಾ ಕೈಕಂರ್ಯ ಕೈಗೊಂಡು ಲಕ್ಷ್ಮೀ ಗುಡಿಯ ಪಕ್ಕದಲ್ಲಿ ದೇವತೆಯನ್ನು ಪ್ರತಿಷ್ಠಾಪಿಸಿದರು. ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಉಡಿ ತುಂಬಲಾಯಿತು. ಗ್ರಾಮದಲ್ಲಿ ಮಳೆ ಬೆಳೆ, ಶಾಂತಿ ಸಮೃದ್ಧಿಗಾಗಿ ದೇವಿಗೆ ಭಕ್ತರು ಬೇಡಿಕೊಂಡು ಮೂರು ವರ್ಷಕ್ಕೊಮ್ಮೆ ನೇರವೇರುವ ಈ ಜಾತ್ರೆಯಲ್ಲಿ ಕವಡಿ ಪದಗಳು, ಭಜನೆ ಪದಗಳು,ಸಂಗೀತ ರಸಮಂಜರಿ,ಟೋರ್ನಾಮೆಂಟ್ , ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಭಕ್ತರು ದೇವಿಗೆ ದೀಡ ನಮಸ್ಕಾರ ಹಾಕುವ ಮೂಲಕ ಭಕ್ತಿಯ ಪರಾಕಾಷ್ಟೆ ಮೆರೆದರು. ವಿವಿಧ ಗ್ರಾಮಗಳಿಂದ ಆಗಮಿಸಿದ ಡೊಳ್ಳು ಕುಣಿತಗಳು, ಸರ್ಕಾರಿ ಪ್ರೌಢ ಶಾಲೆಯ ಮಕ್ಕಳ ರಂಗೋಲಿ ಚಿತ್ರಣ, ಕಂಸಾಳೆ ಪದಗಳು ವೀರಗಾಸೆ, ಗೊಂಬೆ ಕುಣಿತ, ಜನರಿಗೆ ಇಮ್ಮಡಿಗೊಳಿಸಿತ್ತು. ಜಾತ್ರಾ ಸಂಭ್ರಮದಲ್ಲಿ ಸಾವಿರಾರು ಭಕ್ತರು ನೆರೆದಿದ್ದರು.

# ಖಾದಿ ಉತ್ಸವ, ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಮುಖ್ಯಮಂತ್ರಿಗಳಿಂದ ಚಾಲನೆ

ಮಲ್ಲಮ್ಮ ನುಡಿ ವಾರ್ತೆ

ಬೆಳಗಾವಿ / ಬೆಂಗಳೂರು, ಡಿಸೆಂಬರ್ 27–ರಾಷ್ಟ್ರಪಿತ ಮಹಾತ್ಮಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ 1924ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನನದ ಶತಮಾನೋತ್ಸವ ಆಚರಣೆ ಹಿನ್ನೆಲೆಯಲ್ಲಿ ಬೆಳಗಾವಿ ನಗರದಲ್ಲಿ ವಿಶೇಷವಾಗಿ ರೂಪಿಸಿರುವ ಸರಸ್ ಮೇಳ ಮತ್ತು ಖಾದಿ ಉತ್ಸವ, ವಸ್ತುಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ನಗರದ ಸರ್ದಾರ್ ಹೈಸ್ಕೂಲ್ ಮೈದಾನದಲ್ಲಿ ಗುರುವಾರ ವಿದ್ಯುಕ್ತ ಚಾಲನೆ ನೀಡಿದರು.

ಬೆಳಗ್ಗೆ ನಗರದ ಟಿಳಕವಾಡಿಯಲ್ಲಿನ ವೀರಸೌಧದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಬಳಿಕ ನೇರವಾಗಿ ಸರ್ಧಾರ್ ಹೈಸ್ಕೂಲ್ ಮೈದಾನಕ್ಕೆ ಆಗಮಿಸಿದ ಮುಖ್ಯಮಂತ್ರಿಗಳಿಗೆ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಚಿವರಾದ ಡಾ.ಶರಣಪ್ರಕಾಶ ಪಾಟೀಲ ಹಾಗೂ ಇನ್ನಿತರ ಗಣ್ಯರು ಆತ್ಮೀಯವಾಗಿ ಬರಮಾಡಿಕೊಂಡರು.

ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್, ಶತಮಾನೋತ್ಸವ ಸಮಿತಿಯ ಅಧ್ಯಕ್ಷರು ಹಾಗೂ ಸಚಿವರಾದ ಎಚ್.ಕೆ.ಪಾಟೀಲ್, ಸಚಿವರಾದ ಡಾ.ಹೆಚ್.ಸಿ.ಮಹಾದೇವಪ್ಪ, ಕೆ.ಎಚ್.ಮುನಿಯಪ್ಪ, ಲಕ್ಷ್ಮೀ ಹೆಬ್ಬಾಳಕರ್, ಎಂ.ಬಿ.ಪಾಟೀಲ, ಡಾ.ಎಂ.ಸಿ.ಸುಧಾಕರ, ದಿನೇಶ್ ಗುಂಡೂರಾವ್, ಭೈರತಿ ಸುರೇಶ, ಶಾಸಕರಾದ ಆರ್.ವಿ.ದೇಶಪಾಂಡೆ, ದೆಹಲಿಯ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ, ಮಾಜಿ ಮುಖ್ಯಮಂತ್ರಿಗಳಾದ ಎಂ.ವೀರಪ್ಪ ಮೊಯ್ಲಿ ಸೇರಿದಂತೆ ಹಲವಾರು ಗಣ್ಯರೊಂದಿಗೆ ಮುಖ್ಯಮಂತ್ರಿಗಳು ಬೆಳಗಾವಿ ನಗರದಲ್ಲಿ ಸ್ವ–ಸಹಾಯ ಗುಂಪಿನ ಮಹಿಳೆಯರ ಉತ್ಪನ್ನಗಳು ಹಾಗೂ ಖಾದಿ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ ಮೇಳ 'ಅಸ್ಮಿತೆ' ವ್ಯಾಪಾರ ಮೇಳ–2024ವನ್ನು ಉದ್ಘಾಟಿಸಿದರು.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ರಾಜ್ಯ ಜೀವನೋಪಾಯ ಅಭಿಯಾನ ಮತ್ತು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಮತ್ತು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮಹಾನಗರ ಪಾಲಿಕೆ ಸಹಭಾಗಿತ್ವದಲ್ಲಿ ಈ ಸರಸ್ ಮೇಳ ಮತ್ತು ಖಾದಿ ಉತ್ಸವವು ಆರಂಭವಾಗಿದ್ದು, ಡಿಸೆಂಬರ್ 26ರಿಂದ ಜನವರಿ 04ರವರೆಗೆ ನಡೆಯಲಿದೆ.



ಎಲ್ಲಾ ಜಿಲ್ಲೆಗಳಿಂದ ಸ್ವ–ಸಹಾಯ ಗುಂಪಿನ ಮಹಿಳೆಯರು ಭಾಗಿ: ಈ ಕಾರ್ಯಕ್ರಮದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸ್ವ–ಸಹಾಯ ಗುಂಪಿನ ಮಹಿಳೆಯರು ತಮ್ಮ ತಮ್ಮ ಜಿಲ್ಲೆಯ ಪ್ರಮುಖ ಉತ್ಪನ್ನಗಳೊಂದಿಗೆ ಭಾಗವಹಿಸಿದ್ದು, ಒಟ್ಟು 150 ಮಳಿಗೆಗಳನ್ನು ಸ್ಥಾಪಿಸಲಾಗಿದೆ. ಅದರಲ್ಲಿ 10 ಆಹಾರ ಮೇಳದ ಮಳಿಗೆಗಳು ಮತ್ತು 50 ಖಾದಿ ಉತ್ಪನ್ನಗಳ ಮೇಳಗಳು ಒಳಗೊಂಡಿದೆ. ಈ ಮೇಳಕ್ಕೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿದ್ದು, 2024ನೇ ಡಿಸೆಂಬರ್ 26ರಿಂದ 2025ನೇ ಜನವರಿ 04ರವರೆಗೆ ಪ್ರತಿ ದಿನ ಬೆಳಿಗ್ಗೆ 10.30 ಯಿಂದ ರಾತ್ರಿ 9.30 ರವರೆಗೆ ಪ್ರದರ್ಶನ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ.

ಪ್ರತಿದಿನ ಸಾಂಸ್ಕೃತಿಕ ಕಾರ್ಯಕ್ರಮ: ಪ್ರತಿ ದಿನ ಸಂಜೆ 6.30 ರಿಂದ 9.00 ಗಂಟೆಯವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಬೆಳಗಾವಿಯಲ್ಲಿ ಆಯೋಜಿಸಲಾಗುತ್ತಿರುವ ಸತತ 4ನೇ ವರ್ಷದ ಈ ಮೇಳದಲ್ಲಿ ಪ್ರಮುಖವಾಗಿ ನಗರ ಹಾಗೂ ಗ್ರಾಮೀಣ ಸ್ವ–ಸಹಾಯ ಗುಂಪಿನ ಮಹಿಳೆಯರು ಉತ್ಪಾದಿಸುವ ಉತ್ಪನ್ನಗಳು ಮಾರಾಟ ಮಾಡುವುದು ವಿಶೇಷತೆಯಾಗಿದೆ.

ಆಕರ್ಷಣೀಯ ಅಕ್ಕ ಕೆಫೆ: ಸರ್ಕಾರವು 2024–25ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ರಾಜ್ಯದಲ್ಲಿ 50 'ಅಕ್ಕ ಕೆಫೆ'ಗಳನ್ನು ಒಂದೇ ಮಾದರಿ ವಿನ್ಯಾಸದಡಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದಡಿ ಅಂದಾಜು 1200 ಸ್ವ–ಸಹಾಯ ಗುಂಪಿನ ಮಹಿಳೆಯರಿಗೆ ಜೀವನೋಪಾಯಕ್ಕೆ ಅನುಕೂಲ ಕಲ್ಪಿಸಲಾಗುತ್ತಿದೆ. ಮುಂದುವರೆದು, 'ಅಕ್ಕ–ಕೆಫೆ' ಕಾರ್ಯಕ್ರಮದ ಭಾಗವಾಗಿ ಈ ಮೇಳದ ಮೈದಾನದಲ್ಲಿನ ಆಹಾರ ಕೋರ್ಟ್‌ನ್ನು "ಅಕ್ಕ–ಕೆಫೆ" ಶೀರ್ಷಿಕೆಯಡಿ ಆಕರ್ಷಣೀಯವಾಗಿ ಸಿದ್ಧಪಡಿಸಲಾಗಿದೆ.

ಸ್ಥಳದಲ್ಲೇ ಆಹಾರ ತಯಾರಿಕೆ: ಈ ಆಹಾರ ಮಳಿಗೆಗಳಲ್ಲಿ ಉತ್ತರ ಕರ್ನಾಟಕದಲ್ಲಿ ಹೆಸರುವಾಸಿಯಾದ ಗಿರಮಿಟ್ /ಚುರುಮರಿ ಮಂಡಕ್ಕಿ, ಜೋಳದ ಖಡಕ್ ರೊಟ್ಟಿ ಸೇರಿದಂತೆ ಹೋಳಿಗೆ, ಮಂಗಳೂರು ನೀರೋದೋಸೆ ಮತ್ತು ಮಾಂಸಹಾರಿ ಆಹಾರಗಳಾದ ಬ್ಯಾಂಬು ಬಿರಿಯಾನಿ ಮುಂತಾದವುಗಳನ್ನು ಸ್ಥಳದಲ್ಲೇ ತಯಾರಿಸಿ ಕೊಡಲಾಗುತ್ತಿದೆ.

ವಿಶೇಷ ಅಭಿಯಾನ: ರಾಜ್ಯದಲ್ಲಿ ಅಭಿಯಾನದಡಿ 2.79 ಲಕ್ಷ ಸ್ವ–ಸಹಾಯ ಗುಂಪುಗಳಡಿ 29.66 ಲಕ್ಷ ಕುಟುಂಬಗಳನ್ನು ಗ್ರಾಮೀಣ ಹಾಗೂ ನಗರ ಜೀವನೋಪಾಯ ಅಭಿಯಾನದಡಿ ಹಾಗೂ 45 ಸಾವಿರ ಸ್ವ–ಸಹಾಯ ಗುಂಪುಗಳಡಿ 4.50 ಲಕ್ಷ ಕುಟುಂಬಗಳನ್ನು ಗ್ರಾಮೀಣ ಹಾಗೂ ನಗರ ಜೀವನೋಪಾಯ ಅಭಿಯಾನದಡಿ ಸಂಘಟಿಸಲಾಗಿದ್ದು, ಪ್ರತಿಯೊಬ್ಬ ಮಹಿಳೆಯು ಸ್ವಾವಲಂಬನೆಯ ಬದುಕಿನೊಂದಿಗೆ ತನ್ನ ಕುಟುಂಬದ ಅಭಿವೃದ್ಧಿಗೆ ಪೂರಕ ಸೇವೆಗಳನ್ನು ಪಡೆಯುವಲ್ಲಿ ಪೂರಕ ವ್ಯವಸ್ಥೆಗಳನ್ನು ಕಲ್ಪಿಸಲಾಗುತ್ತಿದೆ.

ಉತ್ಪನ್ನಗಳಿಗೆ ಮಾರುಕಟ್ಟೆ: ರಾಜ್ಯದಲ್ಲಿ ಈ ಮಹಿಳೆಯರು ಉತ್ಪನ್ನಗಳ ಮಾರಾಟಕ್ಕೆ ಪ್ರತಿಯೊಂದು ಹಳ್ಳಿ, ಸಂತೆ, ತಾಲ್ಲೂಕು ಮಟ್ಟದಲ್ಲಿ ಮಾಸಿಕ ಸಂತೆ, ಜಿಲ್ಲಾ ವಸ್ತು ಪ್ರದರ್ಶನ ಮಾರಾಟ ಮೇಳ ಏರ್ಪಡಿಸುವುದಷ್ಟೇ ಅಲ್ಲದೆ ಇತರೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ನಡೆಯುವ ಮೇಳಗಳಿಗೆ ರಾಜ್ಯದ ಮಹಿಳೆಯರನ್ನು ನಿಯೋಜನೆ ಮಾಡುವ ಮೂಲಕ ಅವರ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಬೆಳಗಾವಿಯಲ್ಲಿ ಕಳೆದ 3 ವರ್ಷದಿಂದ ಬೃಹತ್ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಆಯೋಜಿಸಿದಂತೆ ಈ ವರ್ಷವು ಸಹ ಮೇಳ ಆಯೋಜಿಸಲಾಗಿದೆ ಎಂದು ರಾಷ್ಟ್ರೀಯ ಜೀವನೋಪಾಯ ಅಭಿಯಾನದ ನಿರ್ದೇಶಕಿ ಪಿ.ಐ.ವಿದ್ಯಾ ಅವರು ತಿಳಿಸಿದರು.

ನವನವೀನ ಉತ್ಪನ್ನಗಳು: ಬೆಳಗಾವಿಯ ಈ ಮೇಳದ ಮಳಿಗೆಗಳಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶದ ಸ್ವ–ಸಹಾಯ ಗುಂಪಿನ ಮಹಿಳೆಯರು ಉತ್ಪಾದಿಸಿರುವ ಉತ್ಪನ್ನಗಳಾದ ಚನ್ನಪಟ್ಟಣದ ಮರದ ಗೊಂಬೆಗಳು, ಕೊಪ್ಪಳದ ಕಿನ್ನಾಳ ಆಟದ ಸಾಮಾನುಗಳು, ಮೊಳಕಾಲ್ಮೂರು ಸೀರೆಗಳು, ಇಳಕಲ್ ಸೀರೆಗಳು, ರೇಷ್ಮೆ ಸೀರೆಗಳು, ವಿವಿಧ ನವಾಕರ್ಷಣೆಯ ಬಟ್ಟೆಗಳು, ನಾರಿನ ಉತ್ಪನ್ನದ ಬ್ಯಾಗ್ ಗಳು, ಮಸಾಲಾ ಉತ್ಪನ್ನಗಳು, ಸಿರಿಧಾನ್ಯ ಉತ್ಪನ್ನಗಳು, ಮೌಲ್ಯವರ್ಧಿತ ಕರಾವಳಿ ಉತ್ಪನ್ನಗಳು, ವಿವಿಧ ಬಗೆಯ ಖಾದಿ ಉತ್ಪನ್ನಗಳು, ಬಾಳೆ ನಾರಿನಿಂದ ಉತ್ಪಾದಿಸಿದ ಉತ್ಪನ್ನಗಳು, ಗೃಹಾಲಂಕಾರಿಕ ವಸ್ತುಗಳು, ಆಯುರ್ವೇದ ಔಷಧಿಯುತ ಉತ್ಪನ್ನಗಳು, ಪಾರಂಪರಿಕ ವಸ್ತುಗಳು, ಗೃಹೋಪಯೋಗಿ ವಸ್ತುಗಳು, ನವೀನ ವಿನ್ಯಾಸದ ಆಭರಣಗಳು, ಆಹಾರ ಉತ್ಪನ್ನಗಳು ಸೇರಿದಂತೆ ಅನೇಕ ಉತ್ಪನ್ನಗಳು ಸಾರ್ವಜನಿಕರಿಗೆ ಕೈಗೆಟುಕುವ ಬೆಲೆಯಲ್ಲಿ ಲಭ್ಯವಿವೆ.

# ಲಿಂಗಸುಗೂರ ಶಿಶು ಅಭಿವೃದ್ಧಿ ಯೋಜನೆ:ಅಪೂರ್ಣ ಅರ್ಜಿಗಳು ಪೂರ್ಣಗೊಳಿಸಲು ಜ 5 ರ ವರೆಗೆ ಕಾಲಾವಧಿ

ಮಲ್ಲಮ್ಮ ನುಡಿ ವಾರ್ತೆ

ಲಿಂಗಸುಗೂರು:ಲಿಂಗಸುಗೂರ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿನ ವಿವಿಧ ಗ್ರಾಮ ಪಂಚಾಯತ/ಪುರಸಭೆ/ಪಟ್ಟಣ ಪಂಚಾಯತಿ/ವ್ಯಾಪ್ತಿಯಲ್ಲಿ ಖಾಲಿ ಇರುವ 26 ಅಂಗನವಾಡಿ ಕಾರ್ಯಕರ್ತೆ ಮತ್ತು 52 ಅಂಗನವಾಡಿ ಸಹಾಯಕಿಯರ ಗೌರವ ಸೇವೆ ಹುದ್ದೆಗಳಿಗೆ ದಿನಾಂಕ:– 30.08.2024 ರಿಂದ 29.09.2024ರ ವರೆಗೆ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು ಪ್ರಸ್ತುತ ಅರ್ಜಿ ಸಲ್ಲಿಸುವ ಕಾಲಾವಧಿ ಮುಗಿದಿದ್ದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ಒಟ್ಟು 4 ವಿವಿಧ ಹಂತಗಳಿದ್ದು ಇದರಲ್ಲಿ ಕೆಲವರಿಗೆ ಒಂದನೇ ಹಂತದಲ್ಲಿಯೇ "Application Successfully Uploded" ಎಂಬ ಮೆಸೇಜ್ ಅವರಗಳ ಮೊಬೈಲ್‌ಗೆ ಸ್ವೀಕೃತವಾಗಿರುವುದರಿಂದ ಅರ್ಜಿಗಳನ್ನು ಪೂರ್ಣಗೊಳಿಸಿರುವುದಿಲ್ಲ ಯೋಜನೆಯಲ್ಲಿ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ 400 ಅಪೂರ್ಣ ಅರ್ಜಿಗಳು ಹಾಗೂ ಅಂಗನವಾಡಿ ಸಹಾಯಕಿಯರ ಹುದ್ದೆಗೆ 256 ಅಪೂರ್ಣ ಅರ್ಜಿಗಳು ಸ್ವೀಕೃತವಾಗಿರುತ್ತವೆ.

ದಿನಾಂಕ:– 20.12.2024ರ ಸರ್ಕಾರದ ಆದೇಶದಲ್ಲಿ ಅರ್ಜಿ ಸಲ್ಲಿಸುವ ನಾಲ್ಕು ಹಂತಗಳನ್ನು ಪೂರ್ಣಗೊಳಿಸದೇ ಅಪೂರ್ಣ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಮಾತ್ರ ದಿನಾಂಕ:–26.12.2024 ರಿಂದ 05.01.2025 ರವರೆಗೆ ಅರ್ಜಿಗಳನ್ನು ಪೂರ್ಣಗೊಳಿಸಲು ವೆಬ್‌ಸೈಟ್‌ನಲ್ಲಿ ಇಲಾಖಾ ವತಿಯಿಂದಲೇ ಅವಕಾಶ ನೀಡಿ ಆದೇಶಿಸಿಲಾಗಿರುತ್ತದೆ, ಅಪೂರ್ಣ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಅರ್ಜಿಗಳನ್ನು ಪೂರ್ಣಗೋಳಿಸಲು ದಿನಾಂಕ: 26.12.2024ರಿಂದ 05.01.2025 ರವರೆಗೆ ಸಂಜೆ 5:30 ರವರೆಗೆ ಕಾಲಾವಕಾಶ ನಿಗದಿಪಡಿಸಿದೆ. ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಬ್ಬು ಬೆಳೆದು ಕಂಗಾಲಾದ ರೈತರು ನೆರವಿಗೆ ಬಾರದ ಕಾರ್ಖಾನೆಗಳು– ಆರೋಪ




ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್,ಹುಮನಾಬಾದ್ ತಾಲ್ಲೂಕಿನ ರೈತರು ಕಬ್ಬು ಬೆಳೆದು ಕಂಗಾಲಾಗಿದ್ದಾರೆ ಎಂಬ ಆರೋಪ ಕೇಳಿಬರುತ್ತಿದೆ. ಕಬ್ಬಿನ ಕಾರ್ಖಾನೆ ಯ ಮಾಲಿಕರು ಅಧಿಕಾರಿಗಳು ರೈತರ ಕಬ್ಬು ಸಾಗಿಸದೇ ರೈತರ ಜೀವನದ ಜೊತೆ ಚಲ್ಲಾಟ ಆಡುತ್ತಿದ್ದಾರೆ ಎಂದು ರೈತರು ದೊರಿದ್ದಾರೆ. ಜಿಲ್ಲಾಡಳಿತ ರೈತರ ನೆರವಿಗೆ ಬರಬೇಕು ಎಂಬ ಒತ್ತಾಯ ರೈತರದಾಗಿದೆ

ಆಹಾರ ಸುರಕ್ಷಿತಾ ಮತ್ತು ಗುಣಮಟ್ಟದ ಪ್ರಾಧಿಕಾರ

# ಎಫ್‌ಎಸ್‌ಎಸ್‌ಎಐ ವತಿಯಿಂದ ಜಿಲ್ಲಾಮಟ್ಟದ ಸಲಹಾ ಸಮಿತಿ ಸಭೆ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಡಿ.27–ಆಹಾರಸುರಕ್ಷಿತಾ ಮತ್ತು ಗುಣಮಟ್ಟ ಪ್ರಾಧಿಕಾರ ಕಲಬುರಗಿ ಎಫ್‌ಎಸ್‌ಎಸ್‌ಎಐ (Fssai) ವತಿಯಿಂದ ಜಿಲ್ಲಾಮಟ್ಟದ ಸಲಹಾ ಸಮಿತಿ ಸಭೆಯು ಜಿಲ್ಲಾಧಿಕಾರಿ ಬಿ ಫೌಜಿಯಾ ತರನ್ನುಮ್ ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಹಮ್ಮಿಕೊಂಡಿದ್ದು, ಇಲಾಖೆಯ ಕಾರ್ಯವೈಖರಿಯ ಬಗ್ಗೆ ಪ್ರಗತಿ ಪರಿಶೀಲನೆ ಸಭೆ ನಡೆಸಿದರು.

ಗುರುವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸರ್ಕಾರಿ ಅಧೀನದಲ್ಲಿರುವ ಸರ್ಕಾರಿ, ವಸತಿ ನಿಲಯಗಳು, ಸರ್ಕಾರಿ ಶಾಲೆಗಳು, ಅಂಗನವಾಡಿ ಕೇಂದ್ರಗಳು ಭೇಟಿ ನೀಡಿ ಪರಿಶೀಲಿಸಿ ಆಹಾರ ಸುರಕ್ಷಿತಾ ಬಗ್ಗೆ ಅಧಿಕಾರಿಗಳಿಗೆ ಕ್ರಮವಹಿಸಿಲು ಸೂಚಿಸಿದರು.

ಆಹಾರ ತಯಾರಿಸುವ ಸಿಬ್ಬಂದಿಗಳು ಆರೋಗ್ಯತಪಾಸಣೆ ಮಾಡಿಸಲು ಹೊಟೇಲ್ ಮತ್ತು ರೆಸ್ಟೋರೆಂಟಗಳನ್ನು ಗುಣಮಟ್ಟದ ಆಹಾರ ಹಾಗೂ ಕುಡಿಯುವ ನೀರಿನ್ನು ಪರಿಶೀಲಿಸಲು ಅಧಿಕಾರಿಗಳಿಗೆ ತಿಳಿಸಿದರು.

ಬಿದಿ ಬದಿಯ ವ್ಯಾಪಾರಿಗಳಿಗೆ ಆಹಾರ ಸುರಕ್ಷತೆ ಬಗ್ಗೆ ತಿಳಿಸಲು ತಿಳಿಸಿದರು. ಚಿತ್ರಮಂದಿರದಲ್ಲಿನ ಆಹಾರ ಮಳಿಗಳಿಗೆ ಪರಿಶೀಲಿಸಿ ಸುರಕ್ಷತ ಬಗ್ಗೆ ಕ್ರಮವಹಿಸಬೇಕು ಯಾವುದೇ ಲೋಪ ಆಗದಂತೆ ಎಚ್ಚರ ವಹಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಾರ್ವಜನಿಕರಲ್ಲಿ ಸತತವಾಗಿ ಜಾಗೃತಿ ಕಾರ್ಯಕ್ರಮವನ್ನು ಎಲ್ಲಾ ತಾಲೂಕುಗಳಲ್ಲಿ ಹೊಬಳಿಮಟ್ಟದಲ್ಲಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಬೇಕು ಹೋಟೆಲ್, ಆಸ್ಪತ್ರೆ, ಅಂಗನವಾಡಿ, ಗಮನ ಹರಿಸಿ ಗುಣಮಟ್ಟದ ಆಹಾರದ ತಿಳುವಳಿಕೆ ಅಧಿಕಾರಿಗಳು ನೀಡಬೇಕೆಂದರು.

ಈಟ್ ರೈಟ್ ಹಣ್ಣು ಮತ್ತು ವೆಜಿಟೆಬಲ್ ಮಾರುಕಟ್ಟೆಗಳು ತರಕಾರಿ ಮಂಡಿಯ ವ್ಯಾಪಾರಸ್ಥರು ಮಾರಾಟ ಮಾಡುವ ಹಣ್ಣು ಮತ್ತು ತರಕಾರಿಗಳ ಶುಚಿತ್ವ ಮತ್ತು ಗುಣಮಟ್ಟವನ್ನು ಸುಧಾರಿಸುವ ಉಪಕ್ರಮವಾಗಿದೆ ಇದು ಸ್ಥಳೀಯ ಮಾರುಕಟ್ಟೆಗಳಲ್ಲಿ ಶುದ್ಧ ಮತ್ತು ತಾಜಾ ಹಣ್ಣುಗಳು ಮತ್ತು ತರಕಾರಿಗಳ ಬಗ್ಗೆ ಗ್ರಾಹಕರಿಗೆ ವಿಶ್ವಾಸವನ್ನು ಬೆಳೆಸುವ ಗುರಿಯನ್ನು ಹೊಂದಲು ತಿಳಿಸಿದರು.

ಈಟ್ ರೈಟ್ ಕ್ಯಾಂಪಸ್ ಎನ್ನುವುದು ಕಾಲೇಜುಗಳಲ್ಲಿ ವಿಶ್ವವಿದ್ಯಾನಿಲಯಗಳು, ಕೆಲಸ ಸ್ಥಳಗಳಲ್ಲಿ ಫುಡ್ ಕೋರ್ಟ್‌ಗಳು ಮತ್ತು ಆಸ್ಪತ್ರೆಗಳ ಸುರಕ್ಷಿತ ಮತ್ತು ಆರೋಗ್ಯಕರ ಪ್ರಮಾಣ ಪತ್ರಗಳನ್ನು ಮತ್ತು ಪ್ರಶಸ್ತಿಗಳನ್ನು ನೀಡುವ ಉಪಕ್ರಮವಾಗಿದೆ. ಈ ಅಂದೋಲವು ವಿದ್ಯಾರ್ಥಿಗಳು ಉದ್ಯೋಗಿಗಳ ಮತ್ತು ಸಾರ್ವಜನಿಕರುಗೆ ಸರಿಯಾದ ಆಹಾರ ಆಯ್ಕೆಗಳನ್ನು ಮಾಡಲು ಪೂರಕ ವಾತಾವರಣವನ್ನು ಸೃಷ್ಟಿಸುತ್ತದೆ ಎಂದರು.

ಪೂಜ್ಯ ಸ್ಥಳಗಳಲ್ಲಿ ತಯಾರಿಸುವ ಮತ್ತು ಮಾರಾಟ ಮಾಡುವ ಆಹಾರದ ನೈರ್ಮಲ್ಯ ಮತ್ತು ಗುಣಮಟ್ಟ ಸುಧಾರಿಸುವ ಒಂದು ಉಪಕ್ರಮವಾಗಿದೆ ಅಂತಿಮವಾಗಿ ಇದು ಭಕ್ತರು ಮತ್ತು ಯಾತ್ರಾರ್ಥಿಗಳಿಗೆ ದೇವಸ್ಥಾನ ಯಾತ್ರಾ ಸ್ಥಳಗಳಲ್ಲಿ ಮತ್ತು ಒದಗಿಸುವ ಸುರಕ್ಷಿತ ಮತ್ತು ಆರೋಗ್ಯಕರ ಆಹಾರದ ಗುಣಮಟ್ಟವನ್ನು ಕಾಪಾಡುವ ಗುರಿಯನ್ನು ಹೊಂದಬೇಕು ಎಂದರು.

ಇದಕ್ಕೂ ಮುನ್ನ ಈಟ್ ರೈಟ್ ಇಂಡಿಯಾಗ ಭಿತ್ತಿಪತ್ರಗಳನ್ನು ಬಿಡುಗಡೆಗೊಳಿಸಿದರು.

ಆಹಾರ ಸುರಕ್ಷತತೆ ಮತ್ತು ಗುಣಮಟ್ಟ ಪ್ರಾಧಿಕಾರಿ

# ಇಂದು ಯುವ ಸ್ಪಂದನ ವಿಶೇಷ ಕಾರ್ಯಾಗಾರ

ಮಲ್ಲಮ್ಮ ನುಡಿ ವಾರ್ತೆ

ಬೀದರ, ಡಿ.26 :– ಯುವಜನರನ್ನು ಸಶಕ್ತಗೊಳಿಸುವ ನಿಟ್ಟಿನಲ್ಲಿ ಪೋಷಕರಿಗೆ ಯುವ ಸ್ಪಂದನ ವಿಶೇಷ ಕಾರ್ಯಾಗಾರವನ್ನು ಡಿಸೆಂಬರ್.29 ರಂದು ಬೆಳಿಗ್ಗೆ 10 ರಿಂದ 1 ಗಂಟೆಯವರೆಗೆ ಯುವ ಸ್ಪಂದನ ಕೇಂದ್ರ ಒಳಾಂಗಣ ಕ್ರೀಡಾಂಗಣದ ಆವರಣ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೀದರದಲ್ಲಿ ನಡೆಸಲಾಗುತ್ತಿದೆ ಎಂದು ಬೀದರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವ ಸ್ಪಂದನ ಕಾರ್ಯಕ್ರಮವು ಕರ್ನಾಟಕ ಸರ್ಕಾರದ ಮಹಾತ್ವಾಕಾಂಕ್ಷಿ ಕಾರ್ಯಕ್ರಮವಾಗಿದ್ದು, ಯುವಜನ ಸಂಬಂಧಿಯಾವುದೇಗೊಂದಲಗಳಿಗೆ ಮಾರ್ಗದರ್ಶನ ನೀಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಕಾರ್ಯಕ್ರಮದ ಅಂಗವಾಗಿ ಪೋಷಕರಿಗೆ ಯುವ ಸ್ಪಂದನ ವಿಶೇಷ ಕಾರ್ಯಾಗಾರವನ್ನು ನಡೆಸಲಾಗುತ್ತಿದೆ. ಆದ್ದರಿಂದ ಜಿಲ್ಲೆಯ ಎಲ್ಲಾ ಪೋಷಕರು ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ.

ಈ ಕಾರ್ಯಾಗಾರದಲ್ಲಿ 10ನೇ ತರಗತಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಓದುತ್ತಿರುವ ಯುವಜನರ ಪೋಷಕರಿಗೆ ಆದ್ಯತೆ ನೀಡಲಾಗುವುದು. ಒಂದು ಕಾರ್ಯಾಗಾರದಲ್ಲಿ ಪೋಷಕರಲ್ಲಿ ಒಬ್ಬರಿಗೆ ಮಾತ್ರ ಅವಕಾಶವಿರುತ್ತದೆ. ಈ ಕಾರ್ಯಾಗಾರವನ್ನು ಮಕ್ಕಳ ಪೋಷಣೆ, ಪೋಷಕರ ಆತಂಕ ನಿವಾರಣೆ, ಒತ್ತಡ ನಿರ್ವಹಣೆ, ಮಕ್ಕಳೊಂದಿಗಿನ ಸಂವಹನ ಇತ್ಯಾದಿ ವಿಷಯಗಳ ಬಗ್ಗೆ ಚಟುವಟಿಕೆಗಳ ಮೂಲಕ ಕೈಗೊಳ್ಳಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ (08482–227222), (9886731405),(7996300194) ಗೆ ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

# ಜ.2 ರಂದು ಪ್ರಗತಿ ಪರಿಶೀಲನಾ ಸಭೆ

ಮಲ್ಲಮ್ಮ ನುಡಿ ವಾರ್ತೆ

ಬೀದರ, ಡಿ.26 :– ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಅಮೃತರಾವ ಚಿಮಕೋಡೆ ಅವರ ಅಧ್ಯಕ್ಷತೆಯಲ್ಲಿ ಜನವರಿ.2 ರಂದು ಬೆಳಿಗ್ಗೆ 11 ಗಂಟೆಗೆ ಬೀದರ ಜಿಲ್ಲಾ ಪಂಚಾಯತಿಯ ಸಭಾಂಗಣದಲ್ಲಿ ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾದ ಪಂಚ ಗ್ಯಾರಂಟಿ ಯೋಜನೆಗಳ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ ಎಂದು ಬೀದರ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸೋನಿಯಾ ಭಾವಪೂರ್ಣ ನಮನ

ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ:ಗುರುವಾರರಂದು ಅನಾರೋಗ್ಯದಿಂದ ನಿಧನರಾದ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಪಾರ್ಥಿವ ಶರೀರಕ್ಕೆ ಕಾಂಗ್ರೆಸ್ ಸಂಸದೀಯ ಮಂಡಳಿ ಅಧ್ಯಕ್ಷೆ ಸೋನಿಯಾ ಗಾಂಧಿ ಭಾವಪೂರ್ಣ ನಮನ ಸಲ್ಲಿಸಿದರು , ಮಲ್ಲಿಕಾರ್ಜುನ್ ಖರ್ಗೆ ,ರಾಹುಲ್ ಗಾಂಧಿ ,ಮತ್ತಿತರಿದ್ದಾರೆ.

# ಇಂದು ತುಮಕೂರಿನಲ್ಲಿ ಸಿಪಿಎಂ ರಾಜ್ಯ ಸಮ್ಮೇಳನ




ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಡಿ.27:ತುಮಕೂರಿನಲ್ಲಿ ಡಿ.29 ರಿಂದ ಮೂರು ದಿನಗಳ ಕಾಲ ಸಿಪಿಎಂ ಪಕ್ಷದ ರಾಜ್ಯ ಸಮ್ಮೇಳನ ನಡೆಯಲಿದೆಂದು ಪಕ್ಷದ ಮುಖಂಡ ಜೆ.ಸತ್ಯಬಾಬು ತಿಳಿಸಿದ್ದಾರೆ.

ಅವರು ಇಂದು ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ. ಈ ಸಮ್ಮೇಳನದಲ್ಲಿ ಪ್ರಜಾಪ್ರಭುತ್ವ ಉಳಿಸಿ. ಸೌಹಾರ್ದತೆ ಬಲಗೊಳಿಸಿ ,ಜನರ ಬದುಕುನ ಮೇಲಿನ ದಾಳಿ ಹಿಮ್ಮಟ್ಟಿಸಿ ಎಂಬ ಘೋಷ ವಾಕ್ಯದಡಿ ಮೂರು ನಡೆಯಲಿದೆ.

29 ರಂದು ಸ್ವಾತಂತ್ರ್ಯ ಚೌಕದಿಂದ ಬಿಜಿಎಸ್ ವೃತ್ತದ ವರಗೆ ರ್‍ಯಾಲಿ ನಡಯಲಿದೆ 10 ಸಾವಿರ ಜನ ಸೇರುವ ನಿರೀಕ್ಷೆ ಇದೆ ಬಿಜೆಎಸ್ ವೃತದ ಬಳಿ ಬಹಿರಂಗ ಅಧಿವೇಶನ ನಡಯಲಿದೆ. ಕೇರಳದ ಮಾಜಿ ಸಚಿವ ಎಂ ಎ ಬೇಬಿ ಉದ್ಘಾಟನೆ ಮಾಡಲಿದ್ದಾರೆ.

ಸಿಪಿಎಂ ರಾಷ್ಟ್ರೀಯ ನಾಯಕ ಬಿ ವಿ ರಾಘವಲು , ವಿಜಯ ರಾಘವನ್ ಮುಂತಾದ ವರು ಭಾಗವಹಿಸಲಿದ್ದಾರೆ

ಕೇಂದ್ರದಲ್ಲಿ ಅಧಿಕಾರದಲ್ಲಿರುವ ಎನ್ ಡಿ ಎ ನೇತ್ರತ್ವದ ಬಿಜೆಪಿ ಪಕ್ಷದ ಸರ್ಕಾರ ರೈತ ವಿರೋಧಿ , ಕಾರ್ಮಿಕ ವಿರೋಧಿ , ಜನ ವಿರೋಧಿ ನೀತಿಗಳನ್ನು ಜಾರಿ ಮಾಡುತ್ತಿದೆ. ಒಂದು ರಾಷ್ಟ ಒಂದು ಚುನಾವಣೆ ಜಾರಿ ಮಾಡಲು ಮುಂದಾಗಿದೆ.

ಇದರಂದ ರಾಷ್ಟ ವನ್ನು ಸರ್ವಾಧಿಕಾರಕಾರಿಯುತ್ತ ಕೊಂಡೊಯ್ಯಲಿದೆ. ನಮ್ಮ ದೇಶವು ಒಕ್ಕೂಟದ ವ್ಯವಸ್ಥೆಯಲ್ಲಿ ಇದ್ದು ಭಿನ್ನವಾದ ಸಂಸ್ಕೃತಿ, ಬಹು ಭಾಷೆಗಳು ಇದ್ದು ಒಕ್ಕೂಟ ವ್ಯವಸ್ಥೆಯಲ್ಲಿ ಒಂದಾಗಿ ನಾವು ಇದ್ದೇವೆ.

ವಿಧಾನ ಸಭಾ , ಜಿಲ್ಲಾ , ತಾಲ್ಲುಕಾ, ಗ್ರಾಮ ಪಂಚಾಯತಿ ಎಂದು ಅಧಿಕಾರ ವಿಕೇಂದ್ರಕರಣ ವಾಗಿದೆ. ಒಂದು ದೇಶ ಒಂದು ಚುನಾವಣಾ ಮುಖಾಂತರ ಎಲ್ಲವನ್ನು ಏಕೀಭಿವಿಸುವುದು ಪ್ರಜಾಪ್ರಭುತ್ವಕ್ಕೆ ಮಾರಕವಾಗತ್ತದೆ. ಇದು ಜನರ ನಮ್ಮ ಸಂವಿಧಾನ ಆಶಯಗಳಿಗೆ ಧಕ್ಕೆ ತರುತ್ತದೆ.

ಕೇಂದ್ರಸರ್ಕಾರ ರಾಜ್ಯಸರ್ಕಾರದ ಅಧಿಕಾರಗಳನ್ನು ಮೊಟಕು ಗೊಳಿಸಲು ಮುಂದಾಗುತ್ತಿದೆ.

ರಾಜ್ಯಗಳಿಗೆ ಬರಬೇಕಾದ ಅನುದಾನದ ಬಿಡುಗಡೆ ಮಾಡುತ್ತಿಲ್ಲ. ತಾರತಮ್ಯ ಧೊರಣಿ ಅನುಸರಿಸುತ್ತಿದೆ

ಬಿಜೆಪಿ ವಿರೋಧಿ ಪಕ್ಷಗಳು ಅಧಿಕಾರದಲ್ಲಿ ಇರುವ ರಾಜ್ಯಗಳಲ್ಲಿ ತಮ್ಮ ಸರ್ಕಾರಗಳನ್ನು ತರಲು ರಾಜ್ಯ ಪಾಲರ ಅಧಿಕಾರ ಮತ್ತು ತನಿಖಾ ಸಂಸ್ಥೆಗಲನ್ನು ದುರುಪಯೋಗ ಪಡಿಸಿಕೊಂಡು ಹಕ್ಕುಗಳನ್ನು ದಮನ ಮಾಡುತ್ತಿದೆ.

ಸಮ್ಮೇಳನದಲ್ಲಿ ಭೂಮಿ ಕಾರ್ಮಿಕರ ಪ್ರಶ್ನೆಗಳು , ಕೋಮುವಾದಿ ವಿಚಾರಗಳನ್ನು, , ಸಾಮಾಜಿಕ ಸಮಸ್ಯೆಗಳನ್ನು ಚರ್ಚಿಸಿ ಲಿದ್ದು ರಾಜ್ಯದ ಕಾಂಗ್ರೆಸ್ ಪಕ್ಷದ ಜನ ವಿರೊಧಿ ನೀತಿಗಳ ವಿರುದ್ಧ ಹೋರಾಟಗಳನ್ನು ನಡಸಲು , ರಾಜಕೀಯವಾಗಿ ಪಕ್ಷಬಲಗೊಳಿಸಲು. ಕಾರ್ಯಕ್ರಮಗಳನ್ನು ಮುಂದಿನ ಅಖಿಲ ಬಾರತ ಸಮ್ಮೇಳನ ಎಪ್ರಿಲ್ 2 ರಿಂದ 5ರ ವರಗೆ ತಮಿಳನಾಡು ರಾಜ್ಯ ಕಂಚಿಪುರಂ ನಲ್ಲಿ ಅಂತಿಮಗೊಳಿಸಲಿದೆಂದು ತಿಳಿಸಿದರು.

ಜ. 11, 12 ರಂದು ವಿಭಾಗ ಮಟ್ಟದ ತತ್ವಪದಕಾರರ ಸಮಾವೇಶ, ಭಜನಾ ಸ್ಪರ್ಧೆ

# ದೇಶಿ ಸಂಸ್ಕೃತಿ ಉಳಿಸಲು ಸಮಾವೇಶ ಆಯೋಜನೆ : ಬಸವರಾಜ ಧನ್ನೂರ



ಮಲ್ಲಮ್ಮ ನುಡಿ ವಾರ್ತೆ

ಬೀದರ್:ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗಿ ಸ್ವದೇಶಿ ಸಂಸ್ಕೃತಿ ಕಣ್ಮರೆಯಾಗುತ್ತಿರುವ ಇಂದಿನ ದಿನಗಳಲ್ಲಿ ಜನಪದ ಸಂಸ್ಕೃತಿ ಉಳಿಸಿ ಬೆಳೆಸುವ ಉದ್ದೇಶದಿಂದ 2025 ರ ಜ.11 ಮತ್ತು 12 ರಂದು ಇಲ್ಲಿಯ ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗ ಮಂದಿರಲ್ಲಿ ಕಲ್ಯಾಣ ಕರ್ನಾಟಕ ವಿಭಾಗ ಮಟ್ಟದ ತತ್ವಪದಕಾರರ ಸಮಾವೇಶ ಮತ್ತು ಭಜನಾ ಸ್ಪರ್ಧೆ ಆಯೋಜಿಸಲಾಗುವುದು ಕಲಾವಿದರು ಹೆಚ್ಚಿನ ಸಂಖ್ಯೆಯಲ್ಲಿ ಹೆಸರು ನೋಂದಾಯಿಸಿ ಸಮಾವೇಶದಲ್ಲಿ ಪಾಲ್ಗೊಳ್ಳಬೇಕೆಂದು ಸಮಾವೇಶದ ಸ್ವಾಗತ ಸಮಿತಿ ಅಧ್ಯಕ್ಷ ಬಸವರಾಜ ಧನ್ನೂರ ಇಲ್ಲಿ ಗುರುವಾರ ನುಡಿದರು.

ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಉದ್ದೇಶಿತ ಸಮಾವೇಶದ ವಿಸ್ತೃತ ವಿವರ ನೀಡಿದರುಲ. ಮೊದಲ ಬೆಳಿಗ್ಗೆ 10 ಗಂಟೆಗೆ ಸಮಾವೇಶದ ಉದ್ಘಾಟನೆ ನಡೆಯಲಿದೆ. ಇಡೀ ದಿನ ಕಲ್ಯಾಣ ಕರ್ನಾಟಕ ಭಾಗದ ತತ್ವಪದಕಾರರ ಸ್ಪರ್ಧೆ ಆಯೋಜಿಸಲಾಗುವುದು. ವಿಜೇತರಿಗೆ ಜ.12 ರಂದು ಮೊದಲನೇ ಬಹುಮಾನ ರೂ. 50 ಸಾವಿರ, ದ್ವಿತೀಯ ಬಹುಮಾನ ರೂ. 25 ಸಾವಿರ ಮತ್ತು ತೃತೀಯ ಬಹುಮಾನ 15 ಸಾವಿರ ರೂಪಾಯಿ ನೀಡಲಾಗುವದು ಒಟ್ಟು ಐದು ವಿಷಯಗಳ ಮೇಲೆ ತತ್ವಪದ ಹಾಡಲು ಅವಕಾಶ ನೀಡಲಾಗಿದ್ದು, ವಚನ ಸಾಹಿತ್ಯ, ಕಡಕೋಳ ಮಡಿವಾಳಪ್ಪನವರ ಹಾಡು, ಶಿಶುನಾಳ ಶರೀಫರ ಹಾಡುಗಳು, ಕನಕದಾಸರ ಮತ್ತು ಪುರಂದರದಾಸರ ತತ್ವಪದಗಳನ್ನು ಹಾಡಲು ಅವಕಾಶ ನೀಡಲಾಗಿದೆ. ಈ ಕಾರ್ಯಕ್ರಮಕ್ಕೆ ನಾಡಿನ ಪೂಜ್ಯರು, ಗಣ್ಯರು ಮತ್ತು ಕಲಾವಿದರನ್ನು ಆಹ್ವಾನ ನೀಡಲಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕರೆ ನೀಡಿದರು.

ಕಲ್ಯಾಣ ಕರ್ನಾಟಕ ಕಲಾವಿದರ ಒಕ್ಕೂಟದ ಅಧ್ಯಕ್ಷ ಹಾಗೂ ಜಾನಪದ ಅಕಾಡೆಮಿ ಸದಸ್ಯ ವಿಜಯ್ ಕುಮಾರ್ ಸೋನಾರೆ ಮಾತನಾಡಿ ಒಕ್ಕೂಟದಿಂದ ಈ ಸಮಾವೇಶ ಏರ್ಪಡಿಸಲಾಗಿದ್ದು, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಹಾಗೂ ಸಾಧಕರಿಗೆ ಸನ್ಮಾನ ಮಾಡಿ ಗೌರವಿಸಲಾಗುತ್ತಿದೆ. ಭಾಗವಹಿಸುವ ಕಲಾವಿದರ ತಂಡಗಳಿಗೆ 500 ರೂ.ಗಳ ನೋಂದಣಿ ಶುಲ್ಕವಿದ್ದು, ತಂಡಗಳು ಜ. 5ರ ಮುನ್ನ ಹೆಸರು ನೊಂದಣಿ ಮಾಡಿಕೊಳ್ಳಬೇಕು. ಸಮಾವೇಶದಲ್ಲಿ ಪಾಲ್ಗೊಳ್ಳುವ ಕಲಾವಿದರಿಗೆ ಸೂಕ್ತ ವಸತಿ ವ್ಯವಸ್ಥೆ ಹಾಗೂ ಭಜ್ಜಿ ರೊಟ್ಟಿ ಊಟದ ವ್ಯವಸ್ಥೆ ಮಾಡಲಾಗುತ್ತಿದೆ. ಎರಡು ದಿನ ಬೀದರ್ ನಗರರದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಲಿದೆ ಎಂದರು. ಒಕ್ಕೂಟದ ಕಾರ್ಯದರ್ಶಿ ಪ್ರಕಾಶ ಅಂಗಡಿ ಮಾತನಾಡಿ ತತ್ವಪದಕಾರರ ಸಮಾವೇಶ ಮತ್ತು ಭಜನಾ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಕಲಾವಿದರಿಗೆ ಕೆಲವು ನಿಯಮಗಳನ್ನು ನೀಡಿದ್ದು, ಚರ್ಮ ವಾದ್ಯ ಮತ್ತು ದೇಶಿ ವಾದ್ಯಗಳನ್ನೇ ನುಡಿಸಬೇಕು. ತಪ್ಪದೇ ಸಮವಸ್ತ್ರಗಳನ್ನು ಧರಿಸಬೇಕು. ವಿದೇಶಿ ವಾದ್ಯಗಳಿಗೆ ಅವಕಾಶವಿಲ್ಲ. ಹಾಡಲು ಸಮಯ ನಿಗದಿಗೊಳಿಸಲಾಗಿದೆ. ಕಲಾವಿದರಿಗೆ ವೇದಿಕೆ ಒದಗಿಸಿಕೊಟ್ಟು, ಅವರು ಹಾಡಿದ ತತ್ವಪದಗಳನ್ನು ಧ್ವನಿಯನ್ನು ವಿಡಿಯೋ ದಾಖಲಿಕರಣ ಮಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಪ್ರಚುರ ಪಡಿಸಲಾಗುವುದು. ಈ ಕಾರ್ಯಕ್ರಮಕ್ಕೆ ವಿವಿಧ ಅಕಾಡೆಮಿ ಅಧ್ಯಕ್ಷರಿಗೆ ಆಹ್ವಾನ ನೀಡಲಾಗುತ್ತಿದ್ದು, ರಾಜ್ಯಮಟ್ಟದ ತಜ್ಞ ಸಂಪನ್ಮೂಲ ವ್ಯಕ್ತಿಗಳನ್ನು ತೀರ್ಪುಗಾರರಾಗಿ ಆಹ್ವಾನಿಸಲಾಗುತ್ತಿದೆ ಎಂದು ಅಂಗಡಿ ತಿಳಿಸಿದರು. ಸಮಾವೇಶದ ಮಾಹಿತಿಯುಳ್ಳ ಕರಪತ್ರಗಳನ್ನು ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಲಾಯಿತು. ಅರವಿಂದ ಹಸಮಕಲ್, ಲಲಿತಾ ಲೋಕಾಪುರ, ಸುನೀಲ ಭಾವಿಕಟ್ಟಿ, ಭೀಮರಾಯ ಭಜಂತ್ರಿ, ದೇವಿದಾಸ ಚಿಮಕೋಡ, ಸಂಗಮೇಶ ಸೇರಿದಂತೆ ಒಕ್ಕೂಟದ ಪದಾಧಿಕಾರಿಗಳು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಕ್ರಿಸ್ಮಸ್ ಹಬ್ಬದ ಅಂಗವಾಗಿ ಕೇಕ್ ಮತ್ತು ಕ್ಯಾಲೆಂಡರ್ ವಿತರಣೆ

ಮಲ್ಲಮ್ಮ ನುಡಿ ವಾರ್ತೆ

ಬೀದರ:ಕ್ರಿಸ್ಮಸ್ ಹಬ್ಬದ ಅಂಗವಾಗಿ ಶಶಿಕಾಂತ ಪೊಲಿಸ ಪಾಟೀಲ್ ಚೌಳಿ ರವರ ಮಾರ್ಗದರ್ಶನ ಮೇರೆಗೆ ಪೊಲೀಸ ಪಾಟೀಲ ರವರ ಆಪ್ತ ಸಹಾಯಕರಾದ ಸುನೀಲ ಬಿ.ಕೆ., ಕಾರ್ಯಕರ್ತರಾದ ಪ್ರಭಾಕರ ಭೋಸ್ಲೆ, ಸುನೀಲ ಸಂಗಮ, ಸೇರಿದಂತೆ ಇನ್ನು ಅನೇಕ ಅಭಿಮಾನಿಗಳು ಕೂಡಿಕೊಂಡು ಜನವಾಡಾ ಹಾಗೂ ಮಾಳೆಗಾಂವ ಸರ್ಕಲ್ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ಚರ್ಚಗಳಿಗೆ (ದೇವಾಲಯಗಳಿಗೆ) ಭೇಟ್ಟಿ ನೀಡಿ ಬಹಳ ವಿಜೃಂಬಣೆಯಿಂದ ಈ ಸಂದರ್ಭದಲ್ಲಿ ಕೇಕ್ ಮತ್ತು ಕ್ಯಾಲೆಂಡರ್ ವಿತರಣೆ ಹಂಚಲಾಯಿತು.

ಈ ಸಂದರ್ಭದಲ್ಲಿ ಪ್ರತಿಯೊಂದು ಚರ್ಚ್ನಲ್ಲಿ ಪೊಲೀಸ ಪಾಟೀಲ ರವರ ಹೆಸರಿನಲ್ಲಿ ಪ್ರಾರ್ಥನೆ ಮಾಡುವ ಮುಖಾಂತರ ಮುಂಬರುವ ದಿನಗಳಲ್ಲಿ ಜನಸೇವೆ ಮಾಡಲು ಉನ್ನತ ಸ್ಥಾನಮಾನ ಸಿಗಲಿ ಎಂದು ಹಾಗೂ ಅವರ ಕುಟುಂಬಕ್ಕೆ ಸದಾ ಕಾಲ ದೇವರ ಆರ್ಶಿವಾದ ಇರಲಿ ಎಂದು ಪ್ರತಿಯೊಂದು ಚರ್ಚಿನ ಪಾಸ್ಟರ ರವರು ಪ್ರಾರ್ಥನೆ ಮುಖಾಂತರ ದೇವರಲ್ಲಿ ಪ್ರಾರ್ಥಿಸಲಾಯಿತು.

# ನೂತನ ಗಡ್ಡಿ ತೇರಿನ ಲೋಕಾರ್ಪಣೆ
## ಇಂದಿನಿಂದ ಕನ್ನೂರ ಸಿದ್ಧಲಿಂಗ ಶಿವಯೋಗಿಗಳ ಪುಣ್ಯಾರಾಧನೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.27– ವಿದ್ಯಾಗಿರಿಯ ಹೊಸ ಪ್ರವಾಸಿ ಮಂದಿರ ಎದುರಿಗಿರುವ ಶ್ರೀ ಸದ್ಗುರು ಸಮರ್ಥ ಸಚ್ಚಿದಾನಂದ ಶಿವಯೋಗಿ ಪುಣ್ಯಧಾಮ,ಪರಮಾರ್ಥ ನಿಕೇತನದಲ್ಲಿ ಡಿ.28 ರಿಂದ 30 ರವರೆಗೆ ಶ್ರೀ ಸದ್ಗುರು ಸಮರ್ಥ ಕನ್ನೂರ ಸಿದ್ಧಲಿಂಗ ಶಿವಯೋಗಿಗಳ ಪುಣ್ಯಾರಾಧನೆ ಸಪ್ತಾಹ ನಡೆಯಲಿದೆ.

28 ರಂದು ಸಾಯಂಕಾಲ 6 ಗಂಟೆಗೆ ಶ್ರೀ ವಿಶ್ವರಾಜೇಂದ್ರ ಮಹಾಸ್ವಾಮಿಗಳ ಅಮೃತ ಹಸ್ತದಿಂದ ವೀಣಾ ಪೂಜೆ ಹಾಗೂ ದಾಸಬೋಧ ಪೂಜೆಯೊಂದಿಗೆ ಸಪ್ತಾಹ ಪ್ರಾರಂಭವಾಗಲಿದೆ. ಡಿ 29 ರವಿವಾರ ಸಂಜೆ 7 ಗಂಟೆಗೆ ವಿಶ್ವರಾಜೇಂದ್ರಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಧರ್ಮಚಿಂತನಗೋಷ್ಠಿ ಹಾಗೂ ದಾಸ ಬೋಧವಾಚನ ಜರಗುವದು.

ಗದುಗಿನ ಶಶಿಧರ ಶಾಸ್ತ್ರಿಗಳು ಹಿರೇಮಠ ನೇತೃತ್ವವಹಿಸುವರು. ಇಲ್ಲಕಲ್ಲಿನ ಕೀರ್ತನಕೇಸರಿ ಪಂಚಾಕ್ಷರಿ ಶಾಸ್ತ್ರಿಗಳು ಉಪಸ್ಥಿತರಿರುವರು. ಡಿ.30 ಸೋಮವಾರ ಎಳ್ಳ ಅಮವಾಸೆಯ ಶುಭ ದಿನದಂದು ಧರ್ಮಸಭೆ ಪುಷ್ಪವೃಷ್ಠಿ ಹಾಗೂ ನೂತನ ಗಡ್ಡಿ ತೇರಿನ ಲೋಕಾರ್ಪಣೆಯಾಗಿ ಬೆಳಿಗ್ಗೆ 11 ಗಂಟೆಗೆ ರಥೋತ್ಸವ ಜರುಗುವುದು.

ಮೂರು ದಿನಗಳಂದು ವಿವಿಧ ಖ್ಯಾತ ಕಲಾಕಾರರಿಂದ ಭಜನೆ, ಖ್ಯಾತ ಗಾಯಕ ರವೀಂದ್ರ ಸೋರಗಾಂವಿ ಅವರಿಂದ ಸಂಗೀತ ಕಾರ್ಯಕ್ರಮ, ತುಲಾಭಾರ ಸೇವೆ ಹಾಗೂ ಮಹಾಪ್ರಸಾದ ಇರುವುದು. ತೆಲಂಗಾಣ, ಆಂಧ್ರ, ಗೋವಾ. ಮಹಾರಾಷ್ಟ್ರಗಳಿಂದ ಭಕ್ತ ಸಮೂಹ ಭಾಗವಹಿಸುವರು. ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀಗಳ ಕೃಪೆಗೆ ಪಾತ್ರರಾಗಬೇಕೆಂದು ಪುಣ್ಯಧಾಮದ ಪ್ರಕಟಣೆ ಕೋರಿದೆ.

# ಶಿರೂರಿನಲ್ಲಿ ಇಂದು ಅಯ್ಯಪ್ಪಸ್ವಾಮಿ ಮಹಾಪೂಜೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.27–ತಾಲೂಕಿನ ಶಿರೂರ ಪಟ್ಟಣದಲ್ಲಿ ಅಯ್ಯಪ್ಪಸ್ವಾಮಿ ಸನ್ನಿಧಾನದ ಮಾಲಾಧಾರಿಗಳಿಂದ ಡಿ.28 ಅಯ್ಯಪ್ಪಸ್ವಾಮಿ ಮಹಾಪೂಜೆ ಹಾಗೂ ಅಗ್ನಿಪೂಜೆ ನಡೆಯಲಿದೆ.

ಸ್ಥಳಿಯ ಸಿದ್ದೇಶ್ವರ ಪ್ರೌಢಶಾಲಾ ಮೈದಾನದಲ್ಲಿ ಶನಿವಾರ ಸಂಜೆ 8 ಗಂಟೆಗೆ ಮಹಾಪೂಜೆ ಜರುಗಲಿದ್ದು, ಹುಬ್ಬಳ್ಳಿಯ ಆರ್.ಕೃಷ್ಣಮೂರ್ತಿ ಅವರ ಸಾನಿಧ್ಯದಲ್ಲಿ ವಿವಿಧ ಗ್ರಾಮಗಳ ಗುರುಸ್ವಾಮಿಗಳ ನೇತೃತ್ವದಲ್ಲಿ ಎಲ್ಲ ಧಾರ್ಮಿಕ ಪೂಜಾ ಕೈಂಕರ್ಯಗಳು ನಡೆಯಲಿವೆ.



ಇದಕ್ಕೂ ಮೊದಲು ಸಿದ್ದೇಶ್ವರ ದೇವಸ್ಥಾನದ ಸನ್ನಿಧಾನದಿಂದ ಅಯ್ಯಪ್ಪಸ್ವಾಮಿ ಮಾಲಾಧಾರಿಗಳಿಂದ ಅಯ್ಯಪ್ಪಸ್ವಾಮಿ ಭಾವಚಿತ್ರದ ಮೆರವಣಿಗೆ ನಡೆಯಲಿದೆ. ಭಜನೆ, ಹಾಡುಗಳ ಮೂಲಕ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿ ಬರಲಿದ್ದು, ನಂತರ ಅನ್ನ ಸಂತರ್ಪಣೆ ನಡೆಯಲಿದೆ ಎಂದು ಅಯ್ಯಪ್ಪಸ್ವಾಮಿ ಭಕ್ತ ಸಮೂಹ ತಿಳಿಸಿದೆ.

# ಹೃದಯವಂತಿಕೆಯಿಂದ ಬದುಕುವದು ಮುಖ್ಯ –ಯಶವಂತರಾಯಗೌಡ



(ಪವನ ಕೊಡಹೊಪನ್ನ)

ಮಲ್ಲಮ್ಮ ನುಡಿ ವಾರ್ತೆ

ಇಂಡಿ: ಹೃದಯವಂತಿಕೆಯಿಂದ ನಮ್ಮ ಇಚ್ಛೆಗೆ ಅನುಗುಣವಾದ ಶಿಕ್ಷಣವನ್ನು ಆಯ್ಕೆ ಮಾಡಿಕೊಂಡು ಅದರಡಿ ಪ್ರಯತ್ನಿಸಿ ಯಶಸ್ಸು ಸಾಧಿಸಿ ಮಾದರಿ ವ್ಯಕ್ತಿಗಳಾಗಿ ಬದುಕಬೇಕೆಂದು ಶಾಸಕ ಯಶವಂತರಾಯಗೌಡ ಪಾಟೀಲರು ಹೇಳಿದರು.

ಪಟ್ಟಣದ ಸರಕಾರಿ ಪದವಿ ಮಹಾವಿದ್ಯಾಲಯದ ವಿವಿಧ ಚಟುವಟಿಕೆ ಉದ್ಘಾಟನಾ ಸಮಾರಂಭ ಮತ್ತು ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಮಾತನಾಡಿದರು.

ಇತಿಹಾಸ ನಿರ್ಮಾಣ ಮಾಡಲು ನಮ್ಮ ಪ್ರಯತ್ನ ಅವಶ್ಯಕ, ನಾಗರೀಕ ಸಮಾಜದ ಭಾಗವಾಗಿ ಸಮಾಜವಾದಿ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಮುಖ್ಯ ಅತಿಥಿ ಪ್ರಾಚಾರ್ಯ ಎಸ್.ಎಂ.ಉಪ್ಪಾರ, ಸಂಗಮೇಶ ಹಿರೇಮಠ,ಮಹಾವಿದ್ಯಾಲಯದ ಪ್ರಾಚಾರ್ಯ ರಮೇಶ ಆರ್.ಎಚ್, ಡಾ. ವಿಜಯಮಹಾಂತೇಶ ದೇವರ, ರವಿಕುಮಾರ ಅರಳಿ,ಎಸ್.ಎಚ್. ಓಲೇಕಾರ ಮಾತನಾಡಿದರು.

ಪ್ರಶಾಂತ ಕಾಳೆ, ಡಾ.ಎಸ್. ಜೆ.ಮಾಡ್ಯಾಳ,ಎಸ್.ಕೆ.ಲಿಂಗದಳ್ಳಿ,ರವಿ ಕಲ್ಲೂರ, ಲಿಂಬಾಜಿ ರಾಠೋಡ, ಜಹಾಂಗೀರ ಸೌದಾಗರ ವೇದಿಕೆಯ ಮೇಲಿದ್ದರು.

ಮಹಾವಿದ್ಯಾಲಯಕ್ಕೆ ಹೊಸದಾಗಿ ನೇಮಕಗೊಂಡ ಮತ್ತು ವರ್ಗಾವಣೆಗೊಂಡ ಸಹಾಯಕ ಪ್ರಾಧ್ಯಾಪಕರನ್ನು ನಂದಕುಮಾರ ಬಿರಾದಾರ ಸ್ವಾಗತಿಸಿದರು.

ಫೋಟೋ– 27 ಇಂಡಿ 02

ಇಂಡಿ ಪಟ್ಟಣದ ಸರಕಾರಿ ಪದವಿ ಮಹಾವಿದ್ಯಾಲಯದ ವಿವಿಧ ಚಟುವಟಿಕೆ ಉದ್ಘಾಟನಾ ಸಮಾರಂಭದಲ್ಲಿ ಶಾಸಕ ಯಶವಂತರಾಯಗೌಡ ಪಾಟೀಲರು ಮಾತನಾಡಿದರು.

# ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗಳ ಅಪೂರ್ಣ ಅರ್ಜಿಗಳನ್ನು ಪೂರ್ಣಗೊಳಿಸಲು ಜನವರಿ.5 ರವರೆಗೆ ಅವಕಾಶ

(ರಾಜಕುಮಾರ ಆರ್. ಹಡಪದ)

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:ಡಿ.27–ಹುಮನಾಬಾದ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಬರುವ ಹುಮನಾಬಾದ ತಾಲೂಕಿನಲ್ಲಿ ಖಾಲಿಯಿರುವ 13 ಅಂಗನವಾಡಿ ಕಾರ್ಯಕರ್ತೆ ಮತ್ತು 35 ಅಂಗನವಾಡಿ ಸಹಾಯಕಿ ಹುದ್ದೆಗಳಿಗೆ ಹಾಗೂ ಚಿಟಗುಪ್ಪ ತಾಲೂಕಿನಲ್ಲಿ ಖಾಲಿಯಿರುವ 16 ಅಂಗನವಾಡಿ ಕಾರ್ಯಕರ್ತೆ ಮತ್ತು 15 ಅಂಗನವಾಡಿ ಸಹಾಯಕಿ ಹುದ್ದೆಗಳಿಗೆ ಆನ್ಲೈನ್ ಮುಖಾಂತರ ಅರ್ಜಿ ಅಹ್ವಾನಿಸಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರೀಯೆಗೆ ಸಂಬಂಧಿಸಿದಂತೆ, ಅರ್ಜಿ ಸಲ್ಲಿಸುವ 4 ಹಂತಗಳು ಪೂರ್ಣಗೊಳಿಸದೇ ಇರುವ ಹುಮನಾಬಾದ ತಾಲೂಕಿನ ಅಂಗನವಾಡಿ ಕಾರ್ಯಕರ್ತೆ ಹುದ್ದೆಯ 315 ಹಾಗೂ ಸಹಾಯಕಿಯರ ಹುದ್ದೆಯ 265 ಅಭ್ಯರ್ಥಿಗಳ ಅರ್ಜಿಗಳು ಹಾಗೂ ಚಿಟಗುಪ್ಪ ತಾಲೂಕಿನ ಅಂಗನವಾಡಿ ಕಾರ್ಯಕರ್ತೆ ಹುದ್ದೆಯ 212 ಹಾಗೂ ಸಹಾಯಕಿಯರ ಹುದ್ದೆಯ 108 ಅಭ್ಯರ್ಥಿಗಳು ಅರ್ಜಿಗಳು ಅಪೂರ್ಣಗೊಂಡಿದ್ದು, ಸದರಿ ಅಪೂರ್ಣ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಮಾತ್ರ ಡಿಸೆಂಬರ್ 26 ರಿಂದ ಜನವರಿ 5ರ ವರೆಗೆ ಅರ್ಜಿಗಳನ್ನು ಪೂರ್ಣಗೊಳಿಸಲು ವೆಬ್ ಸೈಟ್ನಲ್ಲಿ ಇಲಾಖೆಯಿಂದನೆ ಅವಕಾಶ ನೀಡಲಾಗಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹುಮನಾಬಾದ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಂಬಾರಾಯ ಅಷ್ಟಗಿ ಶೋಕ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.27: ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರು ನಿಧನ ಹೊಂದಿರುವ ಸುದ್ದಿಯು ಅತ್ಯಂತ ದುಃಖವನ್ನು ಉಂಟು ಮಾಡಿದೆ. ಆರ್ಥಿಕ ತಜ್ಞರಾಗಿ, ಪ್ರಧಾನ ಮಂತ್ರಿಯಾಗಿ ಹತ್ತು ವರ್ಷಗಳ ಕಾಲ ದೇಶವನ್ನು ಮುನ್ನಡೆಸಿದ್ದರು. ಅವರ ಅಗಲಿಕೆಯು ದೇಶಕ್ಕೆ ತುಂಬಲಾರದ ನಷ್ಟವುಂಟು ಮಾಡಿದೆ ಎಂದು ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಡಾ.ಅಂಬಾರಾಯ ಅಷ್ಟಗಿ ಅವರು ಕಂಬನಿ ಮಿಡಿದಿದ್ದಾರೆ.ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ, ಅವರ ಅಗಲಿಕೆಯ ದುಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ಹಾಗೂ ದೇಶವಾಸಿಗಳಿಗೆ ಭಗವಂತ ಕರುಣಿಸಲಿ ಎಂದು ಡಾ. ಅಂಬಾರಾಯ ಅಷ್ಟಗಿ ಪ್ರಾರ್ಥಿಸಿದ್ದಾರೆ



# ಇಂದು ಮಾರುತೇಶ್ವರ ಕಾರ್ತಿಕೋತ್ಸವ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.27–ತಾಲೂಕಿನ ಚೌಡಾಪುರ ಗ್ರಾಮದಲ್ಲಿ ಡಿ.28 ಶನಿವಾರ ಮಾರುತೇಶ್ವರ ದೇವರ ಕಾರ್ತಿಕೋತ್ಸವ ಜರುಗಲಿದೆ.



ಅಂದು ಮುಂಜಾನೆ ಮಾರುತೇಶ್ವರ ಮೂರ್ತಿಗೆ ಅಭಿಷೇಕ ಜರುಗಿ ಸಾಯಂಕಾಲ ದೀಪೋತ್ಸವದೊಂದಿಗೆ ಕಾರ್ತಿಕೋತ್ಸವ ನಡೆಯಲಿದೆ. ಡಿ.29 ಭಾನುವಾರ ಓಕುಳಿ ನಡೆಯಲಿದ್ದು, ಭಕ್ತರು ದೇವಸ್ಥಾನದ ಸುತ್ತ ಸುತ್ತುಗಾಯಿ ಒಡೆದು ಹರಿಕೆ ತೀರಿಸುತ್ತಾರೆ. ನಂತರ ಗ್ರಾಮದ ಅಗಸಿ ಬಳಿ ಸುಭಾಸ ಮೇಟಿ ಅವರಿಂದ ಜೋಗಮ್ಮನ ಕುಣಿತ ನಡೆಯಲಿದೆ.

ಭಾನುವಾರ ರಾತ್ರಿ 10.30 ಕ್ಕೆ ಸ್ಥಳೀಯ ಮಾರುತೇಶ್ವರ ನಾಟ್ಯ ಸಂಘದವರಿಂದ ರಮೇಶ ಬಡಿಗೇರ ವಿರಚಿತ 'ಹಳ್ಳಿ ಹುಲಿ ಕೊಟ್ಟ ಬೆಳ್ಳಿ ಕಾಲುಂಗುರ' ಅರ್ಥಾತ 'ರೈತನ ಕಣ್ಣೀರಿಗೆ ಆಸರೆ ಯಾರು' ನಾಟಕ ಪ್ರದರ್ಶನಗೊಳ್ಳಲಿದೆ.

ನಾಟಕದ ಉದ್ಘಾಟನಾ ಸಮಾರಂಭ ಗುಳೇದಗುಡ್ಡದ ಕಾಡಸಿದ್ದೇಶ್ವರ ಸ್ವಾಮೀಜಿ ಹಾಗೂ ಸೀತಿಮನಿಯ ಶ್ರದ್ಧಾನಂದಮಠದ ವಿಶಿಷ್ಟಮುನಿಗಳ ದಿವ್ಯ ಸಾನಿಧ್ಯದಲ್ಲಿ ನಡೆಯಲಿದ್ದು, ಸಂಗಮೇಶ ಬಿದರಿಕೋಟಿಮಠ ಉಪಸ್ಥಿತರಿರುವರು.

ಅಧ್ಯಕ್ಷತೆಯನ್ನು ಶಾಸಕ ಎಚ್. ವೈ.ಮೇಟಿ ಹಾಗೂ ರೇವಣಸಿದ್ದೇಶ್ವರ ಬ್ಯಾಂಕಿನ ಅಧ್ಯಕ್ಷ ಉಮೇಶ ಮೇಟಿ ವಹಿಸಲಿದ್ದು, ಮಾಜಿ ಜಿಪಂ ಅಧ್ಯಕ್ಷ ಬಸವಂತಪ್ಪ ಮೇಟಿ ಹಾಗೂ ಮಾಜಿ ಸದಸ್ಯ ಜಿ.ವಾಯ್.ಮೇಟಿ ಮತ್ತು ಜ್ಯೋತಿ ಬ್ಯಾಂಕಿನ ಅಧ್ಯಕ್ಷ ಎಂ.ಎಸ್.ನಾಡಗೌಡ ನಾಟಕ ಉದ್ಘಾಟಿಸುವರು.

# ಮನಮೋಹನಸಿಂಗ್ ದೂರದೃಷ್ಠಿಯ ನಾಯಕ–ಗಣ್ಯರ ಕಂಬನಿ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.27–ಮಾಜಿಪ್ರಧಾನ ಮಂತ್ರಿ ಡಾ.ಮನಮೋಹನಸಿಂಗ್ ನಿಧನಕ್ಕೆ ಜಿಲ್ಲೆಯಾದ್ಯಂತ ಅನೇಕ ನಾಯಕರು ಕಂಬನಿ ಮಿಡಿದಿದ್ದು, ಸಿಂಗ್ ಅವರು ತಮ್ಮ ದೂರ ದೃಷ್ಠಿಯಿಂದ ದೇಶವನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡಿದ ನಾಯಕ ಎಂದು ಬಣ್ಣಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಡಾ.ಮನಮೋಹನಸಿಂಗ್ ಅವರ ನಿಧನದಿಂದ ಇಡೀ ದೇಶಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಹೇಳಿದ್ದು, 10 ವರ್ಷಗಳ ತಮ್ಮ ನೇತೃತ್ವದ ಆಡಳಿತದಲ್ಲಿ ಹಲವು ಹೆಜ್ಜೆಗುರುತುಗಳ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಆಹಾರ ಭದ್ರತೆ, ಆಧಾರ ಕಾರ್ಡ, ನರೇಗಾ ಯೋಜನೆಗಳು ಸೇರಿ ಹಲವಾರು ಜನೋಪಯೋಗಿ ಯೋಜನೆಗಳು ಎಂದೆಂದಿಗೂ ಅಜರಾಮರವಾಗಿವೆ. ಮುತ್ಸದ್ದಿ ನಾಯಕನ ಸಾವು ನೋವುಂಟು ಮಾಡಿದೆ ಎಂದಿದ್ದಾರೆ.

ಶಾಸಕ ಎಚ್.ವಾಯ್.ಮೇಟಿ ಮಾಜಿ ಪ್ರಧಾನಿ ಡಾ.ಮನಮೋಹನಸಿಂಗ್ ಅವರು ದೇಶ ಕಂಡ ಅಪ್ರತಿಮ ಸಜ್ಜನ ರಾಜಕಾರಣಿ. ಅವರ ಆರ್ಥಿಕ ಚಿಂತನೆ ಇಡೀ ದೇಶವನ್ನು ಸುಭದ್ರತೆಯತ್ತ ಕೊಂಡೊಯಿತು. ಅವರ ಅಗಲುವಿಕೆಯಿಂದ ದೇಶ ಒಬ್ಬ ಶ್ರೇಷ್ಠ ರಾಜಕಾರಣಿ, ಆರ್ಥಿಕ ತಜ್ಞನನ್ನು ಕಳೆದುಕೊಂಡು ಬಡವಾಗಿದೆ ಎಂದು ಕಂಬನಿ ಮಿಡಿದಿದ್ದಾರೆ.

ಮಾಜಿ ಶಾಸಕ ವೀರಣ್ಣ ಚರಂತಿಮಠ, ಮನಮೋಹನಸಿಂಗ್ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ಮಾಜಿ ಪ್ರಧಾನಿ ಸಿಂಗ್ ಅವರು ದೇಶ ಕಂಡ ಅಪ್ರತಿಮ ಆರ್ಥಿಕ ತಜ್ಞರು, ಉದಾರೀಕರಣ ಮತ್ತು ಜಾಗತೀಕರಣದ ಮೂಲಕ ರಾಷ್ಟ್ರದ ಅರ್ಥ ವ್ಯವಸ್ಥೆಗೆ ಹೊಸ ಭಾಷ್ಯೆ ಬರೆದವರು. ಅವರ ನಿಧನದಿಂದ ದೇಶಕ್ಕೆ ತುಂಬಲಾರದ ನಷ್ಟವಾಗಿದೆ ಎಂದಿದ್ದಾರೆ.

ಮಾಜಿ ಸಚಿವ ಎಸ್.ಆರ್.ಪಾಟೀಲ ಡಾ.ಸಿಂಗ್ ಅವರ ನಿಧನದಿಂದ ಇಡೀ ರಾಷ್ಟ್ರಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ದೂರದೃಷ್ಟಿತ್ವದ ಫಲವಾಗಿ ದೇಶ ಆರ್ಥಿಕ ಬಿಕ್ಕಟ್ಟಿನಿಂದ ಹೊರಬಂದಿದೆ. ಅವರ ಚಿಂತನೆ, ಯೋಜನೆಗಳು ಮಾದರಿಯಾಗಿವೆ. ದೇವರು ಅವರ ಕುಟುಂಬದವರಿಗೆ ದು:ಖ ಸಹಿಸಿಕೊಳ್ಳುವ ಶಕ್ತಿ ನೀಡಲಿ, ಪರಮಾತ್ಮ ಸಿಂಗ್ ಅವರಿಗೆ ಚಿರಶಾಂತಿ ನೀಡಲಿ ಎಂದಿದ್ದಾರೆ.

ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ, ಮಾಜಿ ಪ್ರಧಾನಿ ಮನಮೋಹನಸಿಂಗ್ ಅವರ ಆಡಳಿತ ಇತಿಹಾಸದಲ್ಲಿ ಹೆಜ್ಜೆ ಗುರುತಾಗಿ ಉಳಿದಿದೆ. ಶ್ರೇಷ್ಠ ಆರ್ಥಿಕ ತಜ್ಞರಾಗಿದ್ದ ಅವರು, ದೇಶದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಿ ಜನಾನುರಾಗಿಯಾಗಿದ್ದಾರೆ. ಅವರ ನಿಧನದಿಂದ ದೇಶಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಸಂತಾಪ ವ್ಯಕ್ತಪಡಿಸಿದ್ದಾರೆ.

# ಘತ್ತರಗಾ ಭಾಗ್ಯವಂತಿ ದೇವಾಲಯ ಹುಂಡಿ ಎಣಿಕೆ ಪೂರ್ಣ:65 ಲಕ್ಷ ನಗದು, 200 ಗ್ರಾಂ ಚಿನ್ನಾಭರಣ ಸಂಗ್ರಹ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ. 27: ಜಿಲ್ಲೆಯ ಅಫಜಲಪುರ ತಾಲೂಕಿನ ಘತ್ತರಗಾ ಭಾಗ್ಯವಂತಿ ದೇವಾಲಯದ ಹುಂಡಿ ತೆರೆದು ಭಕ್ತರು ಕಾಣಿಕೆ ರೂಪದಲ್ಲಿ ಸಲ್ಲಿಸಿದ್ದ ನಗದು ಸೇರಿದಂತೆ ಇತರೆ ಕಾಣಿಕೆಗಳ ಎಣಿಕೆ ಪ್ರಕ್ರಿಯೆ ಗುರುವಾರ ನಡೆಯಿತು.

ಇತ್ತೀಚೆಗೆ ಭಾಗ್ಯವಂತಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಪ್ರಭಾರ ಅಧಿಕಾರ ಸ್ವೀಕರಿಸಿದ ಕೆ.ಕೆ. ಆರ್.ಡಿ.ಬಿ ಅಧೀನ ಕಾರ್ಯದರ್ಶಿ ಪ್ರಕಾಶ ಕುದರಿ ಸಮ್ಮುಖದಲ್ಲಿ ದೇವಾಲಯದ ಹುಂಡಿಗಳನ್ನು ತೆರೆಯಲಾಯಿತು. ಸಿಸಿಟಿವಿ ಕ್ಯಾಮೆರಾ ಕಣ್ಗಾವಲಿನಲ್ಲಿ ನಡೆದ ಎಣಿಕೆ ವೇಳೆ ರೂ. 65,05,814 ನಗದು ಹಾಗೂ 150–200 ಗ್ರಾಂ ಅಂದಾಜು ಚಿನ್ನಾಭರಣ, ಮತ್ತು ಒಂದು ಕಿಲೋಗ್ರಾಂ ಬೆಳ್ಳಿ ಕಾಣಿ–ಕೆಯಾಗಿ ಭಕ್ತರು ಸಲ್ಲಿಸಿದ್ದಾರೆ ಎಂದು ಪ್ರಕಾಶ ಕುದರಿ ತಿಳಿಸಿದ್ದಾರೆ.

ಇದೇವೇಳೆ, ಹುಂಡಿಯಲ್ಲಿ ಗಯಾನಾ ದೇಶದ ರೂ.100 ಡಾಲರ್ ಮುಖಬೆಲೆಯ ಐದು ನೋಟುಗಳು ಪತ್ತೆಯಾಗಿವೆ ಎಂದು ಅವರು ಮಾಹಿತಿ ನೀಡಿದ್ದಾರೆ. ಮತ್ತೊಂದೆಡೆ, ಗುರುವಾರ ಕೇವಲ ನೋಟು ಮತ್ತು ಚಿನ್ನ ಬೆಳ್ಳಿ ಆಭರಣಗಳನ್ನು ಮಾತ್ರ ಎಣಿಕೆ ಮಾಡಲಾಗಿದೆ. ನಾಣ್ಯಗಳನ್ನು ಒಳಗೊಂಡ ಇನ್ನೂ ಏಳು ಹುಂಡಿಗಳ ಎಣಿಕೆ ನಡೆಯಬೇಕಿದೆ. ಇದಕ್ಕಾಗಿ ಅನುಮತಿ ಕೋರಿ ಮತ್ತೊಮ್ಮೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗುವುದು ಎಂದಿದ್ದಾರೆ.

**ಅತ್ತೆ ಸಾವಿಗೂ ಕೋರಿ ಹರಕೆ !**

ಈ ಮಧ್ಯೆ ಘತ್ತರಗಾ ಭಾಗ್ಯವಂತಿ ದೇವಿ ಗುಡಿಯ ಹುಂಡಿಯ ರೂ. 20 ಮುಖಬೆಲೆಯ ನೋಟಿನ ಮೇಲೆ ಭಕ್ತರೊಬ್ಬರು "ತಾಯಿ ನಮ್ಮ ಅತ್ತೆ ಸಾಯಬೇಕು ತಾಯಿ " ಎಂದು ಲಿಖಿತವಾಗಿ ಬೇಡಿಕೆ ಸಲ್ಲಿಸಿದ್ದಾರೆ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಾಶ ಕುದರಿ ತಿಳಿಸಿದ್ದಾರೆ.

# ರಾಂಪೂರ ಪಿಕೆಪಿಎಸ್‌ಗೆ ಅವಿರೋಧ ಆಯ್ಕೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.27–ತಾಲೂಕಿನ ರಾಂಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ನೂತನ ಆಡಳಿತ ಮಂಡಳಿಯ ಎಲ್ಲ 12 ನಿರ್ದೇಶಕ ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆದಿದೆ.

12 ಸ್ಥಾನಗಳಿಗೆ ಒಟ್ಟು 34 ನಾಮಪತ್ರಗಳು ಸಲ್ಲಿಕೆಯಾಗಿದ್ದು, ಡಿ.23 ನಾಮಪತ್ರ ಹಿಂದಕ್ಕೆ ಪಡೆಯಲು ಕೊನೆಯ ದಿನವಾಗಿದ್ದು ಅಂ–ದು 22 ಜನ ತಮ್ಮ ನಾಮಪತ್ರ ವಾಪಸ್ಸು ಪಡೆದದ್ದರಿಂದಾಗಿ ಅವಿರೋಧ ಆಯ್ಕೆ ನಡೆಯಿತು ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ಸಾಮಾನ್ಯ ಸಾಲಗಾರರ 5 ಸ್ಥಾನಗಳಿಗೆ ಯಮನಪ್ಪ ಗ್ಯಾನಪ್ಪ ಮೇಟಿ, ರಮೇಶ ಪರಸಪ್ಪ ಮೇಟಿ, ಹನಮಗೌಡ ಅಖಂಡಪ್ಪಗೌಡರ, ಹನಮಂತ ಭೀರಪ್ಪ ಕೊಳ್ಳಾರ ಹಾಗೂ ಬಸಪ್ಪ ಸಿದ್ದಪ್ಪ ಮುತ್ತತ್ತಿ ಆಯ್ಕೆಯಾದರೆ, ಪರಿಶಿಷ್ಟ ಜಾತಿಯ ಸ್ಥಾನಕ್ಕೆ ಬಲರಾಮ ಖೇಮಪ್ಪ ಲಮಾಣಿ, ಪರಿಶಿಷ್ಟ ಪಂಗಡದ ಸ್ಥಾನಕ್ಕೆ ಶಿವಲಿಂಗಪ್ಪ ದುಂಡಪ್ಪ ಹಡಗಲಿ ಆಯ್ಕೆಯಾದರು.

ಹಿಂದುಳಿದ 'ಅ' ವರ್ಗದಿಂದ ತಮ್ಮಾಸಾಹೇಬ ಪಾಟೀಲ, ಹಿಂದುಳಿದ 'ಬ' ವರ್ಗದಿಂದ ರಾಮಪ್ಪ ಸಿದ್ದಪ್ಪ ಮೊಕಾಶಿ, ಮಹಿಳಾ ಕ್ಷೇತ್ರದಿಂದ ಶರಣಮ್ಮ ಕಲ್ಲಪ್ಪ ಕುಂಬಾರ ಹಾಗೂ ಲಕ್ಷ್ಮೀಬಾಯಿ ಬಸಪ್ಪ ವಾಲಿಕಾರ ಮತ್ತು ಸಾಲೇತರ ಕ್ಷೇತ್ರದಿಂದ ಚಂದ್ರಶೇಖರ ದೇನಪ್ಪ ಚವ್ಹಾಣ ಅವಿರೋಧವಾಗಿ ಆಯ್ಕೆಯಾಗಿದ್ದಾ–ರೆ ಎಂದು ಚುನಾವಣಾಧಿಕಾರಿ ಸಂಜಯ ಲಾಳಗೆ, ಸಹಾಯಕ ಚುನಾವಣಾಧಿಕಾರಿ ರವಿ ಕೆಂಚನ್ನವರ ತಿಳಿಸಿದ್ದಾರೆ. ಪಿಕೆಪಿಎಸ್ ಮುಖ್ಯ ಕಾರ್ಯನಿರ್ವಾಹಕ ಎ.ಜೆ. ದೇಶಪಾಂಡೆ ಇದ್ದರು.

# ಸತ್ಯಾತ್ಮತೀರ್ಥ ಸ್ವಾಮೀಜಿ ಕಾರ್ಯಕ್ರಮ ಸಂಪನ್ನ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.27– ಉತ್ತರಾದಿಮಠಾಧೀಶರಾದ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರು ಬಾಗಲಕೋಟೆಯಲ್ಲಿ ಕೈಗೊಂಡಿ–ದ್ದ ಐದು ದಿನಗಳ ಕಾರ್ಯಕ್ರಮ ಶುಕ್ರವಾರ ಸಂಪನ್ನಗೊಂಡಿತು.



ಶ್ರೀಗಳ ಸುವರ್ಣ ಮಹೋತ್ಸವದ ಪ್ರಯುಕ್ತ ಬಾಗಲಕೋಟೆ ದಿಗ್ವಿ–ಜಯ ಕಾರ್ಯಕ್ರಮ ಹಮ್ಮಿಕೊಂಡು ಐದು ದಿನಗಳ ಕಾಲ ಶ್ರೀಮೂಲ ರಾಮದೇವರು, ದಿಗ್ವಿಜಯ ರಾಮದೇವರ ಪೂಜೆ, ಪ್ರವಚನ, ತಪ್ತ ಮುದ್ರಧಾರಣೆ, ತೀರ್ಥ ಪ್ರಸಾದದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ನಿತ್ಯ ಸಹಸ್ರಾರು ಭಕ್ತರು ಶ್ರೀಗಳಿಂದ ಆಶೀರ್ವಾದ ಪಡೆದರು.

ವಿದ್ಯಾಗಿರಿ ವಿಪ್ರಮಠ, ನವನಗರದ ಶ್ರೀಉತ್ತರಾದಿಮಠ, ಗದ್ದನಕೇರಿ, ಬಾಗಲಕೋಟೆಯ ಶ್ರೀಕೊತ್ತಲೇಶ ದೇವಸ್ಥಾನವೂ ಸೇರಿದಂತೆ ವಿವಿಧ ಶ್ರೀಗಳ ಸಾಮೂಹಿಕ ಪಾದಪೂಜೆಗೆ ಅವಕಾಶ ಮಾಡಿಕೊಡಲಾಗಿತ್ತು.

ಮೊದಲ ದಿನ ಶ್ರೀರಾಮದೇವರ ಯಾತ್ರೆಕೈಗೊಂಡ ನಂತರ ಶ್ರೀಮಠದಲ್ಲಿ ಪ್ರವಚನ ಮರುದಿನದಿಂದ ಬವಿವ ಸಂಘದ ಬಿಇಸಿ ಸಭಾಂಗಣದಲ್ಲಿ ಶ್ರೀಗಳ ಪ್ರವಚನ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಶ್ರೀಗಳಿಗೆ ಬಾಗಲಕೋಟೆ ಭಕ್ತವೃಂದದಿಂದ ದೇಣಿಗೆಯನ್ನು ಸಂಗ್ರಹಿಸಿ ಸಮರ್ಪಿಸಲಾಯಿತು.

ಗುರುವಾರ ಏಕಾದಶಿ ಹಿನ್ನೆಲೆಯಲ್ಲಿ ರಾಮದೇವರ ಪೂಜೆ, ತಪ್ತ ಮುದ್ರಧಾರಣೆ, ಸಂಜೆ ಪ್ರವಚನದ ನಂತರ ರಾತ್ರಿ ಅನಂತ ಕುಲಕರ್ಣಿ ನೇತೃತ್ವದಲ್ಲಿ ನವನಗರದ ಶ್ರೀಮಠದಲ್ಲಿ ಅಖಂಡ ಭಜನೆ ಜರುಗಿತು. ಶ್ರೀಗಳು ಉಪಸ್ಥಿತರಿದ್ದು, ದಾಸರ ಪದಗಳಿಗೆ ತಲೆದೂಗಿದರು. ನಂತರ ನಸುಕಿನ ಜಾವ 5 ಗಂ–ಟೆಗೆ ಮೂಲರಾಮದೇವರ ಪೂಜೆ ಆರಂಭಿಸಿದರು. ದ್ವಾದಶಿ ಪ್ರಯುಕ್ತ ಬೆಳಗ್ಗೆಯೇ ತೀರ್ಥಪ್ರಸಾದದ ವ್ಯವಸ್ಥೆ ಕಲ್ಪಿಸಲಾಗಿತ್ತು.

ನಂತರ ಶ್ರೀಗಳು ಕಮತಗಿ, ಅಮೀನಗಡ ಹಾಗೂ ಹುನಗುಂದದಲ್ಲಿ ಭಕ್ತರನ್ನು ಆಶೀರ್ವದಿಸಿ ಮೈಸೂರಿನ ಕಡೆಗೆ ಪ್ರಯಾಣ ಬೆಳೆಸಿದರು. ರಘೋತ್ತಮಾಚಾರ್ಯ ನಾಗಸಂಪಿಗೆ, ಭೀಮಸೇನಾಚಾರ್ಯ ಪಾಂಡುರಂಗಿ, ಬಿಂದುಮಾಧವಾಚಾರ್ಯ ನಾಗಸಂಪಿಗೆ, ಪಂಡಿತರು, ಸಮಾಜದ ಮುಖಂಡರ ನೇತೃತ್ವದಲ್ಲಿ ಐದು ದಿನಗಳ ಅದ್ಧೂರಿ ಕಾರ್ಯಕ್ರಮ ಜರುಗಿ ಶುಕ್ರವಾರ ಸಂಪನ್ನಗೊಂಡಿತು.

## ದಲಿತಪರ ಸಂಘಟನೆಗಳ ಪೂರ್ವಭಾವಿ ಸಭೆ,
# ಡಿ,31 ರಂದು ಶಹಾಪುರ ಬಂದ್ ನಿರ್ಧಾರ, 10 ಸಾವಿರ ಜನ ನೀರೀಕ್ಷೆ!



(ಮಲ್ಲಿಕಾರ್ಜುನ್ ಮಳಿಕೇರಿ)

ಮಲ್ಲಮ್ಮ ನುಡಿ ವಾರ್ತೆ

ಶಹಾಪುರ,ಸಂಸತ್ ಭವನದಲ್ಲೆ ವಿಶ್ವರತ್ನ ಡಾ,ಬಾಬಾಸಾಹೇಬ ಅಂಬೇಡ್ಕರವರನ್ನು ಅವಮಾನಿಸಿ ಮಾತನಾಡಿದ, ಕೊಮುವಾದಿ ಕೇಂದ್ರ ಗ್ರಹಮಂತ್ರಿ ಅಮೀತ ಶಾಹಾರವರನ್ನು ಕೇಂದ್ರ ಮಂತ್ರಿ ಮಂಡಲದಿಂದ ವಜಾಗೊಳಿಸಬೆಕು, ಸಾರ್ವತ್ರಿಕ ಕ್ಷಮೆ ಯೋಚಿಸಿಬೆಕು ಎಂದು ಆಗ್ರಹಿಸಿ, ಶಹಾಪುರ ದಲಿತಪರ ಸಂಘಟನೆಗಳ ಆಶ್ರೆಯದಲ್ಲಿ, ಡಿ,31ರಂದು ಶಹಾಪುರ, ಬಂದ್ ಕರೆ ನೀಡಿದರು, ಸುಮಾರು 10 ಸಾವಿರಕ್ಕೂ ಅಧಿಕ ಪ್ರಗತಿಪರ ಸಂಘಟನೆಗಳು ಮತ್ತು ದಲಿಪರ ಸಂಘಟನೆಗಳ ಮುಖಂಡರು ಕಾರ್ಯಕರ್ತರು ಭಾಗವಹಿಸುವ ನೀರೀಕ್ಷೆ ಹೊಂದಲಾಗಿದೆ,ಎಂದು ಮುಖಂಡರು ವಿವರಿಸಿದರು,ಅವರು ನಗರದ ಪ್ರವಾಸಿ ಮಂದಿರದಲ್ಲಿ ಪೂರ್ವ ಭಾವಿ ಸಭೆಯಲ್ಲಿ, ಈ ನಿರ್ಧಾರ ಕುರಿತು ಮಾತನಾಡಿದರು.ಈ ಸಭೆಯಲ್ಲಿ ಭಾಗವಹಿಸಿದ್ದ ಹಿರಿಯ ಮುಖಂಡರಾದ ಮಲ್ಲಿಕಾರ್ಜುನ ಪೂಜಾರಿಯವರು ಮಾತನಾಡಿ,ದೇಶದ ಆರ್ಥಿಕ ತಜ್ಞ,ಮಾಜಿ ಪ್ರಧಾನಿ ಮನಮೋಹನಸಿಂಗ್ ರವರ ನಿಧನದಿಂದ ಭಾರತ ದೇಶ ಓರ್ವ ಅತ್ಯುತ್ತಮ ವಾಗ್ಮಿಯನ್ನು ಕಳೆದುಕೊಂಡಿದ್ದು ಅವರ ಆತ್ಮ–ಕ್ಕೆ ಚೀರ ಶಾಂತಿ ಸಿಗಲೆಂದು ಆಶಿಸಿ ಮಾತನಾಡುತ್ತಾ, ವಿಶ್ವದಲ್ಲೆ ಡಾ,ಬಾಬಾಸಾಹೇಬರು ಅತ್ಯಂತ ಸರ್ವ ಶ್ರೇಷ್ಟ ಸಂವಿಧಾನ ಶಿಲ್ಪಿಯಾಗಿದ್ದಾ–ರೆ, ಪ್ರಜಾಪ್ರಭುತ್ವವನ್ನು ಜಾರಿಗೆ ತಂದು ಅಮೀತ ಶಾಹರನ್ನು ಕೇಂದ್ರ ಮಂತ್ರಿ ಸ್ಥಾನಮಾನ ನೀಡಿದ್ದು, ಡಾ,ಬಾಬಾಸಾಹೇಬರ ಸಂವಿಧಾನ ಎನ್ನುವದನ್ನು ಮರೆತು ಮಾತನಾಡಿದ ಜಾತಿವಾದಿ, ಶಾರನ್ನು ಕೂಡಲೆ ಸಂಪುಟದಿಂದ ವಜಾಗೊಳಿಸಬೆಕು ಎಂದರು, ರೈತ ಮುಖಂಡರಾದ ಚೆನ್ನಪ್ಪ ಆನೆಗುಂದಿ ಮಾತನಾಡಿ,ಕೇಂದ್ರದ ಬಿಜೆಪಿ ಸರ್ಕಾರ ಧಾರ್ಮಿಕ ಹೆಸರಿನಲ್ಲಿ ಮುನುವಾದನ್ನು ಜಾರಿಗೆ ತರುವ ಉನ್ನಾರದಲ್ಲಿದ್ದಾರೆ. ಸಂವಿಧಾನ ಬದಲಾವಣೆ ಮಾಡುವದರಲ್ಲಿ ಕೇಂದ್ರ ಸರ್ಕಾರ ಸಂಕಲ್ಪ ಹೊಂದಿದೆ , 10 ವರ್ಷಗಳಲ್ಲಿ ಆರ್ಥಿಕ ಅವ್ಯಸ್ಥೆ ಹದಗೆಟ್ಟಿದೆ ಎಂದರು,ಕೆ,ಆರ್,ಡಿಎಸ್,ಎಸ್. ಯಾದಗಿರಿ ಜಿಲ್ಲಾ ಸಂಚಾಲಕರಾದ ಶಿವುಪುತ್ರ ಜವಳಿ ಮಾತನಾಡಿ, ದೇಶದಲ್ಲಿ ಪ್ರಜಾಪ್ರಭುತ್ವದ ವ್ಯವಸ್ಥೆಯ ದಿಕ್ಕನ್ನು ತಪ್ಪಿಸುವಲ್ಲಿ ಅಮೀತ ಶಾ ಸಂಪುಟ ಮುಂದಾಗಿದ್ದು, ಪ್ರಗತಿಪರ ಸಂಘಟನೆಗಳು ಒಂದಾಗಿ ಹೋರಾಟದಲ್ಲಿ ಪಾಲ್ಗೊಳ್ಳಬೇಕು ಎಂದು ಅವರು ಕರೆ ನೀಡಿದರು,ಎಸ್,ಎಸ್,ಡಿ, ಜಿಲ್ಲಾಧ್ಯಕ್ಷರಾದ ಮಾಹಾದೇವ ದಿಗ್ಗಿ, ಎಸ್,ಡಿ,ಪಿಐ ಮುಖಂಡ ಸೈಯದ್ ಕಾಲಿದ, ಟಿಪ್ಪಿಸುಲ್ತಾನ ಸಂಘಟನೆ ಅಧ್ಯಕ್ಷರಾದ ಸೈಯಿದ್ ಖಾದ್ರಿ, ದಲಿತ ಮುಖಂಡರಾದ ಬಸವರಾಜ ಗುಡಿಮನಿ,ರಾಯಪ್ಪ ಸಾಲಿಮನಿ,ಅಬ್ದುಲ್ ಕಾದರ್ ಹಕ್ತೆರಿ ಸಾಹೇಬ್,ಅಮಾಜಾದ್ ಇಸ್ಲಾಂ ಜಾಮತೆ,ಮರೆಪ್ಪ ಕನ್ಯಾಕೊಳೂರ, ಮರೆಪ್ಪ ಕ್ರಾಂತಿ, ಚಂದ್ರಶೇಖರ ಗುತ್ತೆದಾರ,ಶರಣರಡ್ಡಿ ಹತ್ತಿಗೂಡೂರ, ಶಾಂತಪ್ಪ ಸಾಲಿಮನಿ,ಚಂದ್ರಕಾಂತ ಬಜೇರಿ, ಪರಶುರಾಮ ರೋಜಾ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಕಾರ್ಯಕರ್ತರು ಹಾಜರಿದ್ದರು,ದಲಿಪರ ಸಂಘಟನೆಗಳ ಮುಖಂಡರಾದ ಮರೆಪ್ಪ ಜಾಲಿಮಂಚಿ ಸರ್ವರನ್ನು ಸ್ವಾಗತಿಸಿ ವಂದಿಸಿದರು,ಈ ಸಭೆಯಲ್ಲಿ ಅಗಲಿದ ಮಾಜಿ ಪ್ರಧಾನಿ ಮನಮೋಹನಸಿಂಗಜೀಯವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಆರ್ಪಿಸಿ ಮೌನಾಚರಣೆ ಮಾಡಲಾಯಿತು,

# ಹಳ್ಳಕ್ಕೆ ನೀರು ಬಿಡುವಂತೆ ಆಗ್ರಹಿಸಿ ಕರವೇ ಪ್ರತಿಭಟನೆ

ಮಲ್ಲಮ್ಮ ನುಡಿ ವಾರ್ತೆ

ಔರಾದ :ಡಿ.27: ತಾಲೂಕಿನ ಏಕಂಬ, ಹಲ್ಯಾಳ, ಖಂಡೆಕೇರಿ, ಜಮಲಪೂರ ಕೆರೆಗಳ ನೀರು ಹಳ್ಳಕ್ಕೆ ಬಿಡುವ ಮೂಲಕ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಆಗ್ರಹಿಸಿ ಕನ್ನಡಪರ ಸಂಘಟನೆ ಕಾರ್ಯಕರ್ತರು ಹಾಗೂ ನಾರಾಯಣಪುರ, ಬಾದಲಗಾಂವ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

39 ನೇ ರಾಜ್ಯ ಮಟ್ಟದ ಪತ್ರಕರ್ತರ ಸಮ್ಮೇಳನ ನೋಂದಣಿ ಆ್ಯಪ್ ಬಿಡುಗಡೆ

# ಅರ್ಥಪೂರ್ಣ ಸಮ್ಮೇಳನವಾಗಿಸಲು ಶಿವಾನಂದ ತಗಡೂರು ಕರೆ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ತುಮಕೂರಿನಲ್ಲಿ ನಡೆಯಲಿರುವ ರಾಜ್ಯ ಮಟ್ಟದ 39ನೇ ಪತ್ರಕರ್ತರ ಸಮ್ಮೇಳನಕ್ಕೆ ಆಗಮಿಸುವ ಪ್ರತಿನಿಧಿಗಳ ನೋಂದಣಿಗಾಗಿ ನೋಂದಣಿ ಆ್ಯಪ್ ನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶಿವಾನಂದ ತಗಡೂರು ಅವರು ಬಿಡುಗಡೆ ಮಾಡಿದರು.

ತುಮಕೂರಿನ ಪತ್ರಿಕಾ ಭವನದಲ್ಲಿ ನಡೆದ ಸಮ್ಮೇಳನದ ಪೂರ್ವಬಾವಿ ಸಭೆಯಲ್ಲಿ ಆ್ಯಪ್ ಬಿಡುಗಡೆ ಮಾಡಿ ಮಾತನಾಡಿದರು.

ಸಮ್ಮೇಳನದಲ್ಲಿ ಭಾಗವಹಿಸುವವರನ್ನು ಖಾತರಿಪಡಿಸಿಕೊಂಡು ಸೂಕ್ತ ವ್ಯವಸ್ಥೆ ಮಾಡಲು ಈ ಆ್ಯಪ್ ನೋಂದಣಿ ಮಾಡಲಾಗಿದೆ. ಕೂಡಲೇ ಇದರಲ್ಲಿ ಪತ್ರಕರ್ತರು ನೋಂದಣಿ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಜನವರಿ 18 ಮತ್ತು 19 ರಂದು ತುಮಕೂರಿನ ಶ್ರೀ ಸಿದ್ಧಾರ್ಥ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ನಡೆಯಲಿದ್ದು ಇದರ ಯಶಸ್ವಿಗೆ ಎಲ್ಲಾ ಪತ್ರಕರ್ತರು ಒಗ್ಗಟ್ಟಿಂದ ಕೆಲಸ ಮಾಡುವಂತೆ ಕರೆ ನೀಡಿದರು.

ಈ ಹಿಂದೆ ಮೈಸೂರು, ಮಂಗಳೂರು, ಕಲಬುರಗಿ, ವಿಜಯಪುರ ಮತ್ತು ದಾವಣಗೆರೆಯಲ್ಲಿ ನಡೆದ ಸಮ್ಮೇಳನಗಳು ಒಂದೊಂದು ವಿಭಿನ್ನವಾಗಿ ನಡೆದು ಮೈಲಿಗಲ್ಲು ಸ್ಥಾಪಿಸಿವೆ. ಈ ಬಾರಿ ಕಲ್ಪತರು ನಾಡಿನಲ್ಲಿ ನಡೆಯುವ ಈ ಸಮ್ಮೇಳನ ಇತಿಹಾಸದಲ್ಲಿ ದಾಖಲಾಗುವಂತೆ ಅರ್ಥಪೂರ್ಣವಾಗಿ ನಡೆಸಬೇಕೆಂದು ಸಲಹೆ ನೀಡಿದರು.

ಸಮ್ಮೇಳನಕ್ಕೆ ಈ ಬಾರಿ ಐದಾರು ಸಾವಿರ ಪತ್ರಕರ್ತರು ಬರುವ ನಿರೀಕ್ಷೆ ಇದ್ದು ಊಟ ವಸತಿಗೆ ಯಾವುದೇ ತೊಂದರೆಯಾಗದಂತೆ ಈಗಿನಿಂದಲೇ ಜವಾಬ್ದಾರಿಯಿಂದ, ಎಚ್ಚರ ವಹಿಸಲು ಸೂಚಿಸಿದರು.

ಇದೇ ಸಂದರ್ಭದಲ್ಲಿ ವಿವಿಧ ಉಪ ಸಮಿತಿಗಳು ಇಲ್ಲಿಯವರೆಗೆ ತೆಗೆದುಕೊಂಡ ಕ್ರಮವನ್ನು ಖುದ್ದು ಪರಿಶೀಲಿಸಿ ಸಲಹೆ ಸೂಚನೆ ನೀಡಿದರು. ವಿವಿದ ಸಮಿತಿಗಳ ಅಧ್ಯಕ್ಷರುಗಳಿಗೆ ತಾವು ಕೈಗೊಳ್ಳಬೇಕಾದ ಮಾಹಿತಿ ಪುಸ್ತಕವನ್ನು ವಿತರಿಸಿದರು.

ಕೆಯುಡಬ್ಲ್ಯೂಜೆ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ, ರಾಜ್ಯ ಕಾರ್ಯದರ್ಶಿ ಸೋಮಶೇಖರ ಕೆರಗೋಡು ಅವರು ಮಾತನಾಡಿ, ಯಾವುದೇ ಕೊಂಕು ಮಾತುಗಳಿಗೆ ತಲೆಕೊಡಿಸಿಕೊಳ್ಳದೆ ಸಮ್ಮೇಳನ ಯಶಸ್ವಿಗೆ ಎಲ್ಲರು ದುಡಿಯಬೇಕೆಂದು ಮನವಿ ಮಾಡಿದರು. ಜಿಲ್ಲಾ ಸಂಘದ ಜಿಲ್ಲಾಧ್ಯಕ್ಷ ಪುರುಷೋತ್ತಮ್ ಇಲ್ಲಿಯವರೆಗೆ ಆಗಿರುವ ಕೆಲಸದ ಬಗ್ಗೆ ಮಾಹಿತಿ ಸಭೆಗೆ ನೀಡಿದರು.

ರಾಜ್ಯಸಂಘದ ಖಜಾಂಚಿ ವಾಸುದೇವ ಹೊಳ್ಳ, ಪ್ರಜಾ ಪ್ರಗತಿ ಪತ್ರಿಕೆ ಸಂಪಾದಕರಾದ ನಾಗಣ್ಣ, ತುಮಕೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಘುರಾಂ, ಹಿರಿಯ ಪತ್ರಕರ್ತರಾದ ಶಾಂತರಾಜು, ಡಿ.ಎಂ ಸತೀಶ್, ಸಮ್ಮೇಳನದ ಆಹಾರ ಸಮಿತಿ ಅಧ್ಯಕ್ಷರಾದ ಮಧುಕರ್ ಹಾಗೂ ತುಮಕೂರು ಜಿಲ್ಲಾ ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ಹಾಜರಿದ್ದರು.

ನಂತರ ರಾಜ್ಯ ಪತ್ರಕರ್ತರ ಸಮ್ಮೇಳನ ನಡೆಯುವ ಜಾಗವನ್ನು ಕೆಯುಡಬ್ಲ್ಯೂಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮತ್ತು ರಾಜ್ಯ ಪದಾಧಿಕಾರಿಗಳು ಪರಿಶೀಲಿಸಿದರು.

# ಹಾಲಹಿಪ್ಪರಗಾ ಗ್ರಾಮದಲ್ಲಿ ಯೂರಿಯಾ ಗೊಬ್ಬರ ತಿಂದು 15 ಆಡು ಸಾವು

(ಮಲ್ಲಪ್ಪಾ ಟಿ ಹಾಸಗೊಂಡ)

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಯೂರಿಯಾ ಗೊಬ್ಬರ ತಿಂದು ತಾಲ್ಲೂಕಿನ ಹಾಲಹಿಪ್ಪರಗಾ ಗ್ರಾಮದ ಕುರಿಗಾಹಿ ಗಣಪತರಾವ ನರಸಿಂಗರಾವ ಅವರಿಗೆ ಸೇರಿದ 15 ಆಡುಗಳು ಸಾವನ್ನಪ್ಪಿವೆ.

ಕಾಡು ಹಂದಿಗಳ ಉಪಟಳ ಹೆಚ್ಚಾದ ಹಿನ್ನೆಲೆಯಲ್ಲಿ ಹೊಲದಲ್ಲಿ ಯೂರಿಯಾ ಗೊಬ್ಬರ ಇಡಲಾಗಿತ್ತು. ಮಂಗಳವಾರ ರಾಶಿ ಮುಗಿದ ತೊಗರಿ ಹೊಲದಲ್ಲಿ ಆಡುಗಳನ್ನು ಮೇಯಲು ಬಿಟ್ಟಾಗ ಹೊಲದಲ್ಲಿದ್ದ ಯೂರಿಯಾ ಗೊಬ್ಬರ ತಿಂದು ಆಡುಗಳು ಅಸ್ವಸ್ಥಗೊಂಡಿದ್ದವು.



ಇದನ್ನು ಗಮನಿಸಿದ ಕುರಿಗಾಹಿ ಗಣಪತರಾವ್ ಅವರು, ಧನ್ನೂರ ಪಶುವೈದ್ಯ ಮಹಿಪಾಲಸಿಂಗ್ ಅವರಿಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ವೈದ್ಯರು ಬರುವಷ್ಟಲ್ಲಿ ಕೆಲ ಆಡುಗಳು ಸಾವನ್ನಪ್ಪಿದ್ದವು. ಇನ್ನು ಕೆಲವು ಚಿಕಿತ್ಸೆಗೆ ಸ್ಪಂದಿಸದೇ ಸಾವನ್ನಪ್ಪಿವೆ ಎಂದು ಕುರಿ ಮತ್ತು ಉಣ್ಣೆ ಉತ್ಪಾದಕ ಸಹಕಾರ ಸಂಘದ ಅಧ್ಯಕ್ಷ ಬಾಲಾಜಿ ಜಬಾಡೆ ತಿಳಿಸಿದರು.

ಕುರಿ ನಿಗಮದ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಅನುಗ್ರಹ ಯೋಜನೆ ಅಡಿಯಲ್ಲಿ ತಲಾ ರೂ.5000 ತಕ್ಷಣ ಮಂಜೂರು ಮಾಡುತ್ತೇವೆ ಎಂದು ತಿಳಿಸಿದ್ದಾರೆ.

# ಅಖಿಲ ಭಾರತ ವಿಶ್ವ ವಿದ್ಯಾಲಯ ನೌಕರರ ಒಕ್ಕೂಟದಿಂದ ಪ್ರತಿಭಟನೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 27 :– ಶಿವಮೊಗ್ಗದಲ್ಲಿರುವ ಕುವೆಂಪು ವಿಶ್ವವಿದ್ಯಾಲಯದ ಬೋಧಕೇತರ ನೌಕರ ಸಂಘದ ಅಧ್ಯಕ್ಷರಾದ ಶ್ರೀನಿವಾಸ್ ರವರು, ಉದ್ಯೋಗಿಗಳ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಧರಣಿ ಸತ್ಯಾಗ್ರಹ ಹೂಡಿದ್ದರು. ಇದನ್ನು ವಿವಿ ಆಡಳಿತವು ಸಹಿಸದೆ ವಿನಾಕಾರಣ ಅಮಾನತ್ತುಗೊಳಿಸಿರುವುದು ಹಾಗೂ ಧರಣಿಯಲ್ಲಿ ಪಾಲ್ಗೊಂಡ ಬೋಧಕೇತರ ನೌಕರರನ್ನು ವರ್ಗಾವಣೆಗೊಳಿಸಿರುವುದು ಖಂಡನೀಯವಾಗಿದ್ದು ಕಾನೂನು ಬಾಹಿರವಾಗಿದೆ ಎಂದು ಅಖಿಲ ಭಾರತ ವಿಶ್ವ ವಿದ್ಯಾಲಯಗಳ ನೌಕರರ ಒಕ್ಕೂಟದ ರಾಷ್ಟ್ರೀಯ ಕಾರ್ಯಕಾರೀ ಸಮಿತಿ ಸದಸ್ಯ ವೀರಭದ್ರಪ್ಪ ಉಪ್ಪಿನ್ ರವರು ಆಕ್ರೋಶ ವ್ಯಕ್ತಪಡಿಸಿದರು. ಸದರಿ ಕ್ರಮದ ಬಗ್ಗೆ, ಇಂದು ಬೀದರ್ ಪಶುವೈದ್ಯಕೀಯ ವಿಶ್ವ ವಿದ್ಯಾಲಯದಲ್ಲಿ ಪ್ರತಿಭಟನಾ ದಿನವನ್ನು ಆಚರಿಸಲಾಯಿತು.

ಬೋಧ ಕೇತರ ನೌಕರ ಸಂಘದ ಅಧ್ಯಕ್ಷರ ಅಮಾನತ್ತನ್ನು ರದ್ದುಗೊಳಿಸುವುದು ಹಾಗೂ ಬೋಧಕೇತರ ಸಿಬ್ಬಂದಿಗಳ ವರ್ಗಾವಣೆಯನ್ನು ರದ್ದುಗೊಳಿಸುವಂತೆ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ, ಗೌರವಾನ್ವಿತ ರಾಜ್ಯಪಾಲರು, ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಪಶು ವಿ ವಿ ಯ ಕುಲಸಚಿವರ ಮೂಲಕ ಮನವಿಯನ್ನು ಸಲ್ಲಿಸಲಾಯಿತು ಎಂದು ಉಪ್ಪಿನ ರವರು ತಿಳಿಸಿದರು. ಮಾನ್ಯ ಕುಲಸಚಿವರಾದ ಡಾ ಪೀ. ಟಿ.ರಮೇಶ್ ಮನವಿಯನ್ನು ಸ್ವೀಕರಿಸಿದರು.

ಕುಲಪತಿಗಳ ಹಿರಿಯ ಆಪ್ತ ಕಾರ್ಯ ದರ್ಶಿ ಗ್ರೇಡ್ 1 ನಾಗಭೂಷಣ ಹುಗ್ಗೆ, ಕುಲಸಚಿವರ ಹಿರಿಯ ಆಪ್ತ ಕಾರ್ಯದರ್ಶಿ ಗ್ರೇಡ್ 1 ನಾಗೇಂದ್ರ, ವೈದ್ಯರಾಜ ಹಳ್ಳಿಖೇಡ್, ಸಹಾಯಕ ರವಿ ಶಿರ್ಮ, ಸಚಿನ, ವರದಾ ರಾಜಪ್ಪ, ಶರಣಪ್ಪ ಖೇಡಕರ, ಶಿವಾಜಿ, ಸಾವನ, ಗುರು ಸಿದ್ದ ಸ್ವಾಮಿ ಮುಂತಾದವರು ಹಾಜರಿದ್ದರು.

# ಮಾದಕಾಂಶಯುಕ್ತ ಔಷಧಗಳ ಅಕ್ರಮ ಮಾರಾಟ: ಇಬ್ಬರ ಬಂಧನ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 27 :– ಮಾದಕ ದ್ರವ್ಯದ ಅಂಶವಿರುವ ಔಷಧಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಆರೋಪದಲ್ಲಿ ಇಬ್ಬರನ್ನು ಬಂಧಿಸಿರುವ ಗಾಂಧಿಗಂಜ್ ಠಾಣೆಯ ಪೊಲೀಸರು, ಇಬ್ಬರನ್ನು ಬಂಧಿಸಿದ್ದಾರೆ.

ಬಂಧಿತರಿಂದ ಲಕ್ಷಾಂತರ ರೂ. ಮೌಲ್ಯದ ಮಾದಕಾಂಶಯುಕ್ತ ಔಷಧ(ನಾರ್ಕೊಟಿಕ್ ಡ್ರಗ್ಸ್) ಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸ್ ಪ್ರಕಟನೆಯಲ್ಲಿ ತಿಳಿಸಲಾಗಿದೆ.

ದಿ. 26ರಂದು ನಗರದ ಹಾರೂರಗೇರಿ–ಲಾಡಗೇರಿ ರಸ್ತೆಯಲ್ಲಿ ಒಬ್ಬ ವ್ಯಕ್ತಿ ಅನಧಿಕೃತವಾಗಿ ಯಾವುದೇ ಪರವಾನಿಗೆ ಇಲ್ಲದೇ ಮಾದಕಾಂಶಯುಕ್ತ ಗುಳಿಗೆ ಮತ್ತು ಸಿರಪ್ ಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿಯನ್ನು ಅನುಸರಿಸಿ ದಾಳಿ ನಡೆಸಿದ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಂಧಿತರಿಂದ ಹಾಗೂ ಅವರ ಮನೆಗಳಲ್ಲಿದ್ದ 52,150 ರೂ. ಮತ್ತು 1,29,973 ರೂ. ಮೌಲ್ಯದ ಗುಳಿಗೆ ಮತ್ತು ಸಿರಪ್ಗಳು ಜಪ್ತಿ ಮಾಡಲಾಗಿದೆ. ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪೊಲೀಸ್ ಅಧೀಕ್ಷಕ ಪ್ರದೀಪ್ ಗುಂಟಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕ–1 ಮಹೇಶ್ ಮೇಘಣ್ಣವರ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ–2 ಚಂದ್ರಕಾಂತ್ ಪೂಜಾರಿ, ಪೊಲೀಸ್ ಉಪಾಧೀಕ್ಷಕರು ಹುಮನಾಬಾದ್ ಜಿ.ಎಸ್ ನ್ಯಾಮೇಗೌಡರ್ ಮಾರ್ಗದರ್ಶನದಲ್ಲಿ ಗಾಂಧಿಗಂಜ್ ಪೊಲೀಸ್ ಠಾಣೆ ಪಿಎಸ್ಐ ಹನುಮರೆಡ್ಡೆಪ್ಪ, ಸಹಾಯಕ ಔಷಧ ನಿಯಂತ್ರಕರ ಕಚೇರಿಯ ಎಡಿಸಿ ಧನಂಜಯ್, ಹಾಗೂ ಗಾಂಧಿ ಗಂಜ್ ಪೊಲೀಸ್ ಠಾಣೆಯ ಸಿಬ್ಬಂದಿ ಈ ಕಾರ್ಯಾಚರಣೆ ನಡೆಸಿದ್ದಾರೆ.

# ಡಾ. ಮನಮೋಹನ್ ಸಿಂಗ್ ನಿಧನಕ್ಕೆ ಸುಬೇದಾರ ಕಂಬನಿ

(ಮಲ್ಲಿಕಾರ್ಜುನ್ ಮಳಿಕೇರಿ)

ಮಲ್ಲಮ್ಮ ನುಡಿ ವಾರ್ತೆ



ಶಹಾಪೂರ: ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರು ನಿಧನ ಹೊಂದಿರುವ ಸುದ್ದಿಯು ಅತ್ಯಂತ ದುಃಖವನ್ನು ಉಂಟು ಮಾಡಿದೆ. ಆರ್ಥಿಕ ತಜ್ಞರಾಗಿ, ಪ್ರಧಾನ ಮಂತ್ರಿಯಾಗಿ ಹತ್ತು ವರ್ಷಗಳ ಕಾಲ ದೇಶವನ್ನು ಮುನ್ನಡೆಸಿದ್ದರು. ಅವರ ಅಗಲಿಕೆಯು ದೇಶಕ್ಕೆ ತುಂಬಲಾರದ ನಷ್ಟವುಂಟು ಮಾಡಿದೆ ಎಂದು ಬಿಜೆಪಿ ಯುವ ಮುಖಂಡ ಕರಣ ಸುಬೇದಾರ ಅವರು ಕಂಬನಿ ಮಿಡಿದಿದ್ದಾರೆ.

ಈ ಕುರಿತು ಪತ್ರಿಕಾ ಪ್ರಟಕಣೆ ಹೊರಡಿಸಿರುವ ಅವರು ಡಾ. ಮನಮೋಹನ್ ಸಿಂಗ್ ಅವರ ಬದುಕು , ಆರ್ಥಿಕ ನೀತಿಗಳು ನಮ್ಮೆಗೆಲ್ಲ ಪ್ರೇರಣೆ ಹಾಗೂ ಸ್ಪರ್ತಿ ನೀಡುತ್ತಿದೆ. ದಿರ್ಘಾವಧಿಯವರೆಗೆ ಅಧಿಕಾರದಲ್ಲಿದ್ದರೂ ಅತ್ಯಂತ ಸರಳ, ವಿನಯವಂತರಾಗಿದ್ದ ಶ್ರೀಯುತರು ದೇಶದ ಗೌರವಯುತ ವ್ಯಕ್ತಿಯಾಗಿದ್ದರು. ಇಂದು ಅವರು ನಮ್ಮನ್ನು ಅಗಲಿದ್ದು, ಭಾರತ–ಕ್ಕೆ ಆದ ದೊಡ್ಡ ನಷ್ಟ. ಅವರ ಸಾವಿನ ದು:ಖವನ್ನು ಭರಿಸುವ ಶಕ್ತಿಯನ್ನು ಕುಟುಂಬ ರ್ಗದವರಿಗೆ, ಅಭಿಮಾನಿ ಬಳಗ ಭಗವಂತ ನೀಡಲಿ ಎಂದು ಸ್ಮರಿಸುವುದಾಗಿ ಸುಬೇದಾರ ತಿಳಿಸಿದರು.

# ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅಗಲಿಕೆ ದೇಶಕ್ಕೆ ದೊಡ್ಡ ಹಾನಿ



ಮಲ್ಲಮ್ಮ ನುಡಿ ವಾರ್ತೆ

(ಮಲ್ಲಪ್ಪಾ ಟಿ ಹಾಸಗೊಂಡ)

ಭಾಲ್ಕಿ: ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅಗಲಿಕೆಯಿಂದ ದೇಶಕ್ಕೆ ಬಹುದೊಡ್ಡ ಹಾನಿಯುಂಟಾಗಿದೆ ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷ ಮಹಾಂತೇಶ ಪಾಟೀಲ್ ಹೇಳಿದರು.

ತಾಲೂಕಿನ ಭಾತಂಬ್ರಾ ಗ್ರಾಮದಲ್ಲಿ ಶುಕ್ರವಾರ ಆಯೋಜಿಸಿದ್ದ ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಭಾವಪೂರ್ಣ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮನಮೋಹನ ಸಿಂಗ್ ಅವರು ರಾಜಕೀಯ ವ್ಯಕ್ತಿ ಎನ್ನುವುದಕ್ಕಿಂತ ಹೆಚ್ಚಾಗಿ ಉತ್ತಮ ಆರ್ಥಿಕ ತಜ್ಞರಾಗಿದ್ದರು. ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಅವರ ಕೊಡುಗೆ ದೊಡ್ಡದಿದೆ. ಜತೆಗೆ ಎರಡು ಅವಧಿಗೆ ದೇಶದ ಪ್ರಧಾನಿಯಾಗಿ ದೇಶವನ್ನು ಸಮರ್ಥವಾಗಿ ಮುನ್ನಡಿಸಿದ್ದಾರೆ. ಅವರ ವಿಚಾರಧಾರೆಗಳು ನಮಗೆ ಸದಾಕಾಲ ಪ್ರೇರಣೆಯಾಗಿ ಉಳಿಯುತ್ತವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪಿಕೆಪಿಎಸ್ ಅಧ್ಯಕ್ಷ ಸತೀಶ ಬಿರಾದಾರ್, ಪ್ರಮುಖರಾದ ಶಂಕರ ಭೂರಾಳೆ, ಶಾಂತವೀರ ಕೇಸ್ಕರ್, ಕಾಶಿನಾಥ ಲದ್ದೆ, ಸುಭಾಷ ದಾಡಗೆ, ಶಿವಕುಮಾರ ಕಾಪಸೆ, ಶೀಲವಂತ ಭಂಡಾರೆ, ವೀರೇಶ ಭೂರಾಳೆ, ವೆಂಕಟ ಬಿರಾದಾರ್, ಅನಿಲ ದಾಡಗೆ, ಸಂತೋಷ ಭೂರಾಳೆ, ಇಸ್ತೇಕಾರ್, ಚಂದ್ರಕಾಂತ ಕುಟಮಲಗೆ, ನಾಗೇಶ ಟೋಕರೆ, ಮಹಾದೇವ ಭೂರೆ, ಪುನಿತ್ ಸೀತಾ, ವಿಶ್ವಜೀತ ವಿಚಾರೆ, ಶಿವಕುಮಾರ ಸೋನಾರ ಸೇರಿದಂತೆ ಹಲವರು ಇದ್ದರು.


# ಕಾಂಗ್ರೆಸ್ ಯಾವಾಗಲೂ ಅಂಬೇಡ್ಕರ್ ವಿರೋಧಿ:ನಮೋಶಿ ಆರೋಪ

ಮಲ್ಲಮ್ಮ ನುಡಿ ವಾರ್ತೆ



ಕಲಬುರಗಿ,ಡಿ.27–ಯಾವ ಕಾಂಗ್ರೆಸ್ ಪಕ್ಷ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ನಿರಂತರವಾಗಿ ಅಗೌರವ, ಅವಮಾನ ಮಾಡಿದೆಯೋ ಅದೇ ಕಾಂಗ್ರೆಸ್ ಪಕ್ಷ ಈಗ ಅವರ ಹೆಸರಿನ ಮೇಲೆ ರಾಜಕೀಯ ಮಾಡುತ್ತಿದೆ. ಕಾಂಗ್ರೆಸ್ ಪಕ್ಷ ಯಾವಾಗಲೂ ಅಂಬೇಡ್ಕರ್ ವಿರೋಧಿಯಾಗಿತ್ತು ಎಂದು ವಿಧಾನ ಪರಿಷತ್ ಸದಸ್ಯ ಶಶೀಲ್ ಜಿ.ನಮೋಶಿ ಆರೋಪಿಸಿದರು.

# ತಾ.ಪಂ. ಕಚೇರಿಯಲ್ಲಿ ಕಂಪ್ಯೂಟರ ಆಪರೇಟರ ದಿನಾಚರಣೆ



(ಪರಮೇಶ ರಾಂಪುರೆ)

ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಪಟ್ಟಣದ ತಾಲೂಕ ಪಂಚಾಯತ ಕಛೇರಿಯಲ್ಲಿ ಗುರುವಾರ ಕಂಪ್ಯೂಟರ ಆಪರೇಟರ ದಿನಾಚರಣೆ ನಿಮಿತ್ತ ಎಲ್ಲಾ ಗ್ರಾ.ಪಂ. ಡಾಟಾ ಆಪರೇಟರಗಳನ್ನು ಕಾರ್ಯ ನಿರ್ವಾಹಕ ಅಧಿಕಾರಿ ಮಾಣಿಕರಾವ ಪಾಟೀಲ ಅವರು ಸನ್ಮಾನಿಸಿ ಗೌರವಿಸಿದ್ದರು.

ನಂತರ ಮಾತನಾಡಿ, ಪಂಚಾಯತ ಕಾರ್ಯಾಲಯದ ಎಲ್ಲಾ ದಾಖಲೆಗಳನ್ನು ಡಿಜಿಟಲಿಕರ ಮಾಡಿ ತಮ್ಮ ಸೇವೆಯನ್ನು ನೀಡುತ್ತಿರುವ ಎಲ್ಲಾ ಆಪರೇಟರಗಳನ್ನು ಗೌರವಿಸುವ ಸಲುವಾಗಿ ಡಿ.26 ರಂದು ಕಂಪ್ಯೂಟರ ಆಪರೇಟರ ದಿನಾಚರಣೆ ಮಾಡಲಾಗುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲೂಕ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ಹನುಮಂತರಾಯ್ಯ ಕೌಟಗೆ, ಕಂಪ್ಯೂಟರ ಆಪರೇಟರಗಳಾದ ಮಲ್ಲೇಶ ಪಾರ, ವಿವೇಕ ಮಠಪತಿ, ರಾಜಕುಮಾರ ಹಾಲಕುಡೆ, ಸಾಗರ ದೇಶಮುಖ, ಮಹೇಶ, ಭಗವಾನ, ಸದಾಶಿವ ಸೇರಿದಂತೆ ಎಲ್ಲಾ ಆಪರೇಟರಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.



(ವರದಿ:ಪರಮೇಶ ರಾಂಪುರೆ)

ಕಮಲನಗರ: ಡಾ. ಚನ್ನಬಸವ ಪಟ್ಟದ್ದೇವರ 135ನೇ ಜಯಂತೋತ್ಸವ ಕಾರ್ಯಕ್ರಮ ನಿಮಿತ್ತ ನಡೆದ ಭಾವಚಿತ್ರ ಮೆರವಣಿಗೆಯಲ್ಲಿ ದಿ ಗೋಲ್ಡನ ವ್ಯಾಲಿ ಇಂಟರ್ನ್ಯಾಷನಲ ಸ್ಕೂಲ'ನ ಮಕ್ಕಳ ನೃತ್ಯ ನೋಡುಗರ ಗಮನ ಸೆಳೆಯಿತು. ಈ ಸಂದರ್ಭದಲ್ಲಿ ಜಾತ್ರಾ ಸಮಿತಿ ಅಧ್ಯಕ್ಷ ಪ್ರಕಾಶ ಟೋಣ್ಣೆ, ಸುಭಾಶ ಮಿರ್ಚೆ, ಗ್ರಾ.ಪಂ. ಸದಸ್ಯ ಸಂತೋಷ ಬಿರಾದಾರ ಹಾಗೂ ಬಾಲಾಜಿ ತೆಲಂಗ, ಮಡಿವಾಳಪ್ಪ ಮಹಾಜನ, ಪ್ರಭುರಾವ ಕಳಸೆ, ಮಹಾದೇವ ಮಡಿವಾಳ ಸೇರಿದಂತೆ ಅನೇಕರು ಇದ್ದರು. (ಮಲ್ಲಮ್ಮ ನುಡಿ ಚಿತ್ರ).

# ಯುವಕರ ನಡೆ ಸಂವಿಧಾನ ಕಡೆ ವಿಶೇಷ ಉಪನ್ಯಾಸ ಹಾಗೂ ಚೇತನ ಶ್ರೀ ಪ್ರಶಸ್ತಿ ಪ್ರದಾನ.

(ವರದಿ. ಡಿ. ಕೆ. ಪ್ರಹ್ಲಾದ.)

ಮಲ್ಲಮ್ಮ ನುಡಿ ವಾರ್ತೆ



ಬಸವಕಲ್ಯಾಣ :– ಹುಲಸೂರು ತಾಲೂಕಿನ ಬೇಲೂರ್ ಶರಣ ಉರಿಲಿಂಗಪೆದ್ದಿ ಮಠ ಟ್ರಸ್ಟ ಹಾಗೂ ಶರಣ ಉರಿಲಿಂಗಪೆದ್ದಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ಆಶ್ರಯದಲ್ಲಿ ಯುವಕರ ನಡೆ ಸಂವಿಧಾನ ಕಡೆ ವಿಶೇಷ ಉಪನ್ಯಾಸ ಚೇತನ ಸಿರಿ ಪ್ರಶಸ್ತಿ ಪ್ರದಾನ ಸನ್ಮಾನ ಸಮಾರಂಭ ಕಾರ್ಯಕ್ರಮವನ್ನು ಮುಚಳಂಬ ಗ್ರಾಮದ ಭೀಮನಗರದಲಿ ದಿನಾಂಕ 29 – 12 – 2024 ರಂದು ಬೆಳಿಗ್ಗೆ 11.ಗಂಟೆಗೆ ನಡೆಯಲಿದೆ. ಈ ಕಾರ್ಯಕ್ರಮದ ಸಾನಿಧ್ಯ ಬೇಲೂರಿನ ಉರಿಲಿಂಗ ಪೆದ್ದಿ ಮಠದ ಪೂಜ್ಯ ಶ್ರೀ ಪಂಚಾಕ್ಷರಿ ಮಹಾಸ್ವಾಮಿಜಿ. ನೇತ್ರತ್ವ ದೇವರಗುಡ್ಡದ ಅಮಾತೇಶ್ವರ ಮಠದ ಪೂಜ್ಯ ಶ್ರೀ ಬಸವರಾಜ ಸ್ವಾಮಿ. ಮುಚಳಂಬ ಶಾಖಾ ಮಠದ ಉರಿಲಿಂಗಪೆದ್ದಿ ಪೂಜ್ಯ ಶ್ರೀ ಚಿದಾನಂದ ಸ್ವಾಮಿಜಿ. ಉದ್ಘಾಟನೆ ಕಲಬುರ್ಗಿಯ ಹಿರಿಯ ಸಾಹಿತಿಗಳಾದ ಡಾ. ಗವಿಸಿದಪ್ಪಾ ಪಾಟೀಲ. ವಿಶೇಷ ಉಪನ್ಯಾಸಕರಾದ ಕಲಬುರ್ಗಿಯ ಸರ್ಕಾರಿ ಸ್ವಾಯತ್ತ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ಶ್ರೀಮಂತ ಹೊಳಕರ್. ಅಧ್ಯಕ್ಷತೆ ಗ್ರಾಮದ ಪಂಚಾಯತ ಅಧ್ಯಕ್ಷೆ ಸೋನಿಯಾ ಸಿದ್ಧಾರೂಢ ಪಾಟೀಲ್. ಗಾ. ಪಂ. ಅಭಿವೃದ್ಧಿ ಅಧಿಕಾರಿ ಅರ್ಜುನ ಶಿಂಧೆ. ಸ್ವಾಗತ /ಪ್ರಾಸ್ತಾವಿಕ ತಿಪುರಾಂತಿನ ಉರಿಲಿಂಗ ಪೆದ್ದಿ ಶಾಖಾಮಠದ ಪೂಜ್ಯ ಶ್ರೀ ಮಹಾಲಿಂಗ ದೇವರು. ಹಾಗೂ ಚೇತನ ಸಿರಿ ಪ್ರಶಸ್ತಿ ಪುರಸ್ಕೃತರಾದ ಹುಲಸೂರಿನ ತಹಸೀಲ್ದಾರ ಶಿವಾನಂದ ಮೇತೆಣಟಿಜಜಜಿಟಿಜಜ. ಬಸವಕಲ್ಯಾಣ ನಗರ ಪೊಲೀಸ್ ಠಾಣೆಯ ಸಿ. ಪಿ. ಐ. ಅಲಿಸಾಬ. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಸಿದ್ದವೀರಯ್ಯ ರುದ್ನೂರ್. ಸಮಾಜ ಕಲ್ಯಾಣ ಇಲಾಖೆ ದೀಲಿಪ ಕುಮಾರ್ ಉತ್ತಮ. ನಗರಸಭೆಯ ಪೌರಾಯುಕ್ತ ರಾಜು ಡಿ ಬಣಕಾರ್ . ಮಕ್ಕಳ ಅಭಿವೃದ್ಧಿ ಇಲಾಖೆ ಡಾ. ಗೌತಮ ಶಿಂಧೆ. ಮುಡಬಿ ಪೊಲೀಸ್ ಠಾಣೆಯ ಪಿ. ಎಸ್. ಐ. ಕು. ಜಯಶ್ರೀ. ಹುಲಸೂರಿನ ಪೊಲೀಸ್ ಠಾಣೆಯ ಪಿ. ಎಸ್. ಐ. ಪಂಡಿತ ಎಂ. ಕಲಬುರ್ಗಿ ಕಿಧ್ವಾಯಿ ಆಸ್ಪತ್ರೆಯ ಪ್ರಥಮದರ್ಜೆ ಸಹಾಯಕರಾದ ಭೀಮಣ್ಣ ಭೈರಪ್ಪನೂರ್. ಕ್ಷೇತ್ರ ಸಮನ್ವಯಾಧಿಕಾರಿಗಳಾದ ಸಂಜೀವಕುಮಾರ ಕಾಂಗೆ. ಭಾಲ್ಕಿಯ ಮನೋಹರ ಹೊಳಕರ್. ದಾಸೋಹಿಗಳು ಹುಲಸೂರಿನ ತಾ. ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಾದ ವೈಜನಾಥ ಫೂಲೆ. ಸಂವಿಧಾನ ಪೀಠಿಕೆ ಓದು ಚೇತನ ಕುಮಾರ್ ರಾದು. ನಿರೂಪಣೆ ಸಂಜಿವಕುಮಾರ ನಡುಕರ. ವಂದನಾರ್ಪಣೆ ಗಣೇಶ್ ರಾಧು. ಹಾಗೂ ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಮಹಾಲಿಂಗ ದೇವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ನಿಧನಕ್ಕೆ : ಶರಣಬಸವ ಸಂತಾಪ

(ಮಲ್ಲಿಕಾರ್ಜುನ್ ಮಳಿಕೇರಿ)

ಮಲ್ಲಮ್ಮ ನುಡಿ ವಾರ್ತೆ



ಶಹಾಪುರ: ಮಾಜಿ ಪ್ರಧಾನ ಮಂತ್ರಿಗಳಾದ ಮನಮೋಹನ್ ಸಿಂಗ್ ಅವರ ನಿಧನದ ಸುದ್ದಿ ನಮ್ಮೆಲ್ಲರಿಗೂ ತೀವ್ರ ನೋವನ್ನುಂಟು ಮಾಡಿದೆ ಎಂದರು ಅವರ ನಿಧನಕ್ಕೆ ಕಾಂಗ್ರೆಸ್ ಯುವ ಮುಖಂಡರಾದ ಶರಣಬಸವ ಪೋಲಿಸ್ ಬಿರಾದಾರ ಸೈದಾಪುರ ಸಂತಾಪ ಸೂಚಿಸಿ ಮಾತನಾಡಿದ ಅವರು ಮನಮೋಹನ್ ಸಿಂಗ್ ರವರು ತಮ್ಮ ಶಾಂತ ಸರಳ ಸ್ವಭಾವ, ಆಳವಾದ ಜ್ಞಾನ ಮತ್ತು ಅಪ್ರತಿಮ ದೃಷ್ಟಿಕೋನದಿಂದ ದೇಶದ ಆರ್ಥಿಕತೆ ಹಾಗೂ ಆಡಳಿತವನ್ನು ಅತ್ಯಂತ ಎತ್ತರಕ್ಕೆ ಕೊಂಡೊಯ್ದಿದ್ದರು. ಮನಮೋಹನ್ ಸಿಂಗ್ ಅವರು ಆರ್ಥಿಕ ತಜ್ಞರಾಗಿ ಸಲ್ಲಿಸಿದ ಸೇವೆ ಜಾಗತಿಕ ಮಟ್ಟದಲ್ಲಿ ಭಾರತವನ್ನು ಎತ್ತರಕ್ಕೇರಿಸಿತ್ತು. ಅತ್ಯುತ್ತಮ ಅರ್ಥಶಾಸ್ತ್ರಜ್ಞರಾಗಿ, ಶಿಕ್ಷಣ ತಜ್ಞರಾಗಿ ಗುರುತಿಸಿಕೊಂಡಿದ್ದ ಮನಮೋಹನ್ ಸಿಂಗ್ ಅವರು ಜಾಗತಿಕ ಮಟ್ಟದ ಅತ್ಯುತ್ತಮ ಪ್ರಶಸ್ತಿಗಳನ್ನ ಕೂಡ ಪಡೆದಿದ್ದರು. ಸತತ 10 ವರ್ಷಗಳ ಕಾಲ ಭಾರತದ ದೇಶದ ಪ್ರಧಾನಿಯಾಗಿದ್ದ ಅವರು, ಈ ಹುದ್ದೆ ಅಲಂಕರಿಸಿದ ಸಿಖ್ ಸಮುದಾಯದ ಮೊದಲ ವ್ಯಕ್ತಿ ಎನಿಸಿದ್ದರು. ಅವರ ಕಾರ್ಯವೈಖರಿಯು ಪ್ರಜಾಪ್ರಭುತ್ವದ ಮಹತ್ವವನ್ನು ಮನವರಿಕೆ ಮಾಡಿಸುವಂತಿತ್ತು. ಪ್ರತಿಭಾವಂತರಾಗಿ, ಸದಾ ಜನಸಾಮಾನ್ಯರ ಆತ್ಮೀಯತೆಯನ್ನು ಕಾಪಾಡಿಕೊಂಡಿದ್ದರು.

ಈ ದುಃಖದ ಕ್ಷಣದಲ್ಲಿ, ಅವರ ಕುಟುಂಬ, ಸ್ನೇಹಿತರ ಹಾಗೂ ಅಭಿಮಾನಿಗಳ ದುಃಖದಲ್ಲಿ ನಾನು ಭಾಗಿಯಾಗಿದ್ದೇನೆ. ಅವರ ಸಾಧನೆ ಮತ್ತು ಮೌಲ್ಯಗಳು ಎಲ್ಲರ ಮನಸ್ಸಿನಲ್ಲಿ ಸದಾ ಜೀವಂತ. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್, ಆಧಾರ್ ಜಾರಿ, ಉದ್ಯೋಗ ಖಾತ್ರಿ, ಮಾಹಿತಿ ಹಕ್ಕು ಕಾಯ್ದೆ, ಅಮೆರಿಕ ಜೊತೆ ನಾಗರಿಕ ಪರಮಾಣು ಒಪ್ಪಂದ ಸೇರಿದಂತೆ ಹಲವು ಮಹತ್ವಪೂರ್ಣ ಯೋಜನೆಗಳು ಇವರ ಕಾಲದಲ್ಲಿ ಜಾರಿಯಾಗಿದ್ದವು ಎಂದರು ಅವರು ಕುಟುಂಬಕ್ಕೆ ದೇವರು ದುಃಖ ಭರಿಸುವ ಶಕ್ತಿ ನೀಡಲಿ ಎಂದು ಕಾಂಗ್ರೆಸ್ ಯುವ ಮುಖಂಡರಾದ ಶರಣಬಸವ ಪೋಲಿಸ್ ಬಿರಾದಾರ ಸೈದಾಪುರ್ ಹಾಗೂ ತಾಲೂಕಿನ ಕಾಂಗ್ರೆಸ್ ಪಕ್ಷದ ಮುಖಂಡರು ಇನ್ನಿತರರು ಸಂತಾಪ ಸೂಚಿಸಿದ್ದಾರೆ.

Printed, Published and Owned by : Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad - 585330.
Editor: Ramesh Reddy. Office Ph. No: +91 9449732000.